
ನವೆಂಬರ್ 3, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1957
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಚನ್ನಪಟ್ಟಣದಲ್ಲಿ ರಂಗೇರಿದ ಉಪ ಚುನಾವಣೆಯ ಅಖಾಡ....!

# ಸೈನಿಕ-ರೈಡರ್ ನಡುವಿನ ಕಾಳಗ!





## ಭಾವನ ಜೊತೆ ಅಕ್ರಮ ಸಂಬಂಧ ಪ್ರಶ್ನಿಸಿದ್ದಕ್ಕೆ ಗಂಡನನ್ನೇ ಕೊಂದಳು!





## ವಂಚಕನಿಗೆ ಬುದ್ಧಿವಾದ ಹೇಳಿದ ಸಮಾಜ ಸೇವಕನ ಕಗ್ಗೊಲೆ!

## ಬಾಲಕಿಯ ಹತ್ಯಾ'ಚಾರಿಗೆ ಜೀವಾವಧಿ ಶಿಕ್ಷೆ





## ಅಣ್ಣನ ಲವ್ವಿಡವ್ವಿಯಲ್ಲಿ ತಮ್ಮ ಬಲಿಪಶುವಾದ!

### ಸಿಸಿಬಿ ಎಸಿಪಿ ಮನೋಜ್‌ಕುಮಾರ್ ನಾಯಕ್ ನೇತೃತ್ವದ ಕಾರ್ಯಾಚರಣೆ...

# ಕಳೆದ 30 ವರ್ಷಗಳಿಂದ ತಲೆಮರೆಸಿಕೊಂಡು ತಿರುಗುತ್ತಿದ್ದ ಕೊಲೆ ಆರೋಪಿ ಜೋಸ್ ಕುಟ್ಟಿ ಕೊನೆಗೂ ಸಿಕ್ಕುಬಿದ್ದನು...

**ಮಂಗಳೂರಿನ ಸುರತ್ಕಲ್ ಪೊಲೀಸ್ ಠಾಣೆಯ ಸರಹದ್ದಿಯಲ್ಲಿ ನಡೆದ ಕೊಲೆ ಹಾಗೂ ಹಲ್ಲೆ ಪ್ರಕರಣದಲ್ಲಿನ ಆರೋಪಿಯೊಬ್ಬನು ಕಳೆದ ಸುಮಾರು 30 ವರ್ಷಗಳಿಂದ ಪೊಲೀಸರಿಗೆ ಸಿಗದೇ ತಲೆಮರೆಸಿಕೊಂಡು ಅಂಡಲೆಯುತ್ತಿದ್ದನು. ಪೊಲೀಸ್ ಕಮೀಷನರ್ ಅನುಪಮ ಅಗರ್‌ವಾಲ್, ಡಿಸಿಪಿಗಳಾದ ಸಿದ್ಧಾರ್ಥ ಗೋಯಲ್, ಬಿ.ಪಿ. ದಿನೇಶ್‌ಕುಮಾರ್ ಅವರ ನಿರ್ದೇಶನದಲ್ಲಿ ಸಿಸಿಬಿ ಘಟಕದ ದಾಢಸಿ ಎಸಿಪಿ ಮನೋಜ್ ಕುಮಾರ್ ನಾಯಕ್ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್ ಶ್ಯಾಮಸುಂದರ ಹೆಚ್.ಎಂ. ಮತ್ತು ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ತ್ರಿಪ್ಪುಳಿತ್ತುರಂ ಎಂಬಲ್ಲಿ ತಲೆಮರೆಸಿಕೊಂಡಿದ್ದ ಕೊಲೆ ಆರೋಪಿಯನ್ನು ಬಂಧಿಸಿ ನ್ಯಾಯಾಂಗದ ವಶಕ್ಕೆ ಒಪ್ಪಿಸಿರುವ ಘಟನೆ ಇದಾಗಿದೆ.**

✍ ಮನ್ನಾಪೂರ

ಪೊಲೀಸರು ತಮ್ಮ ಕರ್ತವ್ಯದಲ್ಲಿ ದಕ್ಷತೆ-ಪ್ರಾಮಾಣಿಕತೆ, ಶ್ರದ್ಧೆ-ಆಸಕ್ತಿ ಮತ್ತು ಚತುರತನ ಮೈಗೂಡಿಸಿಕೊಂಡರೆ ಸಾಕು. ಕ್ರಿಮಿಗಳು ಎಲ್ಲೇ ಅಡಗಿದ್ದರೂ ಅವರನ್ನು ಪತ್ತೆ ಮಾಡಿ ಹೆಡೆಮುರಿ ಕಟ್ಟುತ್ತಾರೆ ಎನ್ನುವುದಕ್ಕೆ ಇದೇ ಪ್ರಕರಣ ಜೀವಂತ ನಿದರ್ಶನವಾಗಿದೆ. ಇದು ಯಾವುದೇ ಪತ್ತೇದಾರಿ ಚಿತ್ರಕಥೆ, ವೆಬ್ ಸಿರೀಸ್‌ಗಿಂತ ಒಂದು ಹೆಜ್ಜೆ ಮುಂದೆ ಎನ್ನುವ ಪ್ರಕರಣವಾಗಿದೆ. ಸುರತ್ಕಲ್ ಪೊಲೀಸ್ ಠಾಣೆ ಸರಹದ್ದಿನಲ್ಲಿ ನಡೆದ ಸೆಕ್ಯುರಿಟಿ ಗಾರ್ಡ್‌ನ ಕೊಲೆ ಮಾಡಿ ಕಳೆದ 30 ವರ್ಷಗಳಿಂದ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸುತ್ತ ಅಂಡಲೆಯುತ್ತಿದ್ದ ಆರೋಪಿ ಜೋಸ್ ಕುಟ್ಟಿ (60 ವ) ಎಂಬಾತನನ್ನು ಮಂಗಳೂರು ಸಿಸಿಬಿಯ ಚತುರ ಮತ್ತು ದಾಢಸಿ ಎಸಿಪಿ ಮನೋಜ್‌ಕುಮಾರ್, ಇನ್‌ಸ್ಪೆಕ್ಟರ್ ಶ್ಯಾಮಸುಂದರ ಮತ್ತು ಸಿಬ್ಬಂದಿಗಳು ಖೆಡ್ಡಾಗೆ ಕೆಡವಿದ ಕಥೆಯಾಗಿದೆ.


ಡಿಸಿಪಿ (ಕಾ.ಸು) ಸಿದ್ಧಾರ್ಥ ಗೋಯೆಲ್


ಡಿಸಿಪಿ (ಕ್ರೈಂ) ಬಿ.ಪಿ. ದಿನೇಶ್‌ಕುಮಾರ್

**ಕೇರಳದ ಐನಾತಿ ಜೋಸ್ ಕುಟ್ಟಿ...**

ಮೈಮುರಿದು ದುಡಿದು ತಿನ್ನಲಾರದೇ ಗುಂಡು, ಗಾಂಜಾ ಸಹವಾಸ ಮಾಡಿಕೊಂಡು ತನ್ನ ಸ್ನೇಹಿತ ಅಚ್ಚನ್ ಕುಂಞ ಮತ್ತು ಜತೆಗಾರರೊಂದಿಗೆ ಮಂಗಳೂರಿನ ಸುರತ್ಕಲ್ ವ್ಯಾಪ್ತಿಯಲ್ಲಿ ದುಡಿಯಲು ಬಂದಿದ್ದನು. ಜೋಸ್ ಕುಟ್ಟಿ ಪಾಪಚ್ಚನ್‌ನ ಭಾವ ಥಾಮಸ್ ಎಂಬಾತನು ಕೂಡಾ ಕಟ್ಟಡ ಕಾರ್ಮಿಕನಾಗಿ ಸುರತ್ಕಲ್‌ನಲ್ಲಿದ್ದನು. ಜೋಸ್ ಕುಟ್ಟಿ ಕೂಲಿ ಮಾಡಿ ದುಡಿದದ್ದೆಲ್ಲ ಕುಡಿದು, ಗಾಂಜಾ, ಸಾರಾಯಿಗೆ ಹಣ ಖರ್ಚು ಮಾಡುತ್ತಲಿದ್ದನು. ಸುರತ್ಕಲ್‌ಗೆ ಸಮೀಪವಿದ್ದ ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ತನ್ನೂರಿಗೆ ಯಾವಾಗಲಾದರೂ ಒಮ್ಮೆ ಹೋಗುತ್ತಲಿದ್ದನು. ಹಣವಿಲ್ಲದಾಗ ಮಾತ್ರ ಕೆಲಸಕ್ಕೆ ಹೋಗುತ್ತಿದ್ದನು. ಮತ್ತೇ ಹಣ ಕೈಯಲ್ಲಿ ಬಂದ ನಂತರ ಅದೇ ರಾಗ... ಅದೇ ಹಾಡು... ಎಂಬಂತಿದ್ದನು.

**ಕೊಲೆ ಮಾಡಿ ಪರಾರಿ ಆಗಿಬಿಟ್ಟರು...**

ಈಗ ಸುಮಾರು 30 ವರ್ಷಗಳ ಹಿಂದೆ ಸುರತ್ಕಲ್ ಪೊಲೀಸ್ ಠಾಣೆ ವ್ಯಾಪ್ತಿಯ ಬಾಳ ಎಂಬ ಗ್ರಾಮದಲ್ಲಿ ಎಂಆರ್‌ಪಿಎಲ್ ಟೌನ್‌ಶಿಫ್ ಸೈಟ್ ಆರಂಭಗೊಂಡಿತ್ತು. ದೆಹಲಿ ಮೂಲದ ರಕ್ಷಕ ಎಂಬ ಕಂಪೆನಿ ಇದರ ಗುತ್ತಿಗೆ ಕೆಲಸವನ್ನು ನಿರ್ವಹಿಸುತ್ತಿತ್ತು. ಇಲ್ಲಿ ನೂರಾರು ಕೆಲಸಗಾರರು ದುಡಿಯುತ್ತಿದ್ದರು. ಇವರಿಗಾಗಿ ಕಂಪನಿ ಕ್ಯಾಂಟಿನ್ ವ್ಯವಸ್ಥೆ ಮಾಡಿತ್ತು. ಇಲ್ಲಿ ಸೆಕ್ಯುರಿಟಿ ಗಾರ್ಡ್‌ಗಳಾಗಿ ಸುರೇಶ, ನಾರಾಯಣ ಮತ್ತು ದೇವಣ್ಣ ಸೇರಿದಂತೆ ಐದು ಜನರು ಕರ್ತವ್ಯ ನಿರ್ವಹಿಸುತ್ತಿದ್ದರು.

ಅಂದು ಮಾರ್ಚ್ 12ನೇ ತಾರೀಕು. 1995ನೇ ಇಸ್ವಿಯಾಗಿತ್ತು. ಸಮಯ ರಾತ್ರಿ 10.30 ಗಂಟೆ ಆಗಿತ್ತು. ಈ ಸಮಯದಲ್ಲಿ ಐನಾತಿಗಳಾದ ಜೋಸ್ ಕುಟ್ಟಿ ಮತ್ತು ಅಚ್ಚನ್ ಕುಂಞ, ಇನ್ನೊಬ್ಬ ಸೇರಿಕೊಂಡು ಕಂಠ ಪೂರ್ತಿ ಕುಡಿದು ತೂರಾಡುತ್ತ ಬರುವಾಗ ಸೆಕ್ಯುರಿಟಿಗಳಾಗಿದ್ದ ಸುರೇಶ ನಾರಾಯಣ ಮತ್ತು ದೇವಣ್ಣ 'ರಾತ್ರಿ ಇಲ್ಲೇನು ಮಾಡುತ್ತಿರುವಿರಿ... ಇಲ್ಲಿಂದ ಹೋಗಿ' ಎಂದು ಗದರಿಸಿದಾಗ ಪರಸ್ಪರರಲ್ಲಿ ವಾಗ್ವಾದ ನಡೆದು ವಿಕೋಪಕ್ಕೆ ತಿರುಗಿದೆ. ಆಗ ಐನಾತಿಗಳಾದ ಜೋಸ್ ಕುಟ್ಟಿ, ಅಚ್ಚನ್ ಕುಂಞ, ಮತ್ತೊಬ್ಬ ಸೇರಿ ಹಲ್ಲೆ ಮಾಡಿ ಕಬ್ಬಿಣದ ರಾಡ್‌ಗಳಿಂದ ಥಳಿಸಿ ಕೊಲೆ ಮಾಡಿದ್ದರು. ಈ ಸಂದರ್ಭದಲ್ಲಿ ಇನ್ನೊಬ್ಬ ಸೆಕ್ಯುರಿಟಿ ದೇವಣ್ಣ ಕೂಡಾ ಗಂಭೀರವಾಗಿ ಗಾಯಗೊಂಡಿದ್ದನು.

ಅಲ್ಲಿಂದ ತಪ್ಪಿಸಿಕೊಂಡು ಹೋಗುವಾಗ ಎಂಆರ್‌ಪಿಎಲ್ ಸೈಟ್‌ನಲ್ಲಿ ಕ್ಯಾಂಟಿನ್ ಹತ್ತಿರ ಮಲಗಿದ್ದ ಕೂಲಿ ಕೆಲಸಗಾರರ ಜತೆಗೂ ಜಗಳ ಕಾಯ್ದು ಗಲಾಟೆ ಆರಂಭಿಸಿದ್ದರು. ಇದೇ ವೇಳೆ ಜೋಸ್ ಕುಟ್ಟಿಯ ಭಾವ ಥಾಮಸ್ ಎಂಬಾತ ಜಗಳ ಬಿಡಿಸಲು ಬಂದಾಗ ಆತನಿಗೂ ಕಬ್ಬಿಣದ ರಾಡ್‌ನಿಂದ ಥಳಿಸಿ ಗಂಭೀರವಾಗಿ ಗಾಯಗೊಳಿಸಿ ಪರಾರಿಯಾದರು.

**ಸುರತ್ಕಲ್ ಪೊಲೀಸ್ ಠಾಣೆಗೆ ದೂರು...**

ಐನಾತಿಗಳಾದ ಜೋಸ್ ಕುಟ್ಟಿ, ಅಚ್ಚನ್ ಕುಂಞ ಮತ್ತೋರ್ವನ ಮೇಲೆ ಮಾರ್ಚ್ 13ನೇ ತಾರೀಖು 1995ರಂದು ಸೆಕ್ಯುರಿಟಿ ಗಾರ್ಡ್ ಸುರೇಶ ನಾರಾಯಣನ ಕೊಲೆ, ದೇವಣ್ಣ ಹಾಗೂ ಥಾಮಸ್ ಎಂಬಿಬ್ಬರ ಮೇಲೆ ಹಲ್ಲೆ ಪ್ರಕರಣ ದಾಖಲಿಸಿಕೊಂಡು ಹಂತಕರ ಪತ್ತೆಗೆ ಪೊಲೀಸರು ತೊಡಗಿದ್ದರು. ಆದರೆ ಇವರು ಅಂದಿನಿಂದಲೂ ಸುರತ್ಕಲ್ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತ ಪರಾರಿಯಾಗಿ ಅಖಂಡ 30 ವರ್ಷಗಳ ಕಾಲ ತಲೆಮರೆಸಿಕೊಂಡಿದ್ದರು. ಆದರೂ ಕೂಡಾ ಸುರತ್ಕಲ್ ಪೊಲೀಸರು ಆರೋಪಿಗಳ ಪತ್ತೆಗಾಗಿ ವ್ಯಾಪಕ ಜಾಲ ಬೀಸಿದ್ದರು... ಆದರೆ ಏನು ಪ್ರಯೋಜನವಾಗಿರಲಿಲ್ಲ.


ಕಮೀಷನರ್ ಅನುಪಮ್ ಅಗರ್ವಾಲ್

**ವಿವಿಧ ರಾಜ್ಯಗಳಲ್ಲಿ ತಲೆಮರೆಸಿಕೊಂಡರು...**

ಇದರಲ್ಲಿ ಜೋಸ್ ಕುಟ್ಟಿ ಮಹಾ ಹರಾಮಿಯಾಗಿದ್ದನು. ತನ್ನ ಸಂಗಡಿಗನಾಗಿದ್ದ ಅಚ್ಚನ್ ಕುಂಞ ಜೊತೆಗೆ ಯಾವುದೇ ಸುಳಿವು ಸಿಗದಂತೆ ವೇಷ ಬದಲಾಯಿಸಿಕೊಂಡು, ಸುಳ್ಳು ಹೆಸರು ಹೇಳಿಕೊಂಡು ಅಂಡಲೆಯುತ್ತಿದ್ದರು. ಕಂಡ... ಕಂಡಲ್ಲಿ ಕೆಲಸ ಮಾಡಿಕೊಂಡು ಒಂದೆಡೆ ನಿಂತಲ್ಲಿ ನಿಲ್ಲದೇ ಬೇರೆ ಬೇರೆ ಸ್ಥಳಗಳಿಗೆ ಹೋಗುತ್ತಿದ್ದರು. ಇವರಿಬ್ಬರ ಪತ್ತೆ ಕಾರ್ಯ ಅಕ್ಷರಶಃ ಪೊಲೀಸರಿಗೆ ತಲೆನೋವಾಗಿತ್ತು. ಆರೋಪಿಗಳಿಬ್ಬರು ಕೆಲವು ವರ್ಷಗಳ ಕಾಲ ತಮಿಳುನಾಡು, ಕೇರಳ, ರಾಜಸ್ಥಾನ, ಗುಜರಾತ್‌ಗಳಲ್ಲಿ ತಲೆಮರೆಸಿಕೊಂಡಿದ್ದರು. ಇವರ ವಿರುದ್ಧ ಎಲ್‌ಪಿಸಿ ವಾರೆಂಟ್ ಜಾರಿಯಲ್ಲಿತ್ತು.

**8 ವರ್ಷದ ಹಿಂದೆ ಅಚ್ಚನ್ ಸಾವು...**

ಜೋಸ್ ಕುಟ್ಟಿಯ ಜತೆಗಾರನಾಗಿದ್ದ ಅಚ್ಚನ್ ಕುಂಞ ಕಳೆದ ಎಂಟು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಸತ್ತು ಹೋಗಿದ್ದಾನೆ ಎಂಬುದು ಗೊತ್ತಾಗಿದೆ. ಆದರೆ ಪ್ರಮುಖ ಆರೋಪಿ ಜೋಸ್ ಕುಟ್ಟಿ ಬದುಕಿದ್ದಾನೋ... ಸತ್ತಿದ್ದಾನೋ... ಎಂಬುದು ಆತ ಕೈಗೆ ಸಿಗುವತನಕ ನಿಗೂಢವಾಗಿತ್ತು. ಪೊಲೀಸರು ನೂರಾರು ಪ್ರಯತ್ನಗಳನ್ನು ಮಾಡಿದ್ದರೂ ಯಶಸ್ವಿಯಾಗಿರಲಿಲ್ಲ.


ಎಸಿಪಿ ಮನೋಜ್‌ಕುಮಾರ್ ನಾಯಕ್

**ಖಚಿತ ಮಾಹಿತಿ ಸಂಗ್ರಹಿಸಿದ ಸಿಸಿಬಿ...**

ಮಂಗಳೂರು ಸಿಸಿಬಿ ಘಟಕಕ್ಕೆ ಎಸಿಪಿ ಆಗಿರುವ ಮನೋಜ್‌ಕುಮಾರ್ ನಾಯಕ್ ಅವರು ದಕ್ಷ ಮತ್ತು ಚತುರ ಅಧಿಕಾರಿ. ಈ ಹಿಂದೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಡಿವೈಎಸ್ಪಿ ಆಗಿದ್ದಾಗ ಅವರು ಶ್ಲಾಘನೀಯ ಸೇವೆಗಾಗಿ ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದುಕೊಂಡ ಕ್ರಿಯಾಶೀಲ ಅಧಿಕಾರಿ. ಎಲ್‌ಪಿಸಿ ವಾರಂಟ್ ಜಾರಿಯಲ್ಲಿದ್ದ ಕೊಲೆ ಪ್ರಕರಣದ ಆರೋಪಿ ಜೋಸ್ ಕುಟ್ಟಿ ಮತ್ತು ಅಚ್ಚನ್ ಕುಂಞ ಬಗ್ಗೆ ತಲೆಕೆಡಿಸಿಕೊಂಡು ಖಚಿತ ಮಾಹಿತಿ ಸಂಗ್ರಹಿಸುವಂತೆ ತಮ್ಮ ಅಧೀನ ಇನ್‌ಸ್ಪೆಕ್ಟರ್ ಶ್ಯಾಮಸುಂದರ ಹೆಚ್.ಎಂ. ಮತ್ತು ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶಳನ ನೀಡಿದರು. ಕಳೆದ ನಾಲ್ಕು ತಿಂಗಳಿನಿಂದ ಎಡೆ-ಬಿಡದೇ ಮಾಹಿತಿ ಸಂಗ್ರಹಿಸಿ ಕೊನೆಗೆ ಜೋಸ್ ಕುಟ್ಟಿ ಇರುವಿಕೆಯನ್ನು ಖಚಿತಪಡಿಸಿದರು.


30 ವರ್ಷದಿಂದ ಪರಾರಿಯಿದ್ದ ಹಂತಕ ಜೋಸ್ ಕುಟ್ಟಿ


ಕೊಲೆ ಮಾಡಿ 30 ವರ್ಷಗಳಿಂದ ಪರಾರಿಯಾಗಿರುವ ಜೋಸ್ ಕುಟ್ಟಿ ಬಗ್ಗೆ ಎಸಿಪಿ ಮನೋಜ್‌ಕುಮಾರ್ ನಾಯಕ್ ಮತ್ತು ಇನ್‌ಸ್ಪೆಕ್ಟರ್ ಶ್ಯಾಮಸುಂದರ ಅವರು ಪೊಲೀಸ್ ಕಮೀಷನರ್ ಅನುಪಮ ಅಗರವಾಲ್, ಡಿಸಿಪಿ (ಕಾ.ಸು) ಸಿದ್ಧಾರ್ಥ ಗೋಯಲ್, ಡಿಸಿಪಿ (ಕ್ರೈಂ) ಬಿ.ಪಿ. ದಿನೇಶ್‌ಕುಮಾರ್ ಅವರೊಂದಿಗೆ ಸಮಾಲೋಚಿಸಿ ಅವರಿಂದ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು.

**ಆರೋಪಿ ಜೋಸ್ ಕುಟ್ಟಿ ಬಂಧನ...**

ಅತ್ಯಂತ ಖಚಿತ ಮಾಹಿತಿ ಆಧರಿಸಿ ಎಸಿಪಿ ಮನೋಜ್ ಕುಮಾರ್ ನಾಯಕ್ ಅವರ ಸಿಸಿಬಿ ತಂಡ ರಂಗಕ್ಕೆ ಎಂಟ್ರಿ ಕೊಟ್ಟಿತು. ಇನ್‌ಸ್ಪೆಕ್ಟರ್ ಶ್ಯಾಮಸುಂದರ ಹೆಚ್.ಎಂ., ಎಎಸ್‌ಐ ಮೋಹನ್ ಕೆ.ವಿ. ಹಾಗೂ ಸಿಬ್ಬಂದಿಗಳು ಸೇರಿಕೊಂಡು ನೇರವಾಗಿ ಕೇರಳ ಜಿಲ್ಲೆಯ ಎರ್ನಾಕುಲಂನ ತ್ರಿಪ್ಪುಳಿತ್ತುರಂಗೆ ತೆರಳಿ ಆರೋಪಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆರೋಪಿಯನ್ನು ಕೋರ್ಟಿಗೆ ಹಾಜರು ಪಡಿಸಲಾಗಿದೆ. ಆರೋಪಿಗೆ ಸದ್ಯ ನ್ಯಾಯಾಂಗ ಬಂಧನ ವಿಧಿಸಲಾಗಿದೆ. 30 ವರ್ಷಗಳ ಹಳೆಯ ಕೊಲೆ ಪ್ರಕರಣದ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾದ ಸಿಸಿಬಿ ಘಟಕದ ಎಸಿಪಿ ಮನೋಜ್‌ಕುಮಾರ್ ನಾಯಕ್, ಇನ್‌ಸ್ಪೆಕ್ಟರ್ ಶ್ಯಾಮಸುಂದರ ಹೆಚ್.ಎಂ. ಅವರ ತಂಡವನ್ನು ಪೊಲೀಸ್ ಕಮೀಷನರ್ ಅನುಪಮ್ ಅಗರವಾಲ್, ಡಿಸಿಪಿ (ಕಾ.ಸು) ಸಿದ್ಧಾರ್ಥ ಗೋಯಲ್, ಡಿಸಿಪಿ (ಕ್ರೈಂ) ಬಿ.ಪಿ. ದಿನೇಶ್‌ಕುಮಾರ್ ಅವರುಗಳು ಶ್ಲಾಘಿಸಿದ್ದಾರೆ.

# ಭಾವನ ಜತೆ ಅಕ್ರಮ ಸಂಬಂಧ ಪ್ರಶ್ನಿಸಿದ್ದಕ್ಕೆ ಗಂಡನನ್ನೇ ಕೊಂದ ಹೆಂಡ್ತಿ!

ಕೆಲ ದಿನಗಳ ಹಿಂದೆ ಬೋಗನಹಳ್ಳಿ ಸಮೀಪ ನಾಗರತ್ನ ಪತಿ ತಿಪ್ಪೇಶ್‌ನನ್ನು ಆರೋಪಿಗಳು ಹತ್ಯೆಗೈದಿದ್ದರು. ಈ ಕೃತ್ಯ ಎಸಗಿದ ಬಳಿಕ ತನ್ನ ಪತಿಯನ್ನು ಅಪರಿಚಿತರು ಕೊಂದಿದ್ದಾರೆ ಎಂದು ಬೆಳ್ಳಂದೂರು ಠಾಣೆಗೆ ಮೃತನ ಪತ್ನಿ ನಾಗರತ್ನ ದೂರು ನೀಡಿದ್ದಳು. ಈ ಕೃತ್ಯ ತನಿಖೆಗಿಳಿದ ಪೊಲೀಸರು, ತಾಂತ್ರಿಕ ಮಾಹಿತಿ ಆಧರಿಸಿ ಮೃತನ ಪತ್ನಿ ನಿಜ ಬಣ್ಣ ಬಯಲುಗೊಳಿಸಿದ್ದಾರೆ.


ಡಿಸಿಪಿ ಶಿವಕುಮಾರ್ ಗುಣಾರೆ

ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿದ್ದ ತನ್ನ ಪತಿಯನ್ನು 1 ಲಕ್ಷಕ್ಕೆ ಸುಪಾರಿ ಕೊಟ್ಟು ಕೊಲೆ ಮಾಡಿಸಿ ಬಳಿಕ ಅಪರಿಚಿತರು ಕೊಂದಿದ್ದಾರೆ ಎಂದು ನಾಟಕವಾಡಿದ್ದ ಮೃತನ ಪತ್ನಿ ಹಾಗೂ ಆಕೆಯ ಭಾವ ಸೇರಿದಂತೆ ಐವರನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೋಗನಹಳ್ಳಿ ನಿವಾಸಿ ನಾಗರತ್ನ, ಆಕೆ ಭಾವ (ಸೋದರಿ ಗಂಡ) ರಾಮ್, ಆಂಧ್ರದ ಧರ್ಮಾವರಂ ಮೂಲದ ಶಶಿಕುಮಾರ್, ಸುರೇಶ್ ಹಾಗೂ ಚಿನ್ನ ಬಂಧಿತರಾಗಿದ್ದಾರೆ. ಕೆಲ ದಿನಗಳ ಹಿಂದೆ ಬೋಗನಹಳ್ಳಿ ಸಮೀಪ ನಾಗರತ್ನ ಪತಿ ತಿಪ್ಪೇಶ್‌ನನ್ನು ಆರೋಪಿಗಳು ಹತ್ಯೆಗೈದಿದ್ದರು. ಈ ಕೃತ್ಯ ಎಸಗಿದ ಬಳಿಕ ತನ್ನ ಪತಿಯನ್ನು ಅಪರಿಚಿತರು ಕೊಂದಿದ್ದಾರೆ ಎಂದು ಬೆಳ್ಳಂದೂರು ಠಾಣೆಗೆ ಮೃತನ ಪತ್ನಿ ನಾಗರತ್ನ ದೂರು ನೀಡಿದ್ದಳು. ಈ ಕೃತ್ಯ ತನಿಖೆಗಿಳಿದ ಪೊಲೀಸರು, ತಾಂತ್ರಿಕ ಮಾಹಿತಿ ಆಧರಿಸಿ ಮೃತನ ಪತ್ನಿ ನಿಜ ಬಣ್ಣ ಬಯಲುಗೊಳಿಸಿದ್ದಾರೆ.

**ಸೋದರಿ ಪತಿ ಜತೆ ಲವ್, ಸೆಕ್ಸ್**

10 ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲೂಕಿನ ಕರೂರು ಗ್ರಾಮದ ತಿಪ್ಪೇಶ್ ಹಾಗೂ ನಾಗರತ್ನ ವಿವಾಹವಾಗಿದ್ದು, ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೂಲಿ ಅರಸಿಕೊಂಡು ನಗರಕ್ಕೆ ಬಂದಿದ್ದ ತಿಪ್ಪೇಶ್ ದಂಪತಿ, ಬೆಳ್ಳಂದೂರು ಸಮೀಪ ನಿರ್ಮಾಣ ಹಂತದ ಕಟ್ಟಡಗಳಲ್ಲಿ ದುಡಿದು ಜೀವನಸಾಗಿಸುತ್ತಿದ್ದರು. ಬೋಗನಹಳ್ಳಿ ಲೇಬರ್ ಶೆಡ್‌ನಲ್ಲಿ ಅವರು ವಾಸವಾಗಿದ್ದರು. ಈ ನಡುವೆ ತನ್ನ ಭಾವ ರಾಮನ ಜತೆ ನಾಗರತ್ನಗೆ ಅಕ್ರಮ ಸಂಬಂಧ ಬೆಳೆಯಿತು. ಈ ಸ್ನೇಹದ ವಿಚಾರ ತಿಳಿದ ತಿಪ್ಪೇಶ್, ಮನೆಯಲ್ಲಿ ಪತ್ನಿ ಜತೆ ಜಗಳವಾಡಿದ್ದ. ಅಲ್ಲದೆ ಭಾವನ ನಂಟು ಕಡಿದುಕೊಳ್ಳುವಂತೆ ಆತ ತಾಕೀತು ಮಾಡಿದ್ದ. ಈ ಗಲಾಟೆ ಸಂಗತಿಯನ್ನು ಭಾವನಿಗೆ ಹೇಳಿದ ನಾಗರತ್ನ, ತಮ್ಮ ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿರುವ ಪತಿಯನ್ನು ಕೊಲ್ಲಲು ಸೂಚಿಸಿದ್ದಳು. ತರುವಾಯ ಆಂಧ್ರಪ್ರದೇಶದ ಶಶಿಕುಮಾರ್, ಸುರೇಶ್ ಹಾಗೂ ಚಿನ್ನನ್ನು ಸಂಪರ್ಕಿಸಿ 1 ಲಕ್ಷಕ್ಕೆ ನಾಗ ರತ್ನ ಸುಪಾರಿ ಕೊಟ್ಟಿದ್ದಳು. ಈ ಹಣದಾಸೆಗೆ ಆರೋಪಿಗಳು ಕೃತ್ಯ ಎಸಗಲು ಸಮ್ಮತಿಸಿದ್ದರು. ಚಿತ್ರದುರ್ಗದಲ್ಲಿ ರಾಮ್ ಕೂಡ ನಿರ್ಮಾಣ ಹಂತದಲ್ಲಿ ಕಾರ್ಮಿಕನಾಗಿದ್ದ ಪೊಲೀಸರು ಹೇಳಿದ್ದಾರೆ.

**ಎಟಿಎಂನಲ್ಲಿ ಹಣ ತರುವ ನೆಪದಲ್ಲಿ ಹತ್ಯೆ**

ಪೂರ್ವಯೋಜಿತ ಸಂಚಿನಂತೆ ಅ.14ರಂದು ತಿಪ್ಪೇಶ್ ಹತ್ಯೆಗೆ ನಾಗರತ್ನ ಗ್ಯಾಂಗ್ ಮುಹೂರ್ತ ನಿಶ್ಚಯಿಸಿದ್ದರು. ಅಂತೆಯೇ ಆ ದಿನ ಬೋಗನಹಳ್ಳಿ ಸಮೀಪದ ನೀಲಗಿರಿ ತೋಪಿನಲ್ಲಿ ಸುಪಾರಿ ಹಂತಕರು ಕಾಯ್ದಿದ್ದರು. ಆಗ ಎಟಿಎಂನಲ್ಲಿ ಹಣ ತರುವೆ ನೆಪದಲ್ಲಿ ಮನೆಯಿಂದ ಪತಿ ತಿಪ್ಪೇಶ್‌ನನ್ನು ಕರೆತಂದ ನಾಗರತ್ನ, ಎಟಿಎಂಗೆ ಹೋಗಲು ತೋಪಿನ ದಾರಿಯಲ್ಲಿ ಸಾಗಿದ್ದಾಳೆ. ಆ ವೇಳೆ ನೀಲಗಿರಿ ತೋಪು ಪ್ರವೇಶಿಸುತ್ತಿದ್ದಂತೆ ತಿಪ್ಪೇಶ್ ಮೇಲೆ ಹಲ್ಲೆನಡೆಸಿ ಬಳಿಕ ಉಸಿರುಗಟ್ಟಿಸಿ ಕೊಂದು ಆರೋಪಿಗಳು ಪರಾರಿಯಾಗಿದ್ದರು. ಈ ಕೃತ್ಯ ಎಸಗಿದ ನಂತರ ಪೊಲೀಸ್ ನಿಯಂತ್ರಣ ಕೊಠಡಿಗೆ (112)ಗೆ ಕರೆ ಮಾಡಿದ್ದ ನಾಗರತ್ನ, ತಮ್ಮ ಪತಿಯನ್ನು ಯಾರೋ ಕೊಂದು ದುಷ್ಕರ್ಮಿಗಳು ಪರಾ ರಿಯಾಗಿದ್ದಾರೆ ಎಂದು ದೂರು ನೀಡಿದ್ದಳು.


ಆರೋಪಿ ನಾಗರತ್ನ

ಈ ಬಗ್ಗೆ ತನಿಖೆ ನಡೆಸಿದ ಪೊಲೀಸರು, ಕೃತ್ಯ ನಡೆದ ಸುತ್ತಮುತ್ತಲ ಸಿಸಿಟಿವಿ ಕ್ಯಾಮರಾ ಗಳನ್ನು ಪರಿಶೀಲಿಸಿದಾಗ ನೀಲಗಿರಿ ತೋಪಿಗೆ ಎರಡು ಬೈಕ್‌ಗಳಲ್ಲಿ ಆರೋಪಿಗಳು ತೆರಳಿದ್ದ ದೃಶ್ಯಾವಳಿ ಸಿಕ್ಕಿತು. ಆ ಬೈಕ್‌ಗಳ ನೋಂದಣಿ ಸಂಖ್ಯೆ ಆಧರಿಸಿ ಮಾಲಿ ಕರನ್ನು ಮೊಬೈಲ್ ಸಂಗ್ರಹಿಸ ಲಾಯಿತು. ಈ ಮೊಬೈಲ್ ಸಂಖ್ಯೆಗಳ ಕರೆಗಳ ವಿವರ ಸಂಗ್ರಹಿಸಿದಾಗ ನಾಗರತ್ನ ನಿರಂತರವಾಗಿ ಸಂಪರ್ಕದಲ್ಲಿದ್ದ


ಆರೋಪಿಗಳಾದ ರಾಮ್, ಚಿನ್ನ, ಶಶಿಕುಮಾರ್ ಹಾಗೂ ಸುರೇಶ್

ಸಂಗತಿ ಗೊತ್ತಾಯಿತು. ಈ ಮಾಹಿತಿ ಮೇರೆಗೆ ಆಕೆಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೊನೆಗೆ ಸತ್ಯ ಬಾಯಿಟ್ಟಳು. ಈಕೆ ನೀಡಿದ ಸುಳಿವು ಆಧರಿಸಿ ಇನ್ನುಳಿದ ಆರೋಪಿಗಳನ್ನು ಬಂಧಿಸಲಾಯಿತು ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಡಾ. ಶಿವಕುಮಾರ್ ಗುಣಾರೆ ತಿಳಿಸಿದರು.


ಮೃತೆ ಕವಿತಾ

# ಭಾವಿ ಪತ್ನಿಯನ್ನು ಅವನೇ ಕೊಂದು ಬಿಟ್ಟನಾ?

**ಮದುವೆಯಾಗಿ ಗಂಡ, ಮಕ್ಕಳು ಅಂಥ ಸುಖಮಯ ಜೀವನ ನಡೆಸಬೇಕೆಂದು ಕೊಂಡಿದ್ದ ಯುವತಿಯೊಬ್ಬಳು ಮದುವೆಗೆ ಮುನ್ನವೇ ನೇಣುಹಾಕಿಕೊಂಡ ಸ್ಥಿತಿಯಲ್ಲಿ ಸಾವನ್ನಪ್ಪಿದ್ದು, ಆಕೆಯದು ಆತ್ಮಹತ್ಯೆಯಲ್ಲ ಮದುವೆಯಾಗಬೇಕಾಗಿದ್ದ ಹುಡುಗನಿಂದಲೇ ಮೃತಪಟ್ಟಿದ್ದಾಳೆ ಎನ್ನುವುದು ಹೆತ್ತವರ ದೂರು ಆಗಿದೆ. ಆದರೆ ಅದಾಗಲೇ ಆರೋಪಿ ಪೊಲೀಸರಿಗೆ ಶರಣಾಗಿರುವ ಆರೋಪಿ ವಿಚಾರಣೆ ಎದುರಿಸುತ್ತಿದ್ದಾನೆ... ಪೊಲೀಸರು ಸತ್ಯಾಸತ್ಯತೆಯ ತನಿಖೆ ನಡೆಸುತ್ತಿದ್ದಾರೆ.**

**ಮೈಸೂರು**
✎ಬಿ.ಎಂ. ಲವಕುಮಾರ್

ಬಹಳಷ್ಟು ಗಂಡು ಮಕ್ಕಳು ಮದುವೆಯಾಗಲು ಹೆಣ್ಣುಸಿಗುತ್ತಿಲ್ಲವೆಂದು ಪರದಾಡುತ್ತಾ ಯೌವನವನ್ನು ಕಳೆದುಕೊಳ್ಳುತ್ತಿದ್ದರೆ ಕೆಲವರು ಮದುವೆಯಾದ ಹೆಂಡತಿಯನ್ನೇ ಕೊಲೆ ಮಾಡುತ್ತಿದ್ದಾರೆ. ಆದರೆ ಇಲ್ಲಿ ಯುವಕನೊಬ್ಬ ಮದುವೆಗೆ ಮುನ್ನವೇ ಭಾವಿ ಪತ್ನಿಯನ್ನು ಕೊಲೆ ಮಾಡಿದ್ದಾನೆ ಎಂದು ದೂರು ನೀಡಲಾಗಿದೆ. ಆದರೆ ಮದುವೆಯಾಗಬೇಕಿದ್ದ ಯುವಕ ಮಾತ್ರ ಅವಳ ಸಾವಿಗೆ ಕಾರಣ ನಾನಲ್ಲ. ನಾನಲ್ಲ ಎನ್ನುತ್ತಿದ್ದಾನೆ. ಹಾಗಾದರೆ ಅವಳ ಸಾವು ಹೇಗಾಯಿತು? ಇಷ್ಟಕ್ಕೂ ಇಂತಹದೊಂದು ಕ್ರೈಂಸ್ಟೋರಿ ನಡೆದಿರುವುದು ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲೂಕಿನ ಹಿರೇಹಳ್ಳಿ ಗ್ರಾಮದಲ್ಲಿ, ಹಿರೇಹಳ್ಳಿ ಗ್ರಾಮದ ನಿವಾಸಿಗಳಾದ ಪುಟ್ಟಮಲ್ಲಪ್ಪ ಹಾಗೂ ಶಿವನಂಜಮ್ಮ ದಂಪತಿ ಪುತ್ರಿ ಕವಿತಾ(20) ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮೃತಪಟ್ಟ ದುರ್ದೈವಿ. ಈಕೆಯ ಹೆತ್ತವರು ಹೆಚ್.ಡಿ. ಕೋಟೆ ತಾಲೂಕಿನ ಬೂದನೂರು ಗ್ರಾಮದ ಪುಟ್ಟಪ್ಪ ಎಂಬುವರ ಪುತ್ರ. ನಿರಂಜನ ಅಲಿಯಾಸ್ ಜಗ್ಗ ಎಂಬಾತನೊಂದಿಗೆ ಮದುವೆಯನ್ನು ನಿಶ್ಚಯ ಮಾಡಿದ್ದರು.

ಎಲ್ಲವೂ ಸರಿಯಾಗಿ ಇದ್ದಿದ್ದರೆ ಅಕ್ಟೋಬರ್ 21ರಂದು ಇವರ ಮದುವೆ ಹಿರಿಯರ ಸಮ್ಮುಖದಲ್ಲಿ ನಡೆದು ದಾಂಪತ್ಯ ಜೀವನಕ್ಕೆ ಕಾಲಿಡಬೇಕಾಗಿತ್ತು. ಆದರೆ ಮದುವೆ ಮುನ್ನವೇ ಎಲ್ಲವೂ ಮುಗಿದು ಹೋಗಿದೆ. ಇಪ್ಪತ್ತನೇ ವಯಸ್ಸಿಗೆ ಮದುವೆ ಮಾಡಿಕೊಳ್ಳ ಬೇಕೆನ್ನುವ ಹೆತ್ತವರ ಬಯಕೆಯನ್ನು ಈಡೇರಿಸಲು ಕವಿತಾ ಒಪ್ಪಿಗೆ ನೀಡಿದ್ದಳು. ಆಕೆಗೂ ಮದುವೆಯಾಗಿ ಗಂಡನ ಮನೆಗೆ ಹೋಗಿ ಹೊಸ ಬದುಕು ಕಟ್ಟಿಕೊಳ್ಳುವ ಬಯಕೆ ಮಾತ್ರವಲ್ಲದೆ ಈ ಬಗ್ಗೆ ಸುಂದರ ಕನಸು ಕಟ್ಟಿಕೊಂಡಿದ್ದಳು. ಇನ್ನೇನು ಮದುವೆ ಕೆಲವೇ ದಿನಗಳಷ್ಟೆ ಬಾಕಿಯಿದ್ದವು.


ಆರೋಪಿ ನಿರಂಜನ್

ಮದುವೆಯಾಗಿ ಹೋಗುವ ಮಗಳು ಆರಾಮಾಗಿ ಮನೆಯಲ್ಲಿರಲಿ ಎಂದು ಭಾವಿಸಿದ ಹೆತ್ತವರು ಮಗಳನ್ನು ಮನೆಯಲ್ಲಿ ಬಿಟ್ಟು ಕೃಷಿ ಕೆಲಸಕ್ಕಾಗಿ ಜಮೀನಿಗೆ ಹೋಗಿದ್ದರು. ಇತ್ತ ಮನೆಯಲ್ಲಿ ಕವಿತಾ ಮಾತ್ರ ಇದ್ದಳು. ಈ ನಡುವೆ ಕವಿತಾ ಮತ್ತು ಮದುವೆಯಾಗಲಿರುವ ಭಾವಿ ಪತಿ ನಿರಂಜನ ನಡುವೆ ಏನೇನು ಮಾತುಕತೆಗಳು ನಡೆದಿದ್ದವೋ? ಯಾವ ವಿಚಾರಕ್ಕೆ ಜಗಳವಾಡಿಕೊಂಡಿದ್ದರೋ ಗೊತ್ತಿಲ್ಲ.

ಅವತ್ತು ಅಕ್ಟೋಬರ್ 4 ಭಾನುವಾರ ಎಲ್ಲರೂ ಬರಲಿರುವ ಆಯುಧಪೂಜೆ ದಸರಾ ಹಬ್ಬದ ಗುಂಗಿನಲ್ಲಿದ್ದರೆ, ಹಳ್ಳಿಯ ಜನ ಜಮೀನು ಕೆಲಸ, ದನಕರು ಅಂಥ ಅವರದ್ದೇ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಅದೇನೋ ಗೊತ್ತಿಲ್ಲ ಭಾವಿ ಪತ್ನಿ ಕವಿತಾಳನ್ನು ನೋಡಲೆಂದು ಬೂದನೂರು ಗ್ರಾಮದಿಂದ ನಿರಂಜನ ಅಲಿಯಾಸ್ ಜಗ್ಗ ಬಂದಿದ್ದನು. ಸಂಜೆ ಹೊತ್ತು ಕವಿತಾ ಮಾತ್ರ, ಮನೆಯಲ್ಲಿದ್ದರು ಇಬ್ಬರು ಮನೆಯ ಬಾಗಿಲು ಹಾಕಿಕೊಂಡು ಮಾತನಾಡಿದ್ದಾರೆ. ಈ ವೇಳೆ ಇಬ್ಬರ ನಡುವೆ ಜಗಳ ನಡೆದಿದೆ.

ಕವಿತಾ ಪೋಷಕರು ನೀಡಿದ ದೂರಿನ ಪ್ರಕಾರ ಇಬ್ಬರು ಮಾತನಾಡುತ್ತಿದ್ದ ಸಂದರ್ಭ ಜಗಳವಾಗಿದ್ದು

☞12

## ನಿಪ್ಪಾಣಿ ಸಿಪಿಐ ಬಿ.ಎಸ್. ತಳವಾರ ಮತ್ತು ತಂಡದ ಮಿಂಚಿನ ಕಾರ್ಯಾಚರಣೆ...

# ನೌಕರಿ ಕೊಡಿಸುವುದಾಗಿ ಲಕ್ಷ... ಲಕ್ಷ ಹಣ ಪೀಕುತ್ತಿದ್ದ ವಂಚಕನಿಗೆ ಬುದ್ಧಿವಾದ ಹೇಳಿದ್ದ ಸಮಾಜ ಸೇವಕನ ಕಗ್ಗೊಲೆ : ಹಂತಕನ ಬಂಧನ!


ವಂಚಕನಿಗೆ ಬಲಿಯಾದ ಸಂತೋಷ ಚವ್ಹಾಣ

**ಆತ 40 ವರ್ಷದ ಸ್ಪುರದ್ರೂಪಿ ಯುವಕನಾಗಿದ್ದನು. ಸಮಾಜ ಸೇವಕನಾಗಿ ತನ್ನೂರಿನ ಮತ್ತು ಪರಿಸರದಲ್ಲಿನ ಅನೇಕ ಜನರ ಕೆಲಸಗಳನ್ನು ತಾನೇ ಮುಂದಾಗಿ ನಿಂತು ಓಡಾಡುತ್ತ ಮಾಡಿಕೊಡುತ್ತಿದ್ದನು. ಹೀಗಾಗಿ ಈತ ಊರವರ ಪಾಲಿನ ಜನಾನುರಾಗಿ ಸಮಾಜ ಸೇವಕನಾಗಿದ್ದನು. ಇತ್ತೀಚಿಗೆ ತನ್ನೂರಿನಲ್ಲಿ ಐನಾತಿ ಯುವಕನೊಬ್ಬನು ನಿರುದ್ಯೋಗಿ ಯುವಕರನ್ನೇ ಟಾರ್ಗೆಟ್ ಮಾಡಿಕೊಂಡು ಅವರಿಗೆ ನೌಕರಿ ಕೊಡಿಸುವ ಇನ್ನಿಲ್ಲದ ಆಶೆ-ಆಮಿಷ ತೋರಿಸಿ ಅನೇಕ ಜನರಿಂದ ಲಕ್ಷ ಲಕ್ಷ ರೂ. ಹಣವನ್ನು ಪೀಕಿದ್ದನು. ಇತ್ತ ನೌಕರಿಯೂ ಇಲ್ಲ... ತಮ್ಮ ಹಣವೂ ಇಲ್ಲ ಎಂದು ವಂಚಕನಿಗೆ ದುಂಬಾಲು ಬಿದ್ದರು. ಇದು ಸಮಾಜ ಸೇವಕನಿಗೆ ಗೊತ್ತಾಗಿ ವಂಚಕ ಯುವಕನಿಗೆ 'ನೀನು ಹೀಗೆಲ್ಲ ಮಾಡಬೇಡ... ಮರ್ಯಾದೆಯಿಂದ ಕೊಟ್ಟವರ ಹಣ ಹಿಂದಿರುಗಿಸು... ಇಲ್ಲದಿದ್ರೆ ನಿನ್ನ ಪರಿಸ್ಥಿತಿ ನೆಟ್ಟಗಿರಲಾರದು' ಎಂದು ಖಡಕ್ ಎಚ್ಚರಿಕೆ ನೀಡಿದ್ದನು. ಸಮಾಜ ಸೇವಕನ ಎಚ್ಚರಿಕೆಯ ಮಾತುಗಳು ವಂಚಕನ ಅಂಡಿಗೆ ಬೆಂಕಿ ಬಿದ್ದಂತಾಗಿತ್ತು. ತನಗೆ ಅಡ್ಡ ಬಂದ ಸಮಾಜ ಸೇವಕ ಬದುಕಿರಕೂಡದು ಎಂದು ನಿರ್ಧರಿಸಿದ್ದ ವಂಚಕ ಇತ್ತೀಚಿಗೆ ರಾಷ್ಟ್ರೀಯ ಹೆದ್ದಾರಿ ನಂ. 4ರಲ್ಲಿರುವ ಸಹಾರಾ ಹೋಟೆಲ್ ಮುಂದೆ ತನ್ನ ಸ್ನೇಹಿತರೊಡನೆ ಮಾತನಾಡುತ್ತ ನಿಂತಿರುವಾಗಲೇ ಸಮಾಜ ಸೇವಕನನ್ನು ದೂರ ಕರೆದೊಯ್ದು ವಂಚಕ ಚಾಕುವಿನಿಂದ ಇರಿದು ಕೊಲೆ ಮಾಡಿಬಿಟ್ಟನು. ಪ್ರಕರಣದ ಬೆನ್ನು ಬಿದ್ದ ಧಾಡಸಿ ಸಿಪಿಐ ಬಿ.ಎಸ್. ತಳವಾರ ಅವರು ತಮ್ಮ ಸಿಬ್ಬಂದಿಗಳೊಡನೆ ಮಿಂಚಿನ ಕಾರ್ಯಾಚರಣೆ ನಡೆಸಿ ಹಂತಕನನ್ನು ಹೆಡೆಮುರಿಕಟ್ಟಿ ಬಂಧಿಸಿರುವ ಘಟನೆ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಬಸವೇಶ್ವರ ಚೌಕ ಪೊಲೀಸ್ ಠಾಣೆ ವ್ಯಾಪ್ತಿಯ ಯಮಗರ್ಣಿ ಹದ್ದಿಯಲ್ಲಿ ವರದಿಯಾಗಿದೆ.**


ಸಂತೋಷನ ಹಂತಕ ಸೌರಭ ಕೊರವಿ

'ಇದ್ದದ್ದನ್ನು ಇದ್ದಂತೆ ಹೇಳಿದರೆ ಕೆಂಡದಂತಹ ಕೋಪ' ಎಂಬ ಗಾದೆ ಮಾತು ಅಕ್ಷರಶಃ ಸತ್ಯ. ಸಮಾಜ ಘಾತುಕರಿಗೆ, ವಂಚಕರಿಗೆ ಬುದ್ಧಿಮಾತು ಹೇಳುವುದೇ ಕಠಿಣವಾಗಿದೆ. ಬುದ್ಧಿಮಾತು ಹೇಳಲು ಹೋಗಿ ತನ್ನ ತುಂಬು ಜೀವನವನ್ನೇ ಬಲಿಯಾಗಿರಿಸಿದ ದುರಂತ ಕಥೆಯ ವರದಿ ಇದಾಗಿದೆ. ಇನ್ನೊಂದೆಡೆ ಬುದ್ಧಿಮಾತುಗಳನ್ನೇ ಬಲು ಅಪಾರ್ಥವಾಗಿ ತಿಳಿದುಕೊಂಡು ಹಂತಕನಾಗಿ ಜೈಲು ಸೇರಿ ತನ್ನ ನಂಬಿದ ಕುಟುಂಬವನ್ನು ಇಂದು ಸಂಪೂರ್ಣವಾಗಿ ಬೀದಿಗೆ ತಂದ ಹಂತಕನ ವಿಕೃತ ಮನಸ್ಸಿನ ಕಥೆಯೂ ಇದರಲ್ಲಿ ಸೇರಿದೆ. ಸಮಾಜ ಸೇವೆಯ ಹೆಸರಿನಲ್ಲಿ ನಾಲ್ಕು ಜನರಿಗೆ ಬೇಕಾದವನು. ಆದರೆ ಇಂದು ಇವರಿಗೆ ಕಾಲವಿಲ್ಲ ಎಂದು ಹೇಳಬಹುದು. ಸಮಾಜ ಸೇವಕರ ಹೆಸರಿನಲ್ಲಿ ಜನರನ್ನು ಸುಲಿಗೆ ಮಾಡುವ ಅನೇಕರು ಇಂದು ನಮ್ಮ ಸಮಾಜದಲ್ಲಿ ತುಂಬಿದ್ದಾರೆ. ಅಂತಹವರ ನಡುವೆ ಅಪವಾದ ಎನ್ನುವಂತೆ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಯಮಗರ್ಣಿಯ ಸಂತೋಷ ಚವ್ಹಾಣ ಎಂಬ ನತದೃಷ್ಟ ಇಂದು ಬಾರದೂರಿಗೆ ಪಯಣ ಬೆಳೆಸಿದ್ದಾನೆ.

### ನತದೃಷ್ಟ ಸಂತೋಷ ಚವ್ಹಾಣ...

ಬದುಕಬೇಕು... ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂಬ ಅದಮ್ಯ ಛಲವನ್ನು ಹೊಂದಿದ್ದ ಸಮಾಜ ಸೇವಕ ಸಂತೋಷ ವಿಶ್ವನಾಥ ಚವ್ಹಾಣ ಇಂದು ನಮ್ಮೊಡನಿಲ್ಲ. ತನ್ನೂರಿನ ಐನಾತಿ ವಂಚಕ ಸೌರಭ ವಸಂತ ಕೊರವಿ ಎಂಬಾತನ ಕ್ರೂರ ಕೃತ್ಯಕ್ಕೆ ಬಲಿಯಾಗಿ ಹೋಗಿದ್ದಾನೆ. ಇಂದು ಸಂತೋಷನನ್ನು ಕಳೆದುಕೊಂಡು ಯಮಗರ್ಣಿಯ ಅನೇಕರಲ್ಲಿ ಅನಾಥ ಪ್ರಜ್ಞೆ ಕಾಡುತ್ತಿದೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ (ಕಾ.ಸು) ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ (ಕ್ರೈಂ) ಆರ್.ಬಿ. ಬಸರಗಿ

ಮೂಲತಃ ನಿಪ್ಪಾಣಿ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ ನಂ. 4ರ ಮೇಲಿರುವ ಯಮಗರ್ಣಿ ಗ್ರಾಮದ ನಿವಾಸಿಯಾಗಿದ್ದನು. ತಕ್ಕಮಟ್ಟಿಗೆ ವಿದ್ಯಾವಂತನಾಗಿ ಊರಿನಲ್ಲಿ ಸಂಘಟನೆಯ ಮುಖಾಂತರ ಸಮಾಜ ಸೇವೆಯನ್ನು ಮಾಡಿಕೊಂಡಿದ್ದನು. ಸಂತೋಷ ವಿಶ್ವನಾಥ ಚವ್ಹಾಣ 2006ರಲ್ಲಿ ಗೀತಾ ಎಂಬಾಕೆಯನ್ನು ಮದುವೆ ಮಾಡಿಕೊಂಡಿದ್ದನು. ಮದುವೆಯಾಗಿ ಕೇವಲ ಮೂರು ವರ್ಷಗಳಲ್ಲಿ ಆತನ ಹೆಂಡತಿ ತೀರಿಕೊಂಡಳು. ಅಂದಿನಿಂದ ವಿಧುರನಾಗಿ ಸಂತೋಷ ಜೀವನ ಕಳೆದನು. ಸುಮಾರು ವರ್ಷಗಳ ಹಿಂದೆ ಈತನ ತಂದೆ ವಿಶ್ವನಾಥ ತೀರಿಕೊಂಡಿದ್ದನು. ತಾಯಿ ಮಂಗಲಾಳೇ ಸಂತೋಷನ ದೇಖರೇಕಿ ನೋಡಿಕೊಳ್ಳುತ್ತಿದ್ದಳು. ಸ್ನೇಹಜೀವಿಯಾಗಿದ್ದ ಸಂತೋಷ ಮತ್ತೊಬ್ಬರ ಕಷ್ಟ-ಸುಖಗಳಿಗೆ ಸ್ಪಂದಿಸುವ ಗುಣದವನಾಗಿದ್ದನು.

**ಬೆಳಗಾವಿ**
✍ ಮನ್ನಾಪೂರ

### ಈತನಿಗೊಬ್ಬ ಅಣ್ಣ ವಿನಾಯಕ...

ಸಂತೋಷನಿಗೆ ಒಬ್ಬ ಅಣ್ಣನಿದ್ದನು. ಆತನ ಹೆಸರು ವಿನಾಯಕ. ಈತ ನಿಪ್ಪಾಣಿ ನಗರದಲ್ಲಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ದುಡಿಯುತ್ತಿದ್ದಾನೆ. ಬಂದ ಸಂಬಳದಲ್ಲಿ ತಮ್ಮ ಕುಟುಂಬವನ್ನು ತೃಪ್ತಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿರುವುದು ವಿಶೇಷ. ಈತನ ಹೆಂಡತಿ ಅರ್ಚನಾ ಸದ್ಯ ಯಮಗರ್ಣಿ ಗ್ರಾಮ ಪಂಚಾಯತಿಯ ಸದಸ್ಯೆಯಾಗಿದ್ದಾಳೆ. ವಿನಾಯಕ ಮತ್ತು ಅರ್ಚನಾ ದಂಪತಿಗಳಿಗೆ ಅಭಿಲಾಷಾ ಮಗಳು, ಪ್ರಶಾಂತ ಮಗ ಎಂಬ ಎರಡು ಮಕ್ಕಳಿದ್ದು, ತಮ್ಮ ಜತೆಗೆ ಸಂತೋಷನು ಇರಬೇಕೆಂದು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅಣ್ಣ-ತಮ್ಮ ಜೋಡೆತ್ತುಗಳಂತೆ ಸಂಸಾರ ಸಾಗಿಸಿಕೊಂಡು ಬರುತ್ತಿದ್ದರು. ಈಗ ದಿಢೀರನೇ ತನ್ನ ತಮ್ಮ ಸಂತೋಷನ ಕೊಲೆಯನ್ನು ಆತನ ಅಣ್ಣ ವಿನಾಯಕ, ತಾಯಿ ಮಂಗಲಾಗೆ ಅರಗಿಸಿಕೊಳ್ಳಲಾಗುತ್ತಿಲ್ಲ. ಇಡೀ ಊರಿನ ನೂರಾರು ಯುವಕರು ಸಂತೋಷ ಕೊಲೆಯಾಗಿದ್ದಾಗ ರೋಧಿಸಿದ್ದರು.

### ಸಮಾಜ ಸೇವಕನಾಗಿದ್ದನು...

ಇತ್ತೀಚಿಗೆ ಕೊಲೆ ಆಗಿರುವ ಸಂತೋಷ ಸಂಘಟನೆ, ಸಮಾಜ ಸೇವೆ ಎಂದು ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಓಡಾಡಿಕೊಂಡಿದ್ದನು. ಅಧಿಕಾರಿಗಳ ಮತ್ತು ರಾಜಕಾರಣಿಗಳ ಸಖ್ಯ ಬೆಳೆಸಿಕೊಂಡಿದ್ದ ಸಂತೋಷ ಊರವರ, ಅಸಹಾಯಕರ ಕೆಲಸ ಕಾರ್ಯಗಳನ್ನು ತನ್ನ ವರ್ಚಸ್ಸಿನಿಂದ ಸಲೀಸಾಗಿ ಮಾಡಿಕೊಡುತ್ತಿದ್ದನು. ಅಲ್ಲದೇ ಗ್ರಾಮ ಪಂಚಾಯತಿಯಲ್ಲೂ ಕೂಡಾ ವರ್ಚಸ್ಸು ಹೊಂದಿದ್ದನು. ಸ್ನೇಹಜೀವಿ, ಜನಪರನಾಗಿ ಸಂತೋಷ ಚವ್ಹಾಣ ಹೆಸರು ಮಾಡಿದ್ದನು. ಊರಿನಲ್ಲಿ ದೊಡ್ಡವರ ಸ್ನೇಹವನ್ನು ಸಂಪಾದಿಸಿಕೊಂಡು ಒಬ್ಬ ಸಮಾಜ ಸೇವಕನಾಗಿ ಸಾರ್ವಜನಿಕರ ಪ್ರೀತಿಗೆ ಪಾತ್ರನಾಗಿದ್ದ ಸಂತೋಷನ ಕೊಲೆ ಎಲ್ಲರಿಗೂ ಬರಸಿಡಿಲು ಬಡಿದಂತಾಗಿದೆ. ಸಮಾಜ ಸೇವಕನ ಕೊಲೆ ಏಕೆ ನಡೆಯಿತು...? ಅಂತಹ ತಪ್ಪನ್ನು ಸಂತೋಷ ಏನು ಮಾಡಿದ್ದನು? ಎಂಬ ಪ್ರಶ್ನೆ ಮಾಡುವುದು ಸ್ವಾಭಾವಿಕ... ಅದಕ್ಕೆ ಉತ್ತರ ಇಲ್ಲಿಗೆ ಓದಿರಿ.

### ಸೌರಭ ವಸಂತ ಕೊರವಿ ಎಂಬ ವಂಚಕ...


ಊರು ಇದ್ದ ಮೇಲೆ ರಾಮಾಯಣ ಇದ್ದದ್ದೇ. ಯಮಗರ್ಣಿಯ ಬಸ್ ಸ್ಟ್ಯಾಂಡ್ ಹತ್ತಿರ ಸೌರಭ ವಸಂತ ಕೊರವಿ ಎಂಬ ಐನಾತಿ ಇದ್ದನು. ಮೈ ಮುರಿದು ನಡು ಬಗ್ಗಿಸಿ ದುಡಿದು ಎಲ್ಲರಂತೆ ಬದುಕಿದ್ದರೆ ಇಂದು ಸೌರಭ ಎಲ್ಲರಂತೆ ಚೆನ್ನಾಗಿರುತ್ತಿದ್ದನು. ಆದರೆ ಸುಳ್ಳು ಹೇಳುವುದರಲ್ಲಿ, ಜನರನ್ನು ಯಾಮಾರಿಸುವಲ್ಲಿ ಎತ್ತಿದ ಕುಳವಾಗಿದ್ದ ಈತ ದಿಢೀರ್ ಶ್ರೀಮಂತನಾಗುವ ಹುಚ್ಚು ಕನಸು ಕಂಡು ಕನವರಿಸತೊಡಗಿದ್ದನು. ಇವನ ಹತ್ತಿರ ಎಂತಹ ಐಡಿಯಾಗಳು ಇದ್ದವು ಎಂದು ತಿಳಿದರೆ ಒಂದು ಕ್ಷಣ ದಂಗಾಗಿ ಹೋಗುತ್ತಿರಿ. ಈತ ಮನೆಯಲ್ಲಿ ಕಾಲು ಬಿಟ್ಟ ಕತ್ತೆಯಂತೆ ತಿರುಗುತ್ತ ಮಹಾ ಐನಾತಿಯಾಗಿ ಬೆಳೆದು ಬಂದನು.

### ನಿರುದ್ಯೋಗಿ ಯುವಕರಿಂದ ಲಕ್ಷ... ಲಕ್ಷ ಪೀಕಿದ್ದನು...

ಅರಳು ಹುರಿದಂತೆ ಪಟ... ಪಟನೇ ಮಾತನಾಡುತ್ತ

☞ 5


ವಂಚಕ ಸೌರಭ ಕೊರವಿಯಿಂದ ಕೊಲೆಯಾಗಿರುವ ಸಮಾಜ ಸೇವಕ ಸಂತೋಷ ಚವ್ಹಾಣನ ಮೃತದೇಹ



ರಾಷ್ಟ್ರೀಯ ಹೆದ್ದಾರಿ ನಂ. 4ರ ಮೇಲಿರುವ ಯಮಗರ್ಣಿ ಸಮೀಪದ ಸಹಾರಾ ಹೋಟೆಲ್ ಮುಂದೆ ಸಂತೋಷನ ಕೊಲೆ ನಡೆದಿದೆ

4 ☞

ಸತ್ಯದ ತಲೆಯ ಮೇಲೆ ಹೊಡೆದಂತೆ ಸುಳ್ಳು ಹೇಳುವುದರಲ್ಲಿ ಮಹಾ ನಿಸ್ಸೀಮನಾಗಿದ್ದನು. ಈತ ಹೆಚ್ಚಾಗಿ ಹಣ ಇರುತ್ತಿದ್ದ ನಿರುದ್ಯೋಗಿ ಯುವಕರನ್ನೇ ಟಾರ್ಗೆಟ್ ಮಾಡಿ ಸರಕಾರಿ ನೌಕರಿ ಕೊಡಿಸುತ್ತೇನೆಂದು ಲಕ್ಷ... ಲಕ್ಷ ರೂ.ಗಳನ್ನು ಪೀಕಿದ್ದನು. 'ಇಂದು-ನಾಳೆ' ಎಂಬುದನ್ನು ಕಂಠ ಪಾಠ ಮಾಡಿ ಯುವಕರನ್ನು ವಂಚಿಸುತ್ತಿದ್ದನು. ಇತ್ತ ನೌಕರಿಯೂ ಇಲ್ಲ... ತಾವು ಕೊಟ್ಟ ಲಕ್ಷ... ಲಕ್ಷ ರೂ.ಗಳು ಇಲ್ಲ... ಎಂದು ಹಣ ಕಳೆದುಕೊಂಡ ಯುವಕರು ಮತ್ತು ಮನೆಯವರು ಹಿಡಿಶಾಪ ಹಾಕಿ ಈತನ ಬೆನ್ನ ಹಿಂದೆ ಬೇತಾಳನಂತೆ ಗಂಟು ಬಿದ್ದಿದ್ದರು. ತಾನು ತೆಗೆದುಕೊಂಡ ಬಹುತೇಕ ಹಣವನ್ನು ಮೋಜು-ಮಜಾ ಮಾಡಿ ಉಡಾಯಿಸಿದ್ದ ವಂಚಕ ಸೌರಭ ಕೊರವಿ ಹಣ ಕೊಟ್ಟವರು ಮುಂದೆ ಬಂದಾಗ ಮುಖ ಮರೆಸಿಕೊಂಡು ತಿರುಗತೊಡಗಿದನು. ಕೆಲವೊಮ್ಮೆ ಹಣ ಕೊಟ್ಟ ಯುವಕರು ಸೌರಭನೊಂದಿಗೆ ಜಗಳಕ್ಕಿಳಿದಿದ್ದು ಉಂಟು.


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ

**ಸೌರಭನಿಗೆ ಎಚ್ಚರಿಕೆ ನೀಡಿದ್ದ ಸಂತೋಷ...**

ಊರಿನ ನಿರುದ್ಯೋಗಿ ಯುವಕರಿಗೆ ಸರಕಾರಿ ನೌಕರಿ ಕೊಡಿಸುವುದಾಗಿ ಐನಾತಿ ಸೌರಭ ವಸಂತ ಕೊರವಿ ಲಕ್ಷ... ಲಕ್ಷ ರೂ.ಗಳು ಪೀಕಿದ್ದ ಸಂಗತಿ ಸಮಾಜ ಸೇವಕ ಸಂತೋಷ ಚವ್ಹಾಣನಿಗೆ ತಿಳಿದಾಗ ಆತ ನೇರವಾಗಿ ಸೌರಭ ಕೊರವಿಯನ್ನು ಕಂಡು 'ಸೌರಭ ನೀನು ಹೀಗೆ ಮಾಡುವುದು ತಪ್ಪು... ಈ ರೀತಿ ಮಾಡುವುದು ತಪ್ಪು... ಜನರನ್ನು ಮತ್ತು ಯುವಕರನ್ನು ತಪ್ಪು ದಾರಿ ಹಿಡಿಸುತ್ತಿರುವಿ. ನೀನು ತಪ್ಪು ತಿದ್ದಿಕೊಂಡರೆ ಸರಿ ಇಲ್ಲದಿದ್ದರೆ ಪರಿಣಾಮ ನೆಟ್ಟಗಾಗುವುದಿಲ್ಲ' ಎಂದು ಎಚ್ಚರಿಸಿದ್ದನು. ಅದಲ್ಲದೇ ಊರಿನಲ್ಲಿಯೂ ಕೂಡಾ ಯಾರು ಸೌರಭ ಕೊರವಿಯ ಮಾತು ನಂಬಿ ದುಡ್ಡು ಕೊಡಬೇಡಿ. ಕೊಟ್ಟಿರುವ ದುಡ್ಡನ್ನು ತಕ್ಷಣ ವಸೂಲಿ ಮಾಡಿಕೊಳ್ಳಿ ಎಂದು ಹೇಳುತ್ತಿದ್ದನು. ಇದರಿಂದ ಸೌರಭ ಕೊರವಿಯ ಇಮೇಜು ಕಡಿಮೆಯಾಗತೊಡಗಿತು. ಆಗ ಸಹಜವಾಗಿ ಸಮಾಜ ಸೇವಕ ಸಂತೋಷನ ಮೇಲೆ ಸೌರಭ ಉರಿದು ಬಿದ್ದನು.

**ಕಂಪ್ಯೂಟರ್ ಉತಾರಕ್ಕೆ ಅಡ್ಡಗಾಲು...**

ನಿರುದ್ಯೋಗಿ ವಿದ್ಯಾವಂತ ಯುವಕರಿಂದ ನೌಕರಿ ಕೊಡಿಸುತ್ತೇನೆಂದು ಹಣ ಪೀಕಿದ್ದ ವಂಚಕ ಸೌರಭ ಕೊರವಿಗೆ ತೀರಾ ಇಕ್ಕಟ್ಟಿನ ಪರಿಸ್ಥಿತಿ ಬಂದೊದಗಿತ್ತು. ಹಣ ಕೊಟ್ಟ ಯುವಕರು ತಮಗೆ ಹಣ ಬೇಕೆಂದು ಎದೆಯ ಮೇಲೆ ನಿಂತಿದ್ದರು. ಅದಕ್ಕಾಗಿ ಯಮಗರ್ಣಿಯ ವಾಸದ ಮನೆಯನ್ನು ಮಾರಿ ಹಣ ಮುಟ್ಟಿಸಬೇಕೆಂದು ಇರಾದೆಯಿಂದ ಮುಂದಾದನು. ಗ್ರಾಮ ಪಂಚಾಯತಿಯಲ್ಲಿ ಕಂಪ್ಯೂಟರ್ ಉತಾರಕ್ಕಾಗಿ ಅರ್ಜಿಯನ್ನು ಸೌರಭ ಕೊರವಿ ನೀಡಿದ್ದನು. ಆದರೆ ಕಂಪ್ಯೂಟರ್ ಉತಾರಕ್ಕೆ ಅಡ್ಡಗಾಲು ಹಾಕಿದ್ದನು ಸಮಾಜ ಸೇವಕ ಸಂತೋಷ. ವಂಚಕ ಕೊರವಿ ಪರಿ ಪರಿಯಾಗಿ ತನಗೆ ಗ್ರಾಮ ಪಂಚಾಯತಿಯ ಕಂಪ್ಯೂಟರ್ ಬೇಕೆಂದು ಹೇಗಾದರೂ ಮಾಡಿ ಕೊಡಿಸು ಎಂದು ಪರಿ... ಪರಿಯಾಗಿ ಸಂತೋಷನನ್ನು ಬೇಡಿಕೊಂಡನು. ಆದರೆ ಅದು ಆಗದಾದಾಗ ಸೌರಭ ಕೊರವಿ ನಿರ್ಧಾರಕ್ಕೆ ಬಂದನು. ತನ್ನ ಪ್ರತಿಯೊಂದು ವ್ಯವಹಾರದಲ್ಲಿ ಅಡ್ಡಗಾಲು ಹಾಕುತ್ತಿರುವ ಸಂತೋಷ ಬದುಕಿರಬಾರದು ಎಂದು ಆತನ ಕೊಲೆಗೆ ಸ್ಕೇಚ್ ರೂಪಿಸತೊಡಗಿದನು.

**ಸಹಾರಾ ಹೋಟೆಲ್ ಮುಂದೆ ಇರಿತ...**

ಇತ್ತೀಚಿಗೆ ಯಮಗರ್ಣಿ ಊರಿನಲ್ಲಿ ಸಮಾಜ ಸೇವಕ ಸಂತೋಷನನ್ನು ಕಂಡು ಸೌರಭ ಕೊರವಿ ಗುರಾಯಿಸತೊಡಗಿದ್ದನು. 'ನನಗೆ ಅಡ್ಡ ಬಂದ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ'ವೆಂದು ಬೆದರಿಕೆ ಸಂತೋಷನಿಗೆ ನಿರಂತರ ವಾಗಿತ್ತು. ಅಂದು ದಿನಾಂಕ 10-10-2024 ಗುರುವಾರದ ದಿನವಾಗಿತ್ತು. ಸಂತೋಷ ಚವ್ಹಾಣನನ್ನು ಕೊಲೆ ಮಾಡುವುದಕ್ಕಾಗಿ ಹರಿತವಾದ ಚಾಕು ಖರೀದಿಸಿ ಸೌರಭ ತನ್ನೊಂದಿಗೆ ಇರಿಸಿಕೊಂಡಿದ್ದನು.

ಗುರುವಾರ ದಿನಾಂಕ 10-10-2024ರಂದು ಸಂತೋಷ ಮನೆಯಲ್ಲಿ ಊಟ ಮಾಡಿಕೊಂಡು ನಡೆದುಕೊಂಡು ಹೆದ್ದಾರಿ ಮೇಲಿರುವ ಸಹಾರಾ ಹೋಟೆಲಿನತ್ತ ಹೋದನು. ಅಲ್ಲಿಂದ ಯಮಗರ್ಣಿಯ ನಾಶೀರ ಖಾನ್ ಇನಾಂದಾರ, ಭರತ ಶಿವಾಜಿ ಸುರವಂಗಿ ಕೂಡಿಕೊಂಡು ಮಾತನಾಡುತ್ತ ನಿಂತಿದ್ದರು. ಇದೇ ಸಮಯದಲ್ಲಿ ಸೌರಭ ವಸಂತ ಕೊರವಿ ಬಂದು ಕೆಲ ಹೊತ್ತು ಮಾತನಾಡಿದನು. ಕೆಲ ಸಮಯದ ನಂತರ ಸೌರಭ ಸಂತೋಷನೊಡನೆ ಮಾತನಾಡುತ್ತ 'ಏಽ ಸಂತೋಷ ನಿನ್ನ ಹತ್ತಿರ ಮಾತನಾಡುವುದಿದೆ ಸ್ವಲ್ಪ ಆ ಕಡೆಗೆ ಹೋಗೋಣ' ಎಂದನು. ಆಗ ಸಂತೋಷನ ಸ್ನೇಹಿತರು 'ಏನಾದರೂ ಇದ್ದರೆ ಇಲ್ಲಿಯೇ ಮಾತನಾಡಿ ಎಂದರು' ಅದಕ್ಕೊಪ್ಪದ ಸೌರಭ ಸಂತೋಷನನ್ನು ಕರೆದುಕೊಂಡು ಹೋಟೆಲಿನ ಟಾಯ್ಲೆಟ್‌ಗಳತ್ತ ಹೋಗಿದ್ದಾನೆ.

ಅಲ್ಲಿ ಸಂತೋಷನಿಗೂ ಮತ್ತು ಸೌರಭನಿಗೂ ವಾದ-ವಿವಾದ ನಡೆದಿದೆ 'ನೋಡು... ಸಂತೋಷ ನನ್ನ ಪ್ರತಿ ಕೆಲಸದಲ್ಲಿ ಅಡ್ಡ ಬರ್ತಿಯಾ ಹುಷಾರ್' ಎಂದಿದ್ದಾನೆ. ಆ ಮಾತಿಗೆ ಸಂತೋಷನು 'ಏನ ಧಮ್ಮ ಇದ್ದರೆ ಏನ ಮಾಡಕೋತಿ ಮಾಡಕೋ ಮಗನ' ಎಂದಿದ್ದಾನೆ. ಆಕ್ರೋಶಗೊಂಡ ಸೌರಭ ತನ್ನ ಹತ್ತಿರವಿದ್ದ ಹರಿತವಾದ ಚಾಕುವಿನಿಂದ ಹೊಟ್ಟೆಯ ಭಾಗಕ್ಕೆ ಕಸಕ್... ಕಸಕ್ ಎಂದು ಎರಡು-ಮೂರು ಖಾಲಿ ಇರಿದಿದ್ದಾನೆ. ಸಂತೋಷನ ಹೊಟ್ಟೆಯಿಂದ ರಕ್ತ ಬುಳ... ಬುಳನೇ ದಾರೆಯಾಗಿದೆ. ರಕ್ತ ನೋಡಿ ತುಂಬಾ ಹೆದರಿದ್ದ ಸಂತೋಷ ತನ್ನ ಹೊಟ್ಟೆ ಹಿಡಿದುಕೊಂಡು ಸ್ನೇಹಿತರ ಹತ್ತಿರ ಬಂದು 'ಸೌರಭ ನನಗ ಘಾತ ಮಾಡಿದಾ' ಎಂದಿದ್ದಾನೆ. ಹಿಂದಿನಿಂದ ರಕ್ತ-ಸಿಕ್ತ ಚಾಕು ಕೈಯಲ್ಲಿ ಹಿಡಿದು 'ಮಗನೇ ನಿನಗೆ ಯಾವಾಗಲೋ ಗತಿ ಕಾಣಿಸಬೇಕಾಗಿತ್ತು' ಎಂದು ಚಾಕು ಹಿಡಿದುಕೊಂಡು ಸರಸರನೇ ನಡೆದು ಮರೆಯಾದನು



ಸಂತೋಷ ಚವ್ಹಾಣ ಕೊಲೆ ನಡೆದಿದ್ದ ಸ್ಥಳವನ್ನು ಪಂಚನಾಮೆ ಮಾಡುತ್ತಿರುವ ಸಿಪಿಐ ಬಿ.ಎಸ್. ತಳವಾರ ಹಾಗೂ ಸಿಬ್ಬಂದಿ


**ಚಿಕಿತ್ಸೆ ಫಲಿಸದೇ ಆಸ್ಪತ್ರೆಯಲ್ಲಿ ಸಾವು...**

ಸಹಾರಾ ಹೋಟೆಲ್ ಮುಂದೆ ನಡೆದ ಈ ಘಟನೆಯಿಂದ ಸಮಾಜ ಸೇವಕ ಸಂತೋಷನ ಸ್ನೇಹಿತರು ಗಾಭರಿಗೊಂಡರು. ಹೇಗಾದರೂ ಮಾಡಿ ಸ್ನೇಹಿತನನ್ನು ಬದುಕಿಸಲು ಹೆಣಗಾಡಿದರು. ಸ್ನೇಹಿತರ ಇಂಡಿಕಾ ಕಾರು ತರಿಸಿ ಅದರಲ್ಲಿ ಚಾಕುವಿನ ಇರಿತಕ್ಕೆ ಒಳಗಾಗಿದ್ದ ಸಂತೋಷನನ್ನು ನಿಪ್ಪಾಣಿಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರು. ಅಷ್ಟರಲ್ಲಿ ಸುದ್ದಿ ತಿಳಿದ ಸಂತೋಷನ ಅಣ್ಣ ವಿನಾಯಕ ಮತ್ತಿತರರು ಬಂದಿದ್ದರು. ತೀವ್ರ ರಕ್ತಸ್ರಾವ ವಾಗಿದ್ದ ಸಂತೋಷ ಉಪಚಾರ ಫಲಿಸದೇ ರಾತ್ರಿ 9-45 ಗಂಟೆಗೆ ಬಾರದ ಲೋಕಕ್ಕೆ ಪಯಣ ಬೆಳೆಸಿದ್ದನು.

**ಪೊಲೀಸರಿಗೆ ದೂರು...**

ಸಂತೋಷನ ಕೊಲೆಯಿಂದ ಗರಬಡಿದವರಂತೆ


ಸಿಪಿಐ ಬಿ.ಎಸ್. ತಳವಾರ


ಪಿಎಸ್ಐ ರಮೇಶ ಪವಾರ

ಆಗಿದ್ದ ಅಣ್ಣ ವಿನಾಯಕನ ಆಕ್ರಂದನ, ಸಂಬಂಧಿಕರ ರೋಧನ ಮುಗಿಲು ಮುಟ್ಟಿತ್ತು. ವಿನಾಯಕ ನೇರವಾಗಿ ಬಸವೇಶ್ವರ ಚೌಕ ಪೊಲೀಸ್ ಠಾಣೆಗೆ ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪಿಎಸ್ಐ ರಮೇಶ ಪವಾರ ಅವರನ್ನು ಕಂಡು ನಡೆದು ಹೋದ ಸಂಗತಿಯೆಲ್ಲವನ್ನು ವಿವರಿಸಿ ಸೌರಭ ವಸಂತ ಕೊರವಿ ಮೇಲೆ ದೂರನ್ನು ನೀಡಿದನು.

ಸಂತೋಷ ಚವ್ಹಾಣ ಕೊಲೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪಿಎಸ್ಐ ರಮೇಶ ಪವಾರ ತಕ್ಷಣ ವಿಷಯವನ್ನು ಸಿಪಿಐ ಬಿ.ಎಸ್. ತಳವಾರ, ಚಿಕ್ಕೋಡಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು. ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳ ಹಾಗೂ ಆಸ್ಪತ್ರೆಯಲ್ಲಿದ್ದ ಸಂತೋಷನ ಶವವನ್ನು ಪರಿಶೀಲನೆ ಮಾಡಿದ ಸಿಪಿಐ ಬಿ.ಎಸ್. ತಳವಾರ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಕೊಲೆಗೆ ಕಾರಣವೇನೆಂದು ಸಂತೋಷನ ಅಣ್ಣನನ್ನು ವಿವರವಾಗಿ ಪ್ರಶ್ನಿಸಿ ಹಂತಕನ ಬಂಧನಕ್ಕೆ ತಯಾರಿ ನಡೆಸಿದ್ದರು.

ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ಆರ್.ಬಿ. ಬಸರಗಿ ಅವರುಗಳಿಗೆ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ಬಿ.ಎಸ್. ತಳವಾರ ನಡೆದಿದ ವಿಷಯವನ್ನು ಸವಿವರವಾಗಿ ತಿಳಿಸಿ ಅವರ ನಿರ್ದೇಶನದಂತೆ ಮುಂದಿನ ತನಿಖೆಗೆ ತೊಡಗಿಕೊಂಡರು. ಇಲ್ಲಿ ಸ್ವತಃ ಡಿವೈಎಸ್ಪಿ ಗೌಡರ ಅವರು ಖುದ್ದು ತನಿಖೆಯ ನೇತೃತ್ವ ವಹಿಸಿಕೊಂಡರು. ದಿನಾಂಕ 11-10-2024 ರಂದು ಸ್ವತಃ ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರು ನಿಪ್ಪಾಣಿಗೆ ಧಾವಿಸಿ ಬಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲದೇ ತನಿಖಾಧಿಕಾರಿ ಬಿ.ಎಸ್. ತಳವಾರ ಪಿಎಸ್ಐ ರಮೇಶ ಪವಾರ ಅವರಿಗೆ ಆರೋಪಿ ಬಂಧನದ ಕುರಿತು ವಿಶೇಷ ನಿರ್ದೇಶನ ನೀಡಿದರು.

**ಹಂತಕ ಸೌರಭ ಕೊರವಿ ಬಂಧನ...**

ಸಂತೋಷ ವಿಶ್ವನಾಥ ಚವ್ಹಾಣನನ್ನು ಕೊಲೆ ಮಾಡಿ ಪರಾರಿ ಆಗಿದ್ದ ಹಂತಕ ಸೌರಭ ವಸಂತ ಕೊರವಿ ಯಾವುದೇ ಕಾರಣಕ್ಕೂ ತಲೆಮರೆಸಿಕೊಳ್ಳದಂತೆ ಸೂಕ್ತ ಎಚ್ಚರಿಕೆ ವಹಿಸಿದ್ದರು ಸಿಪಿಐ ಬಿ.ಎಸ್. ತಳವಾರ. ಖಚಿತ ಮಾಹಿತಿ ಆಧರಿಸಿ ಕೊಲೆ ನಡೆದ 12 ಗಂಟೆಯೊಳಗೆ ಆರೋಪಿ ಸೌರಭ ವಸಂತ ಕೊರವಿಯನ್ನು ಪಿಎಸ್ಐ ರಮೇಶ ಪವಾರ ಮತ್ತು ಸಿಬ್ಬಂದಿಗಳು ವಶಕ್ಕೆ ತೆಗೆದುಕೊಂಡು ಸಿಪಿಐ ಬಿ.ಎಸ್. ತಳವಾರ ಮುಂದೆ ಹಾಜರು ಪಡಿಸಿದರು.

ವಿಚಾರಣೆ ಕಾಲಕ್ಕೆ ಹಂತಕ ಸೌರಭ ತಾನೇ ಸಂತೋಷನ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡನು. ಕೃತ್ಯಕ್ಕೆ ಬಳಸಿದ ಚಾಕು ಮತ್ತು ರಕ್ತ-ಸಿಕ್ತ ಬಟ್ಟೆಗಳನ್ನು ಜಪ್ತಿ ಕಾಲಕ್ಕೆ ಪಂಚರ ಸಮಕ್ಷಮ ಸಿಪಿಐ ಬಿ.ಎಸ್. ತಳವಾರ ಅವರ ಮುಂದೆ ಹಾಜರುಪಡಿಸಿದ್ದಾನೆ. ಆರೋಪಿ ಸೌರಭ ಇದೀಗ ಜೈಲು ಸೇರಿಕೊಂಡು ಮುದ್ದೆ ಮುರಿಯುತ್ತಿದ್ದಾನೆ. ☯



ಸ್ನೇಹಜೀವಿ ಸಂತೋಷನಿಗೆ ಗೆಳೆಯರ ಬಳಗದ ಭಾವಪೂರ್ಣ ಶ್ರದ್ಧಾಂಜಲಿ

## ಮುರುಕು ಮನೆಯಲ್ಲಿ ಜೀವನ...

ಸಮಾಜ ಸೇವೆಯ ಹೆಸರಿನಲ್ಲಿ ದಿನಕ್ಕೆ ಸಾವಿರಾರು ರೂ.ಗಳನ್ನು ಗಳಿಸುತ್ತಿರುವ ಇಂದಿನ ದಿನಗಳಲ್ಲಿ ಸಂತೋಷ ವಿಶ್ವನಾಥ ಚವ್ಹಾಣ ಏನನ್ನೂ ಗಳಿಸಿಕೊಂಡಿಲ್ಲ. ಅದೇ ಮುರುಕು ಹಳೇ ಮನೆಯಲ್ಲಿ ತಾಯಿ, ಅಣ್ಣ, ಅತ್ತಿಗೆ, ಅಣ್ಣನ ಮಕ್ಕಲೊಂದಿಗೆ ಜೀವನ ನಡೆಸುತ್ತಿದ್ದನು. ಸುಮಾರು ವರ್ಷಗಳ ಹಿಂದೆ ಹೆಂಡತಿ ತೀರಿಕೊಂಡಾಗ ಸಂತೋಷನಿಗೆ ಸಂಬಂಧಿಕರು ಮತ್ತು ಸ್ನೇಹಿತರು ಮತ್ತೊಂದು ಮದುವೆ ಮಾಡಿಕೊಳ್ಳಲು ಆಗ್ರಹಿಸಿದರೂ ಮದುವೆ ಮಾಡಿಕೊಳ್ಳದೇ ಕೊನೆಯವರೆಗೂ ಹಾಗೆಯೇ ಉಳಿದಿದ್ದನು.

ಅಣ್ಣ ವಿನಾಯಕ ಕಳೆದ 25 ವರ್ಷಗಳಿಂದ ನಿಪ್ಪಾಣಿ ನಗರದಲ್ಲಿ ಜುಂಜಾರ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡಿಕೊಂಡು ಬಂದ ಅಲ್ಪ ಸಂಬಳದಲ್ಲಿ ಮನೆ ನಡೆಸುತ್ತಿದ್ದಾನೆ. ಇನ್ನೂ ಅಣ್ಣನ ಹೆಂಡತಿ ಅರ್ಚನಾ ಯಮಗರ್ಣಿ ಗ್ರಾಮ ಪಂಚಾಯತಿಯ ಸದಸ್ಯೆ. ಸಮಾಜ ಸೇವೆಯ ಬೆನ್ನ ಬಿದ್ದು ಮೈಮೇಲಿನ ಬಟ್ಟೆಗಳನ್ನು ಹೊಸದಾಗಿ ಕೊಳ್ಳುವ ತಾಕತ್ತು ಇರದ ಸಂತೋಷ ಚವ್ಹಾಣ ಇಂದು ಯಮಗರ್ಣಿ ಊರವರ ಬಾಯಲ್ಲಿ ನೆನಪಾಗಿ ಉಳಿದಿದ್ದಾನೆ. ಇಂದು ಸಂತೋಷ ಅನ್ಯಾಯವನ್ನು ಪ್ರತಿಭಟಿಸಲು ಹೋಗಿ ಕೊಲೆ ಆಗಿದ್ದಾನೆ. ಆದರೆ ಆತನ ಕೊಲೆಗೆ ಯಾರು ಪ್ರತಿಭಟಿಸಲು ಮುಂದೆ ಬರುತ್ತಿಲ್ಲ. ಹೇಗಿದೆ ನೋಡಿ ಜನಗಳ ಮನಸ್ಥಿತಿ ಅದಕ್ಕೆ ಹೇಳುವುದು 'ಊರಿಗೆ ಉಪಕಾರ ಮಾಡಬಾರದು ಶವಕ್ಕೆ ಶೃಂಗಾರ ಮಾಡಬಾರದು...' ಎಂದು. ಏನೇ ಆದರೂ ಸಂತೋಷನ ಕೊಲೆಗಾರನಿಗೆ ಕಠಿಣ ಶಿಕ್ಷೆ ವಿಧಿಸುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಬೇಕಾಗಿದೆ. ☯

# ಕಚಗುಳಿ

## ಮಿಡ್‌ನೈಟ್ ಮಂಚೂರಿ

ಆಷಾಡ ಮಾಸದಲ್ಲಿ ತುಂತುರು ಮಳೆಯ ಅಬ್ಬರ ನಿರಂತರವಾಗಿದೆ. ರಾತ್ರಿ ಏಳು ಗಂಟೆಗೆ ಪ್ರಾರಂಭವಾದ ಮಳೆ ಹತ್ತು ಗಂಟೆ ಆಗಿದ್ದರೂ ಸಹ ಕಡಿಮೆ ಆಗಿರಲಿಲ್ಲ.

ಆಟೋ ಬರುತ್ತಿದೆ.

ಅವಳು ಆಗಾಗ ತಿರುಗಿ ನೋಡುತ್ತಿದ್ದಾಳೆ. ಅವಳು ಸ್ವಲ್ಪ ಆತಂಕಕ್ಕೆ ಒಳಗಾಗಿದ್ದಾಳೆ. ಉದ್ವಿಗ್ನತೆ ಜಾಸ್ತಿ ಆಗಿದೆ. ತಂಪಿನಲ್ಲಿ ಬೆವರುತ್ತಿದ್ದಾಳೆ.

'ತಿಲಕನಗರ' ಎಂಬ ಫಲಕ ಕಾಣುತ್ತಿರುವ ಕಿರುರಸ್ತೆಯಲ್ಲಿರುವ ಬಲಭಾಗದ ತಿರುವಿನಲ್ಲಿ ಆಟೋ ತಿರುಗಿಸಲು ಹೇಳಿದಳು.

ಮಳೆ ಜೋರಾಯಿತು. ಆಟೋ ಈಗ ಅವಳು ಹೇಳಿದ ಮನೆಯೊಂದರ ಮುಂದೆ ನಿಂತುಕೊಂಡಿತು. ಆಟೋ ಫೇರ್ ಕೊಟ್ಟು ಸೂಟ್‌ಕೇಸ್ ಹಿಡಿದು ಸುರಿಯುತ್ತಿರುವ ಮಳೆಯಲ್ಲಿ ನೆನೆಯುತ್ತಲೇ ಮೆಟ್ಟಿಲುಗಳನ್ನು ಹತ್ತಿ ಕಾಲಿಂಗ್ ಬಝರ್‌ಅನ್ನು ಪ್ರೆಸ್ ಮಾಡಿದಳು.

ಅವಳು ಮಂದಾಕಿನಿ...!

●●●

ತಿಲಕನಗರ 2ನೇ ಕ್ರಾಸ್, ನಂ. 375/ಎ. ಈ ಮನೆಯ ಒಳಗೆ ವಿದ್ಯುತ್ ದೀಪದ ಬೆಳಕು ಬೆಳಗುತ್ತಿದೆ. ಆ ಮನೇಲಿ ಈಗ ಅವನೊಬ್ಬನೇ ಇದ್ದಾನೆ. ಅವನ ಹೆಸರು ವಿಶ್ವ... ವಿಶ್ವನಾಥ.

ಅವನು ಬ್ಯಾಚುಲರ್ ಅಲ್ಲ, ಕೇವಲ ಒಂಭತ್ತು ತಿಂಗಳ ಹಿಂದೆ ಅವನ ಮದುವೆ ಆಗಿತ್ತು. ಈಗವನು ಒಂಟಿಯಾಗಿದ್ದಾನೆ.

ಹೆಂಡತಿ ಶರ್ಮಿಳ. ಸಾಮಾನ್ಯ ರೂಪಿನ ಹೆಣ್ಣು. ಅವಳ ತಂದೆಗೆ ಹಳ್ಳಿಯಲ್ಲಿ ಕಾಫಿ, ತೋಟ, ತೆಂಗಿನ ತೋಟ ಮತ್ತು ಕೆಜಿಗಳ ಲೆಕ್ಕದಲ್ಲಿ ಚಿನ್ನ, ಬೆಳ್ಳಿ ಇದೆ. ಹತ್ತಾರು ಹಳ್ಳಿಗಳಲ್ಲಿ ಅವಳ ತಂದೆಯ ಮತ್ತು ಕುಟುಂಬದ ಹೆಸರು ಪ್ರಖ್ಯಾತವಾಗಿದೆ. ಅಂತಹ ಕುಟುಂಬದ ಹೆಣ್ಣು ಶರ್ಮಿಳ ಸಾಮಾನ್ಯ ಕೆಲಸಗಾರ ವಿಶ್ವನನ್ನು ಮದುವೆ ಆಗಿರೋದು ಆಶ್ಚರ್ಯ.

ಶರ್ಮಿಳ ಸಾಮಾನ್ಯ ರೂಪಿನ ಹೆಣ್ಣು. ಆದರೆ ಅಹಂಕಾರ ಜಾಸ್ತಿ. ತಂದೆಯ ಗುಣ ರಕ್ತಗತವಾಗಿದೆ. ಅವಳು ಲೇಡಿ ಹಿಟ್ಲರ್.

ಇಬ್ಬರು ಹೆಣ್ಣು ಮಕ್ಕಳು. ಶರ್ಮಿಳ ದೊಡ್ಡವಳು. ಅವಳು ವಿಶ್ವನ ಹೀರೋ ಅಪಿಯರೆನ್ಸ್‌ಗೆ ಬೆರಗಾಗಿ ಪ್ರೀತಿ ಮಾಡಿ ಮದುವೆ ಆಗಿದ್ದಳು. ವಿಶ್ವನ ಕೆಲವೇ ಸಾವಿರ ಸಂಬಳ ಅವಳಿಗೆ ಲೆಕ್ಕವೇ ಅಲ್ಲ. ಪ್ರತಿ ತಿಂಗಳ ಅವಳ ತವರುಮನೆಯಿಂದ ದಿನಸಿ ಸಾಮಾನುಗಳು, ತರಕಾರಿ, ಹಣ್ಣು, ತುಪ್ಪ, ಬೆಣ್ಣೆ ಮತ್ತು ರುಚಿಕರವಾದ ತಿಂಡಿಗಳು ತಂದು ಕೊಡುತ್ತಾನೆ.

ಮಗಳು ತುಂಬಾ... ತುಂಬಾ ಸುಖವಾಗಿರಲಿ ಅಂತ ಪ್ರತಿ ತಿಂಗಳು ಅವಳ ಖಾತೆಗೆ ಸಾವಿರಗಳ ಲೆಕ್ಕದಲ್ಲಿ ಹಣ ಹಾಕುತ್ತಾರೆ. ನಗರದಲ್ಲಿ ಒಂದು ಮನೆಯನ್ನು ಖರೀದಿ ಮಾಡಿ ಕೊಡಿಸಿದ್ದಾರೆ. ಶ್ರೀಮಂತಿಕೆಯ ವೈಭವದ ಎಲ್ಲಾ ಫರ್ನೀಚರ್‌ಗಳನ್ನು ಕೊಡಿಸಿದ್ದಾರೆ. ಇವಳೇ ಅಪ್ಪನಿಗೆ ಹೇಳಿ ಗಂಡನಿಗೆ ಕೊಡಿಸಿದ್ದಾಳೆ. ಕಾರು ಮತ್ತು ಬೈಕು!

ಇಷ್ಟೆಲ್ಲಾ ಶ್ರೀಮಂತಿಕೆ ಇರುವ ಮುಂದೆ ಅರವತ್ತು ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಆಸ್ತಿ ಬರುವ ಇವಳು ಹೇಗಿರಲು ಸಾಧ್ಯ?

ಲೇಡಿ... ಲೇಡಿ ಹಿಟ್ಲರ್! ಗಂಡನ ಮೇಲೆ ಅಧಿಕಾರ ಚಲಾಯಿಸುತ್ತಾಳೆ. ಅವನನ್ನು ತಾತ್ಸಾರದಿಂದ ಕಾಣುತ್ತಾ ಟೀಕೆ ಮಾಡಿ ಅವಮಾನಿಸುತ್ತಾಳೆ. ಎಲ್ಲಾ ಅವಳಂತೆ ಆಗಬೇಕು.

ಸೆಕ್ಸ್ ಸಂಬಂಧ ಹೇಗಿದೆ? ಅವಳಿಗೆ ಬಯಕೆ ಉಂಟಾದರೆ ಗಂಡನನ್ನು ಕರೆದುಕೊಳ್ಳುತ್ತಾಳೆ. ಇಲ್ಲದಿದ್ದರೆ ಮೈ ಮುಟ್ಟಲು ಸಹ ಬಿಡೋಲ್ಲ. ವಿಪರೀತ ಸುಖದಿಂದ ಅವಳ ಶರೀರದ ಜಾಸ್ತಿ ಆಗುತ್ತಿದೆ. ಮನೆ ಕೆಲಸ ಮಾಡಲು ಇಬ್ಬರು ಹೆಂಗಸರಿದ್ದಾರೆ.

ಒಬ್ಬಳು ಕಸ-ಮುಸುರೆ ಮಾಡಿದರೆ ಮತ್ತೊಬ್ಬಳು ತಿಂಡಿ-ಅಡುಗೆ ಮಾಡುತ್ತಾಳೆ.

ಶರ್ಮಿಳಾಗೆ ಏನು ಕೆಲಸ? ತಿನ್ನೋದು-ತಿರುಗೋದು ಮತ್ತು ಮಧ್ಯಾಹ್ನ-ರಾತ್ರಿ ನಿದ್ದೆ ಮಾಡೋದು.

ಇತ್ತೀಚೆಗೆ ಬದಲಾಗಿದ್ದಾಳೆ. ಅಂದರೆ ನಗರದಲ್ಲಿರುವ ಹಲವಾರು ಮಹಿಳಾ ಸಂಘಗಳಲ್ಲಿ ಮೆಂಬರ್ ಆಗಿದ್ದಾಳೆ. ಇನ್ನು ಕೆಲವು ಸಂಘಗಳಲ್ಲಿ ಇವಳೇ ಅಧ್ಯಕ್ಷಳಾಗಿದ್ದಾಳೆ. ಅಂದರೆ ಇವಳು ಧಾರಾಳವಾಗಿ ಸಂಘದ ಕಾರ್ಯಕ್ರಮಗಳಿಗೆ ಹಣ ಕೊಡುವುದರಿಂದ ಇವಳಿಗೆ ವಿಶೇಷವಾದ ಗೌರವ ಕೊಡುತ್ತಾರೆ. ತಿಂಗಳಲ್ಲಿ ಎರಡು ಸಲ ತವರುಮನೆಗೆ ಹೋಗಿ ಕಡಿಮೆ ಅಂದರೂ ಒಂದು ವಾರ ಇದ್ದು ಬರುತ್ತಾಳೆ.

ಇವತ್ತು ಮಧ್ಯಾಹ್ನ ಅವಳು ಕಾರಲ್ಲಿ ತವರೂರಿಗೆ ಹೋಗಿದ್ದಾಳೆ. ಗಂಡನ ಬಗ್ಗೆ ಇವಳಿಗೆ ವಿಪರೀತ ಅನುಮಾನ. ಹಾಗಾಗಿ ದಿನದಲ್ಲಿ ನಾಲ್ಕಾರು ಸಲ ಫೋನ್ ಮಾಡುತ್ತಾಳೆ.

ಆಷಾಡ ಮಾಸದ ರಾತ್ರಿ. ಜಡಿ ಮಳೆ ಸುರಿಯುತ್ತಿದೆ. ಕಾಲಿಂಗ್ ಬಝರ್ ಶಬ್ದ ಮಾಡಿದ್ದರಿಂದ ಮನೆಯೊಳಗಿದ್ದ ವಿಶ್ವ ಗಾಬರಿಯಾದನು. ಈ ರಾತ್ರಿ ಬಂದಿರೋದು ಯಾರು? ಹೆಂಡತಿ ಬಂದಿದ್ದಾಳ? ಅವಳ ಅಪ್ಪ-ಅಮ್ಮ ಅಥವಾ ಸಂಬಂಧಿಕರು ಬಂದಿದ್ದಾರ? ಯಾರೇ ಬಂದರೂ ನನ್ನನ್ನು ಈ ಸ್ಥಿತಿಯಲ್ಲಿ ನೋಡಿದರೆ ಒಂದು ಗತಿ ಕಾಣಿಸಿ ಬಿಡುತ್ತಾರೆ.

ಹಿಂಜರಿಯುತ್ತಲೇ ''ಯಾರು... ಯಾರದು'' ಎಂದನು.

●●●

ಮಳೆಯಿಂದ ನೆನೆದು ತೊಪ್ಪೆಯಾಗಿದ್ದ ಆ ಯುವತಿ ನಡುಗುತ್ತಿದ್ದಾಳೆ. ಮತ್ತೊಮ್ಮೆ ಬೆಲ್ ಮಾಡಿದಳು.

''ರೀ... ಬಾಗಿಲು ತೆಗೆಯುತ್ತೀರ. ವಿಪರೀತ ಮಳೆ ಬರುತ್ತಿದೆ.''

●●●

ಹೆಣ್ಣಿನ ಧ್ವನಿ ನಿಜ. ಆದರೆ ಹೆಂಡತಿ ಅಲ್ಲ. ಅಬ್ಬ... ಜೀವ ಉಳಿಯಿತು ಎಂದುಕೊಂಡು ಬಾಗಿಲು ತೆಗೆದನು. ಗಾಳಿ ಜೋರಾಗಿ ನುಗ್ಗಿತು. ಮಳೆಯ ಎರಚಲು ಬಡಿಯಿತು.

ಅವಳು, ಎದುರಿಗಿರುವ ಅವನನ್ನು ತಳ್ಳಿಕೊಂಡೇ ಒಳಗೆ ನುಗ್ಗಿದಳು. ಅವನು ನಿಂತಲ್ಲೇ ತೂರಾಡಿದರೂ ಸಹ ಸಾವರಿಸಿಕೊಂಡು ನಿಂತನು.

ಅವಳು ತನ್ನ ವ್ಯಾನಿಟಿ ಬ್ಯಾಗು ಮತ್ತು ಇನ್ನೊಂದು ಕಾಲಿ ಬ್ಯಾಗನ್ನು ಅಲ್ಲೇ ಇದ್ದ ಟೀಪಾಯಿಯ ಮೇಲೆ ಇಟ್ಟಳು.

''ರೀ ವಿಶ್ವ ಟವಲ್ ಕೊಡ್ತೀರ?''

ಅವನು ಆಶ್ಚರ್ಯದಿಂದ ''ನನ್ನ ಹೆಸರು ನಿಮಗೆ ಹೇಗೆ ಗೊತ್ತಾಯಿತು?''

''ನೀವು ಶರ್ಮಿಳ ಗಂಡ ಅಂತ ನನಗೆ ಗೊತ್ತು. ನಾನು ನಿಮ್ಮ ಹೆಂಡತಿಯ ಊರಿನವಳು. ನಿಮ್ಮ ಮದುವೇಲಿ ನಾನು ಶರ್ಮಿಳಾ ಜೊತೇಲಿ ಇರುತ್ತಿದ್ದೆ.''

ಅವನಿಗೆ ನೆನಪು ಬರಲಿಲ್ಲ. ಮದುವೆ ಕಾರ್ಯಕ್ರಮ ಅಂದ ಮೇಲೆ ಹಲವಾರು ಮಂದಿ ಗೆಳತಿಯರು ಇರುತ್ತಾರೆ. ಇವಳು ಯಾರು ಅಂತ ಹೇಗೆ ನೆನಪಿರಲು ಸಾಧ್ಯ?

ಅವಳು ಈಗ ಮೊಬೈಲ್ ತೆಗೆದು, ಫೋಟೋ ಗ್ಯಾಲರಿ ಓನ್ ಮಾಡಿದಳು. ಶರ್ಮಿಳ ಜೊತೆ ಇವಳು ನಿಂತಿರುವ ನಾಲ್ಕು ಫೋಟೋಗಳಿವೆ. ''ಈಗಲಾದರೂ ನಂಬಿಕೆ ಬಂತ ವಿಶ್ವ'' ಎಂದು ಕೇಳಿದಾಗ ತಲೆಯಾಡಿಸಿದನು.

''ರೀ... ಈಗಲಾದರೂ ಟವಲ್ ಕೊಡ್ತೀರ'' ಎಂದಾಗ ಅವನು ಎದ್ದುಹೋಗಿ ಟವಲ್ ತಂದುಕೊಟ್ಟನು.

ಆಗ ಅವಳು ಪರೀಕ್ಷೆಮಾಡುವ ರೀತಿ ನೋಡುತ್ತಿದ್ದಾಳೆ. ಇವನು ಹತ್ತಿರ ಬಂದಾಗ ''ಹೆಂಡತಿ ಊರಲ್ಲಿ ಇಲ್ಲಾ ಅಂತ ಮನೇನಾ ಬಾರ್ ಅಂಡ್ ರೆಸ್ಟೋರೆಂಟ್ ಮಾಡಿದ್ದೀರ'' ಎಂದು ಕೇಳಿದಳು.

ಡೈನಿಂಗ್ ಟೇಬಲ್ ಮೇಲೆ ವಿಸ್ಕಿ ಸೀಸೆ, ಸೋಡ, ವಿವಿಧ ರೀತಿಯ ನಾನ್‌ವೆಜ್ ಐಟಂಗಳಿವೆ.

ಸಿಗರೇಟ್ ಪ್ಯಾಕ್ ಇದೆ.

ಅವಳು ನಗುತ್ತಾ ''ಸಾಹೇಬರಿಗೆ ಎಲ್ಲಾ ರೀತಿಯ ಚಟ-ಚಪಲಗಳಿವೆ ಅಂತ ಕಾಣುತ್ತೆ. ಇಷ್ಟೇನಾ ಅಥವಾ ಬೇರೆ ಏನಾದರೂ ಸ್ಪೆಷಲ್ ಪ್ರೋಗ್ರಾಂ ಹಾಕಿಕೊಂಡಿದ್ದೀರ?''

''ಸ್ಪೆಷಲ್ ಪ್ರೋಗ್ರಾಂ ಅಂದ್ರೇನು?'

''ಅದೇ ರೀ... ಹೆಂಡತಿ ಇಲ್ಲದಿರುವಾಗ'' ಎಂದು ಮೋಹಕವಾಗಿ ನಗುತ್ತಾ, ಕೆಳತುಟಿಯನ್ನು ಕಚ್ಚಿಕೊಂಡಳು.

ಅವನು ಗಾಬರಿಯಿಂದ ''ಇಲ್ಲ... ಇಲ್ಲ... ಅದೇನೂ ಇಲ್ಲ'' ಎಂದನು.

ಅವಳು ಟವಲ್‌ನಿಂದ ಒರೆಸಿಕೊಂಡ ನಂತರ ತುಂಬಾ ಮೆಲ್ಲಗೆ ''ನನಗೆ ಇದೆಲ್ಲಾ ತುಂಬಾ ಇಷ್ಟ, ಅರೂಪಕ್ಕೆ ಒಂದು ಸಲ ಡ್ರಿಂಕ್ಸ್ ತಗೋತೀನಿ'' ಎಂದಳು.

ಅವನು ಬೆರಗಾಗಿ ನೋಡುತ್ತಿದ್ದಾನೆ.

ಚಿತ್ತಾಕರ್ಷಕ ರೂಪಿನವಳು.

ಮೈಮಾಟ ಎದ್ದು ಕಾಣುತ್ತಿದೆ.

ಅವಳು ನಗುತ್ತಾ ಇವನ ಹತ್ತಿರ ಬಂದು ''ನೀವು ಯಾವುದಕ್ಕೂ ಹಿಂಜರಿಯಬೇಡಿ. ನಾವಿಬ್ಬರು ಗುಂಡಿನ ಪಾರ್ಟಿ ಮಾಡೋಣ. ಒಂದು ವೇಳೆ ಇಬ್ಬರೂ ಕುಡಿದು ಟೈಟ್ ಆಗಿ ಎಡವಟ್ಟು ಮಾಡಿಕೊಂಡರೂ ನಾನು ತಲೆಕೆಡಿಸಿಕೊಳ್ಳಲ್ಲ. ಮುಖ್ಯವಾಗಿ ಈ ರಾತ್ರಿ ಇಲ್ಲೇನು ನಡೆಯಿತು ಅಂತ ನಿಮ್ಮ ಹೆಂಡತಿಗೆ ಗಾಡ್ ಪ್ರಾಮೀಸ್ ಹೇಳಲ್ಲ'' ಎಂದು ಅವಳು ಕಣ್ಣು ಮಿಟುಗಿಸಿ ನಗಾಡಿದಳು.

ವಿಶ್ವನ ಮೇಲೆ ಝುಂ ಎಂದಿತು. ಆ ಕ್ಷಣವೇ ಅವಳನ್ನು ತಬ್ಬಿಕೊಂಡು ಮುದ್ದಾಡಲು ಮನಸ್ಸು ಪ್ರಚೋದಿಸಿತು.

ಆದರೆ ಆತುರ ಪಡಬಾರದು ಎಂದು ತುಂಬಾ ಕಷ್ಟದಿಂದ ಕಂಟ್ರೋಲ್ ಮಾಡಿಕೊಂಡನು. ಅವರು ಈಗ ಎದುರು-ಬದರಾಗಿ ಕುಳಿತು ಗುಂಡಿನ ಪಾರ್ಟಿ ಪ್ರಾರಂಭ ಮಾಡಿದರು.

ಎರಡು ಸಲ ಅವಳ ಕೈ ಹಿಡಿದು ಬಲು ಮೃದುವಾಗಿ ಒತ್ತಿಕದನು.

ಅವಳು ನಗಾಡಿದಳು.

ಆ ನಗುವಿನಲ್ಲಿ ಆಕರ್ಷಣೆ ಇದೆ.

ಅವನು ''ಮಂದಾಕಿನಿ... ಇಂತಹ ರಾತ್ರಿ ವೇಳೆಯಲ್ಲಿ ನೀನು ಒಬ್ಬಳೇ ಬಂದಿರೋದು ತುಂಬಾ ಆಶ್ಚರ್ಯವಾಗಿದೆ' ಎಂದಳು.

ಅವಳು ''ನಾನು ಕಂಪನಿಯೊಂದರ ಇಂಟರ್‌ವ್ಯೂಗಾಗಿ ಬಂದಿದ್ದೆ. ಆದರೆ ಅದು ಮುಗಿದದ್ದು ತುಂಬಾ ತಡವಾಗಿತ್ತು. ಹಾಗಾಗಿ ನಾನು ಪರದಾಡಿದ್ದೆ. ನನ್ನ ಗೆಳತಿಯ ನೆನಪಾಗಿ ಇಲ್ಲಿಗೆ ಬಂದೆ.''

''ಈ ಮನೆ ವಿಳಾಸ ಗೊತ್ತಿತ್ತಾ?''

''ಶರ್ಮಿಳಾಗೆ ಫೋನ್ ಮಾಡಿ ತಿಳಿದುಕೊಂಡೆ.''

''ಗುಡ್... ವೆರಿಗುಡ್...'

ಆಗ ಫೋನ್ ಕಾಲ್ ಬಂದಿತು. ನಂಬರ್ ನೋಡಿದ ಕೂಡಲೇ ಗಾಬರಿ ಆಯಿತು.

ಹೆಂಡತಿ ಫೋನ್ ಮಾಡಿದ್ದಾಳೆ. ಮೈ ನಡುಗಿತು.

''ನೀನು ಇಲ್ಲಿಗೆ ಬಂದಿರೋ ವಿಷಯ ನನ್ನ ಹೆಂಡತಿಗೆ ಗೊತ್ತಿತ್ತಾ?''

''ಬರೀ ವಿಳಾಸ ಕೇಳಿದೆ. ಇಲ್ಲಿಗೆ ಹೋಗುತ್ತೀನಿ ಅಂತ ಹೇಳಿರಲಿಲ್ಲ.''

''ಒಳ್ಳೆಯ ಕೆಲಸ ಮಾಡಿದೆ. ನನ್ನ ಕೇಳಿದರೆ ಬಂದಿಲ್ಲ ಅಂತ ಹೇಳ್ತೀನಿ'' ಎಂದು ಫೋನ್ ಅಟೆಂಡ್ ಮಾಡಿದನು.

ಅವಳು ''ಏನು... ನಾರ್ಮಲ್ ಆಗಿದ್ದೀರ ತಾನೇ. ಗುಂಡಿನ ಪಾರ್ಟಿ...''

''ಛೇ... ಛೇ... ಅದೆಲ್ಲಾ ಏನೂ ಇಲ್ಲ.''

''ಅಲ್ಲಿ ಯಾರಾದರೂ ಇದ್ದಾರ?'

ಮಂದಾಕಿನಿಯ ಕಡೆ ಒಂದು ಸಲ ನೋಡಿ ನಂತರ ''ಇಲ್ಲ... ಯಾರೂ ಇಲ್ಲ, ಈಗ ತಾನೇ ಊಟ ಆಗಿದೆ. ಹತ್ತು ನಿಮಿಷದಲ್ಲಿ ಮಲಗ್ತೀನಿ.''

''ನಾನು ತವರುಮನೆಗೆ ಬಂದು ಮೈಮರೆತು ಮಲಗಿಲ್ಲ. ನಿಮ್ಮನ್ನು ಗಮನಿಸಲು ಎಲ್ಲಾ ವ್ಯವಸ್ಥೆ ಮಾಡಿದ್ದೀನಿ. ನೀವು ಯಾವ ಚಂಗೂಲಿ ಆಟ ಆಡಿದ್ರು ನಂಗೆ ಗೊತ್ತಾಗುತ್ತೆ'' ಎಂದು ಅಧಿಕಾರಯುತವಾಗಿ ಮಾತಾಡಿದಳು.

ಅವನು ''ಏ ಶರ್ಮಿಳ... ನನ್ನ ಮೇಲೆ ನಂಬಿಕೆ ಇಲ್ವ? ನಾನು...''

''ಖಂಡಿತಾ ನಂಬಿಕೆ ಇಲ್ಲ.''

ಅವನೂ ಸಹ ಕೋಪದಿಂದ ''ಹಾಗಾದರೆ ಇನ್ನು ಮುಂದೆ ತವರುಮನೆಗೆ ಹೋಗ್ಬೇಡ...'' ಎಂದು ಹೇಳಿದನು.

''ನನಗೆ ಅಲ್ಲೇನಿದೆ ಸುಖ. ಅಪ್ಪನ ಮನೇಲಿ ಮಹಾರಾಣಿಯ ರೀತಿಯಲ್ಲಿ ಇರಬಹುದು.''

''ನಿನ್ನಿಷ್ಟ ಏನಾದರೂ ಮಾಡು.''

''ಬೀ ಕೇರ್‌ಫುಲ್. ನಿಮ್ಮ ಮೇಲೆ ನನ್ನ ಕ್ಯಾಮರ ಕಣ್ಣುಗಳಿರುತ್ತೆ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದಳು.

ಮಂದಾಕಿನಿ ಈಗ, ತಾನು ಕುಳಿತಿದ್ದ ಸ್ಥಳದಿಂದ ಎದ್ದು ಅವನ ಹತ್ತಿರ ಸರಿದು ಮೈಗೆ ಮೈ ಒತ್ತಿಕೊಂಡು ಕುಳಿತಳು. ''ಶರ್ಮಿಳ ನಿಮ್ಮ ಜೊತೆ ಲೇಡಿ ಹಿಟ್ಲರ್ ರೀತಿ ಸಂಸಾರ ಮಾಡುತ್ತಿದ್ದಾಳೆ ಅಲ್ವ. ನಿಮಗೆ ಅವಳಿಂದ ತುಂಬಾ ಕಷ್ಟ ಆಗುತ್ತಿದೆ. ಸುಖ, ನೆಮ್ಮದಿ ಇಲ್ಲ.''

ಅವನು ಈಗ ಅವಳನ್ನು ತಬ್ಬಿಕೊಂಡನು. ಅವಳು ವಿಸ್ಕಿ ತುಂಬಿರುವ ಗ್ಲಾಸನ್ನು ಎತ್ತಿ ಅವನಿಗೆ ಕುಡಿಸುತ್ತಾ, ತನ್ನ ಕೋಮಲವಾದ ಕೈಯಿಂದ ಎದೆ ಸವರಿದಳು.

ಅಲ್ಲಿಯತನಕ ನಾರ್ಮಲ್ ಆಗಿದ್ದವನು ಬದಲಾಗುತ್ತಿದ್ದಾನೆ.

ಅಮಲು ತಲೆಗೇರುತ್ತಿದೆ.

ಅವಳು ಚುಂಬಿಸಿದಳು.

ಮತ್ತೊಂದು ಸಲ ಕುಡಿಸಿದಳು. ಅವನು ಅವಳನ್ನು ಸೋಫಾದಲ್ಲಿ ಒರಗಿಸಿ ಮುದ್ದಾಡಿದನು.

ಅವಳು ನಗುತ್ತಿದ್ದಾಳೆ.

ಇವನಿಗೆ ಅಮಲೇರಿದೆ.

ತೇಲುಗಣ್ಣು ಮಾಡುತ್ತಿದ್ದಾನೆ.

ಮಂದಾಕಿನಿ ಅವನ ಮೈ ಸವರುತ್ತಲೇ ಸೋಫಾದಲ್ಲಿ ಮಲಗಿಸಿ ದೂರ ಸರಿದಳು. ವಿಶ್ವನಿಗೆ ಗಾಢವಾಗಿ ನಿದ್ದೆ ಬಂದಿದೆ.

●●●

ಬೆಳಗಿನ ಏಳು ಗಂಟೆ.

ವಿಶ್ವನಿಗೆ ಎಚ್ಚರವಾಗಿದೆ. ಗುಂಡು ಜಾಸ್ತಿಯಾಗಿದ್ದರಿಂದ ತಲೆ ಸಿಡಿಯುತ್ತಿರುವ ಅನುಭವ ಆಗುತ್ತಿದೆ.

ಮಂದಾಕಿನಿ ನೆನಪಾದಳು.

ಅವಳು ಅಲ್ಲಿ ಇರಲಿಲ್ಲ.

ಫ್ರಂಟ್ ಡೋರ್ ಓಪನ್ ಆಗಿದೆ.

ಅವನಿಗೆ ಏನೋ ಅನುಮಾನ ಬಂದು ಬೆಡ್‌ರೂಮಿಗೆ ಹೋಗಿ ನೋಡಿದನು.

ಶಾಕ್ ಉಂಟಾಯಿತು.

ಬೀರುವಿನ ಲಾಕರ್ ಓನ್ ಆಗಿದೆ. ಎರಡು ಲಕ್ಷ ರೂಪಾಯಿ ನಗದು ಹಣ ಮಾಯವಾಗಿದೆ.

ಶ್ರೀಮಂತ ಕುಟುಂಬದ ಶರ್ಮಿಳ ತಂದಿದ್ದ ಎಲ್ಲಾ ಚಿನ್ನದ ಆಭರಣಗಳು, ಬೆಳ್ಳಿಸೆಟ್ ಮಾಯವಾಗಿದೆ. ಹೆಂಡತಿ ಉಡುತ್ತಿದ್ದ ಸಾವಿರಾರು ರೂಪಾಯಿ ಬೆಲೆಬಾಳುವ ಸೀರೆಗಳು ಸಹ ಕಾಣುತ್ತಿಲ್ಲ.

ಮಂದಾಕಿನಿಯಂತ ಬುದ್ಧಿವಂತ ಯುವತಿಯರು, ಒಂಟಿಯಾಗಿರುವ ಗಂಡಸಿನ ಬಗ್ಗೆ ಮಾಹಿತಿ ಸಂಗ್ರಹಿಸಿ, ಅಗತ್ಯವಾದ ಫೋಟೋಗಳನ್ನು ಟೆಕ್ನಿಕಲ್ ಆಗಿ ರೆಡಿ ಮಾಡಿಕೊಂಡು ನಾಟಕ ಆಡಿ ಎಲ್ಲಾ ದೋಚುತ್ತಾರೆ.

ವಿಶ್ವ ತತ್ತರಿಸುತ್ತಿದ್ದಾನೆ.

ಪ್ರಶ್ನೆ ಎದುರಾಗಿದೆ.

ಹೆಂಡತಿನ ಹೇಗೆ ಎದುರಿಸಲಿ?

# ಬೆಟ್ಟವನ್ನು ನಡುಗಿಸಿದ ಹರಳು ಕಲ್ಲಿನ ದಂಧೆ!

ಕೊಡಗು

✍ಬಿ.ಎಂ. ಲವಕುಮಾರ್

ಬೆಟ್ಟವನ್ನು ಅಗೆದು ಅಲ್ಲಿಂದ ಹರಳು ಕಲ್ಲನ್ನು ತೆಗೆಯುವ ದಂಧೆ ಒಂದೆರಡು ದಶಕಗಳ ಹಿಂದೆ ವ್ಯಾಪಕವಾಗಿ ನಡೆಯುತ್ತಿತ್ತು. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ಈ ದಂಧೆಗೆ ಅದೆಷ್ಟು ಮಂದಿ ಬಲಿಯಾಗಿದ್ದಾರೋ ಆ ದೇವರೇ ಬಲ್ಲ. ಆದರೆ ಕಟ್ಟುನಿಟ್ಟಿನ ಕ್ರಮದಿಂದಾಗಿ ಇದಕ್ಕೆ ಕಡಿವಾಣ ಹಾಕುವ ಕೆಲಸ ನಡೆಯಿತಾದರೂ ಅಷ್ಟರಲ್ಲೇ ಬೆಟ್ಟಗುಡ್ಡಗಳು ಕರಗಿ ಹೋಗಿದ್ದವಲ್ಲದೆ, ಅಲ್ಲಿದ್ದ ಹರಳು ಕಲ್ಲು ಸೇರಬೇಕಾದ ಸ್ಥಳವನ್ನು ತಲುಪಿ ಆಗಿತ್ತು. ಈಗಲೂ ಈ ದಂಧೆ ಸಂಪೂರ್ಣ ನಿಂತಿದೆ ಎನ್ನುವುದೇ ಕಷ್ಟವಾಗಿದೆ.



ಪಶ್ಚಿಮಘಟ್ಟದ ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಗೆ ಹೊಂದಿಕೊಂಡಿರುವ ಪುಷ್ಪಗಿರಿ ಅರಣ್ಯವಲಯದ ಕೂಜಿಮಲೆ, ಸುಟ್ಟತ್ ಮಲೆಯಲ್ಲಿ ಹರಳು ಕಲ್ಲಿಗಾಗಿ ಬೆಟ್ಟವನ್ನು ಕೊರೆದಿದ್ದೇ ಬೆಟ್ಟ ಗುಡ್ಡಕುಸಿತಕ್ಕೆ ಕಾರಣವಾಯಿತಾ? ಹೀಗೊಂದು ಪ್ರಶ್ನೆಗಳು ಇವತ್ತಿಗೂ ಜನರನ್ನು ಕಾಡುತ್ತಲೇ ಇದೆ. ಅವತ್ತಿನ ದಿನಗಳಲ್ಲಿ ಹರಳು ಕಲ್ಲಿಗಾಗಿ ಬೆಟ್ಟಗುಡ್ಡವನ್ನೇ ಅಗೆದು, ಸುರಂಗ ತೆಗೆದು ಪ್ರಕೃತಿ ಮೇಲೆ ಮಾಡಿದ ಅತ್ಯಾಚಾರ ಕ್ಷಮಿಸಲಾರದ್ದಾಗಿದೆ. ಹೀಗಾಗಿಯೇ ಇವತ್ತು ಬೆಟ್ಟಗುಡ್ಡಗಳ ತಪ್ಪಲಲ್ಲಿ ಬದುಕುವ ಜನ ಭಯದಲ್ಲಿಯೇ ಬದುಕುವಂತಾಗಿದೆ.

ಹರಳುಕಲ್ಲು ಈಗ ದಂಧೆ ಸಂಪೂರ್ಣ ನಿಂತಿದೆ ಎನ್ನುವುದು ಕಷ್ಟವೇ... ಆಗೊಮ್ಮೆ ಈಗೊಮ್ಮೆ ಕಲ್ಲು ಸಾಗಾಟ ಮಾಡುವಾಗ ಸಿಕ್ಕಿಬಿದ್ದರೆ ಮಾತ್ರ ಮುನ್ನಲೆಗೆ ಬರುತ್ತದೆ. ಉಳಿದಂತೆ ಯಾವುದೂ ಗೊತ್ತೇ ಆಗುವುದಿಲ್ಲ. ಆದರೆ ಮೂರು ದಶಕಗಳ ಹಿಂದೆ ನಡೆದಷ್ಟು ವ್ಯಾಪಕತೆ ಇಲ್ಲ ಎನ್ನುವುದಷ್ಟೇ ಸಮಾಧಾನಕರ ಸಂಗತಿಯಾಗಿದೆ. ಅವತ್ತು ಈ ಹರಳು ಕಲ್ಲಿಗಾಗಿ ಹೊಡೆದಾಟ, ಬಡಿದಾಟ ಸೇರಿದಂತೆ ಹಲವು ಮಂದಿ ಸುರಂಗ ಕುಸಿತದಿಂದ ಪ್ರಾಣಕ್ಕೆ ಕುತ್ತು ತಂದುಕೊಂಡಿದ್ದರು.

ಆ ದಿನಗಳನ್ನು ನೆನಪಿಸುವುದಾದರೆ ಸುಬ್ರಹ್ಮಣ್ಯ ಮತ್ತು ಕೊಡಗಿಗೆ ಹೊಂದಿಕೊಂಡಿರುವ ಕೂಜಿಮಲೆ ಮತ್ತು ಸುಟ್ಟತ್ಮಲೆ ಎಂಬ ಬೆಟ್ಟಗಳಲ್ಲಿ ಕೆಂಪು ಹರಳು ಕಲ್ಲು ಪತ್ತೆಯಾಗಿತ್ತು. ಈ ಕಲ್ಲಿಗೆ ಅವತ್ತು ಕೆಜಿಯೊಂದಕ್ಕೆ ಐನೂರು ರೂ.ನಿಂದ ಆರಂಭವಾಗಿ ಸಾವಿರಾರು ರೂ. ಬೆಲೆ ದೊರೆಯುತ್ತಿತ್ತು. ಹೀಗಾಗಿ ಬೆಟ್ಟದಲ್ಲಿ ಸುರಂಗ ಕೊರೆದು ಕಲ್ಲು ತೆಗೆಯುವ ದಂಧೆ ರಾತ್ರೋರಾತ್ರಿ ಸದ್ದಿಲ್ಲದೆ ನಡೆಯುತ್ತಿತ್ತು. ಈ ಹರಳು ಕಲ್ಲು ತೆಗೆಯಲೆಂದೇ ಕೊಡಗಿನಿಂದ ತಂಡಗಳು ಹೋದರೆ ಅತ್ತ ದಕ್ಷಿಣಕನ್ನಡ ಜಿಲ್ಲೆ ಕಡೆಯಿಂದಲೂ ಜನ ಬರತೊಡಗಿದ್ದರು.

ಇವರ ನಡುವೆ ಭಿನ್ನಾಭಿಪ್ರಾಯ ಜಗಳಗಳು ಆರಂಭವಾಗಿದ್ದವಲ್ಲದೆ ಹೆಣಗಳು ಬಿದ್ದಿದ್ದವು. ಇನ್ನು ಸುರಂಗಕೊರೆದು ಹರಳುಕಲ್ಲು ತೆಗೆಯುವ ವೇಳೆ ಸುರಂಗ ಕುಸಿದು ಅಲ್ಲಿಯೇ ಸಮಾಧಿಯಾದ ಘಟನೆಗಳು ಕೂಡ ನಡೆದಿದ್ದವು. ಹರಳು ಕಲ್ಲಿಗಾಗಿ ಜಗಳಗಳು ಆರಂಭವಾಗಿ ಯಾರ ಹೆಣ ಯಾವಾಗ ಬೀಳುತ್ತೋ ಎಂಬ ಭಯ ಕಾಡತೊಡಗಿತ್ತು. ಒಂದು ತಂಡ ಮಾಡಿಕೊಂಡು ರಾತ್ರಿ ವೇಳೆ ಹೋಗುತ್ತಿದ್ದ ಜನ ಟಾರ್ಚ್ ಬೆಳಕಿನಲ್ಲಿಯೇ ಗುಡ್ಡ ಅಗೆದು ಕಲ್ಲನ್ನು ಈಚೆಗೆ ತೆಗೆದು ಅದನ್ನು ಹೊತ್ತು ತಂದು ನದಿ ತೀರದಲ್ಲಿ ತೊಳೆದು ಕಲ್ಲನ್ನು ಆಯ್ದು ಶೇಖರಿಸಿಟ್ಟುಕೊಂಡು ಬಳಿಕ ಅದನ್ನು ಮಾರಾಟ ಮಾಡುತ್ತಿದ್ದರು.

ಆಗಿನ ದಿನಗಳಲ್ಲಿ ಈ ಕಲ್ಲನ್ನು ಖರೀದಿಸಲೆಂದೇ ರಾಜಸ್ತಾನ್, ಕೇರಳ ಸೇರಿದಂತೆ ಬೇರೆ ಬೇರೆ ಕಡೆಗಳಿಂದ ವ್ಯಾಪಾರಿಗಳು ಬರತೊಡಗಿದ್ದರು. ಮೊಟ್ಟ ಮೊದಲ ಬಾರಿಗೆ 1990ರಲ್ಲಿ ಕೂಜಿಮಲೆಯಲ್ಲಿ ಈ ಹರಳು ಕಾಣಿಸಿಕೊಂಡಿತ್ತು. ಆದರೆ ಇಲ್ಲಿನ ಜನಕ್ಕೆ ಇದು ಸಾವಿರಾರು ರೂ. ಬೆಲೆಬಾಳುವ ವಸ್ತು ಎಂಬುದು ಮಾತ್ರ ಗೊತ್ತೇ ಆಗಿರಲಿಲ್ಲ. ಸುಬ್ರಹ್ಮಣ್ಯ ಮತ್ತು ಕೊಡಗು ಗಡಿಭಾಗಕ್ಕೆ ಹೊಂದಿಕೊಂಡಂತಿರುವ ಕಡಮಕಲ್ ರಬ್ಬರ್ ತೋಟಕ್ಕೆ ಕೆಲಸಕ್ಕೆ ಬಂದಿದ್ದ ಕಾರ್ಮಿಕನೊಬ್ಬನಿಗೆ ಹರಳು ಕಲ್ಲಿನ ಮರ್ಮ ಗೊತ್ತಾಗಿತ್ತು.



ಆತ ಅದನ್ನು ತಂದು ಹೊರಗಡೆ ಮಾರತೊಡಗಿದ್ದನು. ಇದರಿಂದ ಆತ ದಿನ ಕಳೆದಂತೆ ಶ್ರೀಮಂತನಾಗತೊಡಗಿದ್ದನು. ಆತ ದಿಢೀರ್ ಶ್ರೀಮಂತನಾದ ಬಗ್ಗೆ ಕುತೂಹಲ ಇಲ್ಲಿನ ಗ್ರಾಮಸ್ಥರನ್ನು ಕಾಡಿತ್ತಲ್ಲದೆ, ಆತನ ಬೆನ್ನತ್ತಿ ಹೋದವರಿಗೆ ಹರಳು ಕಲ್ಲಿನ ದಂಧೆಯ ಕರಾಳ ಮುಖ ಗೋಚರಿಸಿತ್ತು. ಗುಡ್ಡದಲ್ಲಿರುವ ಹರಳು ಕಲ್ಲು ಸಾವಿರಾರು ರೂ. ಬೆಲೆ ಬಾಳುತ್ತದೆ ಎಂಬುದು ತಿಳಿಯುತ್ತಿದ್ದಂತೆಯೇ ಗ್ರಾಮಸ್ಥರು ಬೆಟ್ಟಕ್ಕೆ ಲಗ್ಗೆಯಿಡತೊಡಗಿದರು. ಬೆಟ್ಟವನ್ನು ಕೊರೆದು ಹರಳು ಕಲ್ಲನ್ನು ಹುಡುಕತೊಡಗಿದರು. ಅತ್ತ ದಕ್ಷಿಣ ಕನ್ನಡದವರು, ಇತ್ತ ಕೊಡಗಿನವರು ಬೆಟ್ಟದತ್ತ ತಂಡ ಕಟ್ಟಿಕೊಂಡು ತೆರಳತೊಡಗಿದರು.



ಅರಣ್ಯ ಇಲಾಖೆಗೆ ತಿಳಿಯುವ ಹೊತ್ತಿಗೆ ಗುಡ್ಡಗಳು ಕರಗಿ ಅರಣ್ಯ ನಾಶವಾಗಿತ್ತು. ಅರಣ್ಯ ಇಲಾಖೆಯಲ್ಲಿರುವ ಸಿಬ್ಬಂದಿಯನ್ನಿಟ್ಟುಕೊಂಡು ದಂಧೆಕೋರರನ್ನು ತಡೆಯುವುದು ಅಷ್ಟು ಸುಲಭದ ಕೆಲಸವಾಗಿ ಉಳಿದಿರಲಿಲ್ಲ, ಜತೆಗೆ ಹರಳು ಕಲ್ಲು ತೆಗೆಯಲು ಹೋಗುತ್ತಿದ್ದವರು ಕೋವಿ ಕತ್ತಿ, ಗುದ್ದಲಿ ಸೇರಿದಂತೆ ಮಾರಕಾಯುಧದೊಂದಿಗೆ ಹೋಗುತ್ತಿದ್ದರಿಂದ ಸಿಬ್ಬಂದಿಗಳು ಬೆಟ್ಟದ ತುದಿಯೇರಿ ಬಂದು ದಾಳಿ ನಡೆಸುವುದು ಅಷ್ಟು ಸುಲಭವಾಗಿರಲಿಲ್ಲ. ಅದರಲ್ಲೂ ರಾತ್ರಿ ಹೊತ್ತಿನಲ್ಲಿ ಅತ್ತ ಕಡೆ ಸುಳಿಯುವ ಧೈರ್ಯವೂ ಇರಲಿಲ್ಲ.



ಹಗಲು ಹೊತ್ತಿನಲ್ಲೇ ಅರಣ್ಯ ಅಧಿಕಾರಿಗಳು ದಾಳಿ ಮಾಡುವ ರೂಪಿಸಿದ್ದರೂ ಹರಳು ಕಲ್ಲು ತೆಗೆಯುವ ತಂಡದ ಸದಸ್ಯರು ಆಯಕಟ್ಟಿನಲ್ಲಿ ಕುಳಿತು ಅರಣ್ಯ ಸಿಬ್ಬಂದಿ ಬರುತ್ತಿದ್ದಾರಾ ಎಂದು ಕಾವಲು ಕಾಯುತ್ತಿದ್ದರು. ಅರಣ್ಯ ಇಲಾಖೆ ಅಥವಾ ಪೊಲೀಸರು ಬರುತ್ತಿದ್ದಾರೆ ಎಂಬುದು ಗೊತ್ತಾಗುತ್ತಿದ್ದಂತೆ ಪಟಾಕಿ ಸಿಡಿಸುತ್ತಿದ್ದರು. ಪಟಾಕಿ ಶಬ್ದವು ಅರಣ್ಯ ಇಲಾಖೆ ಸಿಬ್ಬಂದಿ ಬೆಟ್ಟದತ್ತ ಬರುತ್ತಿದ್ದಾರೆ ಎಂಬುದರ ಸಂಕೇತವಾಗಿತ್ತು. ಈ ವೇಳೆ ಹರಳು ಕಲ್ಲು ತೆಗೆಯುತ್ತಿದ್ದವರು ಅಲ್ಲಿಂದ ಪರಾರಿಯಾಗಿ ಬಿಡುತ್ತಿದ್ದರು. ಹೀಗಾಗಿ ಹರಳು ಕಲ್ಲು ತೆಗೆಯುವವರನ್ನು ಹಿಡಿದು ಬಂಧಿಸುವುದು ಅರಣ್ಯ ಇಲಾಖೆಗೆ ಕಷ್ಟಸಾಧ್ಯವಾಗಿತ್ತು.

ಇಷ್ಟಕ್ಕೂ ಕೂಜಿಮಲೆ ಮತ್ತು ಸುಟ್ಟತ್ಮಲೆಯಲ್ಲಿ ಸಿಗುವ ಹರಳು ಕೊರೆಂಡಂ ಎಂಬ ಹೆಸರಿನದ್ದಾಗಿದ್ದು ಇದಕ್ಕೆ ಹೆಚ್ಚಿನ ಬೆಲೆ ಇಲ್ಲದಾದರೂ ಬೇಡಿಕೆಯಂತು ಇದ್ದೇ ಇದೆ. ಹೀಗಾಗಿ ಜನ ಕೈತುಂಬಾ ಹಣ ಸಿಗುತ್ತದೆ ಎಂಬ ಕಾರಣಕ್ಕೆ ರಿಸ್ಕ್ ತೆಗೆದುಕೊಂಡು ಗುಡ್ಡದಲ್ಲಿ ಸುರಂಗ ತೆಗೆದು ಹರಳು ಹುಡುಕುತ್ತಿದ್ದರು. ಈಗಲೂ ಇದು ಸಂಪೂರ್ಣ ನಿಂತಿದೆ ಎಂದರೆ ತಪ್ಪಾಗುತ್ತದೆ. ಆಗೊಮ್ಮೆ ಈಗೊಮ್ಮೆ ಹರಳು ಕಲ್ಲು ಸಾಗಾಟ ಮಾಡುವಾಗ ಸಿಕ್ಕಿ ಬೀಳುವ ಘಟನೆಗಳು ನಡೆಯುತ್ತವೆ. ಅದು ಏನೇ ಇರಲಿ ಈ ದಂಧೆ ಮೇಲೆ ಹದ್ದಿನ ಕಣ್ಣಿಡಬೇಕಾಗಿರುವುದು ಪೊಲೀಸ್, ಅರಣ್ಯ ಇಲಾಖೆಯದು ಮಾತ್ರವಲ್ಲದೆ, ಪ್ರತಿಯೊಬ್ಬರ ಕರ್ತವ್ಯವಾಗಿದೆ. ☯

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಆಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com ☎ 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

# ಚನ್ನಪಟ್ಟಣದಲ್ಲಿ ರಂಗೇರಿದ ಉಪ ಚುನಾವಣೆಯ ಅಖಾಡ...!

# ಸೈನಿಕ-ರೈಡರ್ ನಡುವಿನ ಕಾಳಗದಲ್ಲಿ ಯಾರೇ ಸೋತರೂ ಹ್ಯಾಟ್ರಿಕ್... ಗೆದ್ದವರು ಇತಿಹಾಸ...!

**ಚನ್ನಪಟ್ಟಣ ಉಪ ಚುನಾವಣೆಯ ಅಖಾಡ ದಿನೆ ದಿನೇ ರಂಗೇರುತ್ತಿದೆ. ಜಿದ್ದಾಜಿದ್ದಿನ ಹಣಾಹಣಿಗೆ ವೇದಿಕೆ ಸಜ್ಜುಗೊಂಡಿದೆ. ರಣರಂಗಕ್ಕೆ ಕಲಿಗಳು ಫಿಕ್ಸ್ ಆಗಿದ್ದು ಹಲವು ಸ್ವಾರಸ್ಯಗಳ ಅಖಾಡವಾಗಿ ಪರಿಣಮಿಸಿದೆ. ಎನ್‌ಡಿಎ ಪಾಳಯದ ಹುರಿಯಾಳುಗಳು ಪಟ್ಟು ಹಿಡಿದಿದ್ದ ಸೈನಿಕ 'ಕೈ' ಹಿಡಿದು ಸಮರಾಂಗಣಕ್ಕೆ ಎಂಟ್ರಿ ನೀಡಿದ್ದರೆ, ಇತ್ತ ಎನ್‌ಡಿಎ ಪಾಳಯ ರೈಡರ್ ನಿಖಿಲ್ ಕುಮಾರಸ್ವಾಮಿಯನ್ನು ಫೀಲ್ಡಿಗಿಳಿದು, ಚನ್ನಪಟ್ಟಣದ ಜೆಡಿಎಸ್ ಭದ್ರಕೋಟೆಯನ್ನು ಉಳಿಸಿಕೊಳ್ಳಲು ಮುಂದಾಗಿದೆ. ಈ ಇಬ್ಬರು ಅಭ್ಯರ್ಥಿಗಳ ನಡುವಿನ ಕೆಲವೊಂದು ಸಾಮ್ಯತೆಗಳು ಕದನ ಕುತೂಹಲವಾಗಿವೆ.**

✍ ಶಾಂತರಾಜು ಜಿ. ಕಲ್ಲಹಳ್ಳಿ


ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್

**ಈ** ಚುನಾವಣೆಯಲ್ಲಿ ಯಾರೇ ಸೋತರೂ ಹ್ಯಾಟ್ರಿಕ್ ಸೋಲು. ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸಿ.ಪಿ. ಯೋಗೇಶ್ವರ್ (ಸೈನಿಕ) ಈಗಾಗಲೇ ಎರಡು ಬಾರಿ ಸೋಲನುಭವಿಸಿ ಮೂರನೇ ಬಾರಿಗೆ ಗೆಲುವನ್ನು ಹರಸುತ್ತಿದ್ದಾರೆ. ಈ ಹಿಂದೆ 2009ರಲ್ಲಿ ಸಹ ಎರಡು ಸೋಲಿನ ಬಳಿಕ ರಾಜಕೀಯ ವಿಧಾನಸೌಧಕ್ಕೆ ರೀ ಎಂಟ್ರಿ ಕೊಟ್ಟಿದ್ದರು. ಇನ್ನು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ನಿಖಿಲ್ ಕುಮಾರಸ್ವಾಮಿಯವರು ಸಹ ಈಗಾಗಲೇ ಎರಡು ಬಾರಿ ಸೋಲನುಭವಿಸಿದ್ದು, ಮೂರನೇ ಬಾರಿಗೆ ಗೆಲುವನ್ನರಿಸಲು ಚನ್ನಪಟ್ಟಣಕ್ಕೆ ಬಂದಿದ್ದಾರೆ. ಹೀಗಾಗಿ ಈ ಚುನಾವಣೆಯಲ್ಲಿ ಯಾರು ಸೋತರೂ ಹ್ಯಾಟ್ರಿಕ್ ಸೋಲಿನ ಪಟ್ಟ ಕಟ್ಟಿಕೊಳ್ಳಬೇಕಾಗುತ್ತದೆ. ಗೆದ್ದವರು ಇತಿಹಾಸದ ಪಟ್ಟಿಯಲ್ಲಿ ಸೇರುತ್ತಾರೆ.


ಸಿಎಂ, ಡಿಸಿಎಂ ಜೊತೆ ನಾಮಪತ್ರ ಸಲ್ಲಿಸುತ್ತಿರುವ ಸಿ.ಪಿ. ಯೋಗೇಶ್ವರ್

ಕಾಂಗ್ರೆಸ್‌ನ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ (ಸೈನಿಕ) ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ (ರೈಡರ್) ಚನ್ನಪಟ್ಟಣ ಅಖಾಡದ ಕಣದಲ್ಲಿರುವ ಈ ಇಬ್ಬರು ಸಿನಿಮಾದಲ್ಲಿ ನಾಯಕ ನಟರಾಗಿ ಬೆಳ್ಳಿತೆರೆಯಲ್ಲಿ ಕಾಣಿಸಿಕೊಂಡವರು. ಸಿ.ಪಿ. ಯೋಗೇಶ್ವರ್‌ರವರು ಸೈನಿಕ, ಉತ್ತರ ಧ್ರುವದಿಂದ ದಕ್ಷಿಣ ಧ್ರುವಕೂ, ಭದ್ರಿ ಮೊದಲಾದ ಚಿತ್ರದಲ್ಲಿ ನಾಯಕ ನಟನಾಗಿದ್ದರೆ, ನಿಖಿಲ್ ಕುಮಾರಸ್ವಾಮಿಯವರು, ಜಾಗ್ವಾರ್, ಸೀತರಾಮ ಕಲ್ಯಾಣ, ರೈಡರ್ ಮೊದಲಾದ ಚಿತ್ರಗಳಲ್ಲಿ ನಾಯಕ ನಟರಾಗಿದ್ದಾರೆ. ಇಬ್ಬರೂ ಸಹ ಚಿತ್ರನಟರೇ ಸೆಣಸಾಟಕ್ಕಿಳಿದಿರುವುದು ಸ್ವಾಹಸ್ಯಕಾರಿ ಸಂಗತಿ ಎನಿಸಿದೆ. 2019ರಲ್ಲಿ ನಿಖಿಲ್ ಕುಮಾರಸ್ವಾಮಿ ಗೆಲ್ಲಿಸಲು ನಾವು ಜೋಡೆತ್ತುಗಳಾಗಿ ಕೆಲಸ ಮಾಡುತ್ತೇವೆ ಎಂದು ಕೈ ಕೈ ಹಿಡಿದಿದ್ದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಡಿ.ಕೆ. ಶಿವಕುಮಾರ್‌ರವರುಗಳು ಚನ್ನಪಟ್ಟಣ ಅಖಾಡದಲ್ಲಿ ಪರಸ್ಪರ ಮುಖಾಮುಖಿಯಾಗಿದ್ದಾರೆ. ಮಂಡ್ಯದಲ್ಲಿ ನಿಖಿಲ್ ಗೆಲುವಿಗೆ ಹೋರಾಟ ಮಾಡಿದ್ದ ಡಿ.ಕೆ. ಶಿವಕುಮಾರ್ ಇಲ್ಲಿ ಅವರ ಸೋಲಿಗೆ ಟೊಂಕ ಕಟ್ಟಿ ನಿಂತಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಡಿ.ಕೆ. ಸುರೇಶ್‌ರವರನ್ನು ಸೋಲಿಸಲು ಕುಮಾರಸ್ವಾಮಿ ಮತ್ತು ಯೋಗೇಶ್ವರ್‌ರವರುಗಳು ಒಂದಾಗಿದ್ದರು. ಇದೀಗ ಇದೇ ಡಿ.ಕೆ. ಸುರೇಶ್ ನಿಖಿಲ್ ಕುಮಾರಸ್ವಾಮಿ ಸೋಲಲು ಯೋಗಶ್ವರ್ ಜೊತೆ ಕೈ ಜೋಡಿಸುವ ಮೂಲಕ ರಾಜಕಾರಣದಲ್ಲಿ ಶತ್ರುಗಳು, ಮಿತ್ರರು ಆಗಾಗ ಬದಲಾಗುತ್ತಾರೆ ಎಂಬುದು ಇಲ್ಲಿ ನೋಡಬಹುದು. ಈ ಚನ್ನಪಟ್ಟಣದ ಉಪ ಚುನಾವಣೆಯ ಎರಡು ಪ್ರಮುಖ ಹುರಿಯಾಳುಗಳಲ್ಲಿ ಒಬ್ಬರು ಪಕ್ಷಾಂತರಿ ಆದರೆ, ಮತ್ತೊಬ್ಬರು ಕ್ಷೇತ್ರಾಂತರಿ ಎನಿಸಿಕೊಂಡಿದ್ದಾರೆ. ಯೋಗೇಶ್ವರ್ ತಮ್ಮ 9 ಚುನಾವಣೆಗಳನ್ನು 4 ವಿಭಿನ್ನ ಚಿಹ್ನೆಯಡಿ ಎದುರಿಸಿದ್ದಾರೆ. ಆಗಾಗ ಪಕ್ಷ ಬದಲಾಯಿಸುವ ಮೂಲಕ ಪಕ್ಷಾಂತರಿ ಎನಿಸಿಕೊಂಡಿದ್ದಾರೆ. ನಿಖಿಲ್ ಕುಮಾರಸ್ವಾಮಿ 3 ಚುನಾವಣೆಗಳನ್ನು ಒಂದೊಂದೇ ಕ್ಷೇತ್ರದಲ್ಲಿ ನಿಲ್ಲುವ ಮೂಲಕ ಕ್ಷೇತ್ರಾಂತರಿ ಎನಿಸಿದ್ದಾರೆ.


ಕಾಂಗ್ರೆಸ್ ಕಚೇರಿಯಲ್ಲಿ ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆ

ಚುನಾವಣೆಯ ಅಖಾಡ ದಿನ ದಿನಕ್ಕೂ ರಂಗೇರುತ್ತಿದ್ದು, ಜಿದ್ದಾಜಿದ್ದಿನ ಹಣಾಹಣಿಗೆ ವೇದಿಕೆ ಸಜ್ಜುಗೊಂಡಿದೆ. ಒಂದೆಡೆ ಜೆಡಿಎಸ್-ಬಿಜೆಪಿ ಮೈತ್ರಿಕೂಟ ರಣತಂತ್ರ ರೂಪಣೆಗೆ ಸರಣಿ ಸಭೆಗಳನ್ನು ನಡೆಸುತ್ತಿದ್ದು, ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿರವರು ಮತಯಾಚನೆ ಪ್ರಕ್ರಿಯೆ ಪ್ರಾರಂಭ ಮಾಡಿದ್ದು, ಮತ್ತೊಂದೆಡೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಮತ್ತು ಡಿ.ಕೆ. ಬ್ರದರ್ಸ್ ಬಣಗಳ ಬೆಸುಗೆಗೆ ಕಸರತ್ತು ಮುಂದುವರೆದಿದೆ. ನಾಮಪತ್ರಗಳ ಪರಿಶೀಲನೆ ಮತ್ತು ವಾಪಸ್ಸಾತಿ ಪೂರ್ಣಗೊಂಡು ಕಣದಲ್ಲಿರುವ ಹುರಿಯಾಳುಗಳ ಅಂತಿಮ ಪಟ್ಟಿ ಪ್ರಕಟಕ್ಕೂ ಮುನ್ನವೇ ರಾಜಕೀಯ ಪಕ್ಷಗಳು ಮತಬೇಟೆಗೆ ಇಳಿದಿದ್ದು, ಜಿಲ್ಲಾ ಪಂಚಾಯಿತಿಗಳ ಪ್ರತಿ ವಾರ್ಡ್‌ಗಳಲ್ಲಿ ಸೆಣಸಾಟಕ್ಕೆ ಅಣಿಗೊಳಿಸುವ ನಿಟ್ಟಿನಲ್ಲಿ ಉಭಯ ಪಾಳೆಯಗಳೂ ತಾಲೀಮು ನಡೆಸುತ್ತಿವೆ. ಸಂಪನ್ಮೂಲ ಎಷ್ಟಾದರೂ ಸೈ. ಚುನಾವಣೆ ಗೆಲ್ಲಲೇಬೇಕು ಎಂದು ಹಠಕ್ಕೆ ಬಿದ್ದಿರುವ ರಾಜಕೀಯ ಪಕ್ಷಗಳ ನಾಯಕರು ಪ್ರತಿಷ್ಠೆಯನ್ನು ಪಣಕ್ಕಿಟ್ಟು ಹೋರಾಟದಲ್ಲಿ ನಿರತವಾಗಿದ್ದಾರೆ.

ಸ್ವತಃ ಆಪರೇಷನ್ ಎಕ್ಸ್‌ಪರ್ಟ್ ಎನಿಸಿಕೊಂಡ ಸಿ.ಪಿ. ಯೋಗೇಶ್ವರ್ ಈ ಬಾರಿ ಚುನಾವಣೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ತಂಡ ನಡೆಸಿದ ಆಪರೇಷನ್ ಹಸ್ತ ಕಾರ್ಯಾಚರಣೆಯ ಖೆಡ್ಡಾಕ್ಕೆ ಬಿದಿದ್ದಾರೆ. ಈ ಮೂಲಕ ಅವರು ಎನ್‌ಡಿಎ ಮೈತ್ರಿ ಕೂಟದ ಜೆಡಿಎಸ್, ಬಿಜೆಪಿಗೆ ನಾಮಪತ್ರ ಸಲ್ಲಿಕೆ ಹಂತದಲ್ಲಿ ಬಿಗ್ ಶಾಕ್ ನೀಡಿರುವವರು. ಯೋಗೇಶ್ವರ್ ಪಕ್ಷಾಂತರ ಬೆನ್ನಲ್ಲೇ ಅಭ್ಯರ್ಥಿ ಆಯ್ಕೆಗೆ ಸಾಕಷ್ಟು ತಾಲೀಮು ನಡೆಸಿದ ಎನ್‌ಡಿಎ ಪಾಳೆಯ ಕಡೆಗೆ ಅಭಿಮನ್ಯು ದೂಡಿ ಪ್ರಬಲ ಸ್ಪರ್ಧೆಗೆ ಅಣಿಯಾಗಿದೆ.

| ಚನ್ನಪಟ್ಟಣ ಕ್ಷೇತ್ರದ ಮತಗಳ ವಿವರ | |
| --- | --- |
| ಪುರುಷ ಮತದಾರರು | 1,11,170 |
| ಮಹಿಳಾ ಮತದಾರರು | 1,19,197 |
| ಇತರ ಮತದಾರರು | 08 |
| ಒಟ್ಟು | 2,30,375 |

ಚನ್ನಪಟ್ಟಣ ಚುನಾವಣಾ ಅಖಾಡಕ್ಕೆ ನಿಖಿಲ್ ಕುಮಾರಸ್ವಾಮಿ ಧುಮುಕುವರೆಗೇ ಒಂದು ಲೆಕ್ಕ. ಅಭ್ಯರ್ಥಿಯಾಗಿ ಕಣಕ್ಕಿಳಿದ ಮೇಲೇ ಇನ್ನೊವಂದು ಲೆಕ್ಕ ಎನ್ನುವ ರೀತಿಯಲ್ಲೇ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ರಣೋತ್ಸಾಹದಿಂದ ಮುನ್ನುಗ್ಗುತ್ತಿವೆ. ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ ವೇಳೆ ನೆರೆದ ಬೃಹತ್ ಜನಸ್ತೋಮವು ಎನ್‌ಡಿಎ ಪಾಳೆಯದಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದ್ದು, ಶತಾಯ ಗತಾಯ ಗೆಲ್ಲಲೇಬೇಕು ಎನ್ನುವ ಹಠ, ಛಲ ಮೂಡುವಂತೆ ಮಾಡಿದೆ. ಹುಮ್ಮಸ್ಸು ಮೂಡಿಸಿ ಕಾರ್ಯಕರ್ತರನ್ನು ಈಗಾಗಲೇ ಗೆದ್ದಿರುವ ಎನ್‌ಡಿಎ ಮೈತ್ರಿಕೂಟ ಇದೀಗ ಚುನಾವಣೆ ಗೆಲ್ಲುವ ಗುರಿ ಮುಟ್ಟಲು ಹೊರಟಿದೆ. ಕ್ಷೇತ್ರದಲ್ಲಿ ತಮ್ಮದೇ ಆದ ಮತ ಬ್ಯಾಂಕ್ ಹೊಂದಿರುವ ಸಿ.ಪಿ. ಯೋಗೇಶ್ವರ್‌ರವರ ಲೆಕ್ಕಾಚಾರವೇ ಬೇರೆಯಿದೆ. ತಮ್ಮ ಶಕ್ತಿ ಸಾಮರ್ಥ್ಯ ಕುಂದದಂತೆ ನೋಡಿಕೊಂಡು, ಅಹಿಂತ ಮತಗಳನ್ನು ಸೆಳೆದುಕೊಂಡರೂ ಸಾಕು ಗೆಲುವು ನಿರಾಯಸ ಎನ್ನುವ ವಿಶ್ವಾಸದಲ್ಲಿದ್ದಾರೆ. ಎನ್‌ಡಿಎ ಮಿತ್ರ ಪಕ್ಷಗಳಿಂದ ಯಾರೇ ಎದುರಾಳಿಯಾದರೂ ತಮ್ಮ ಗೆಲುವಿಗೆ ಅಡ್ಡಿಯಿಲ್ಲ ಅಂದುಕೊಂಡಿದ್ದ ಯೋಗೇಶ್ವರ್ ಜತೆಗೆ ಕೈ ಪಾಳೆಯಕ್ಕೂ ನಿಖಿಲ್ ನಾಮಪತ್ರದ ಬೃಹತ್ ರೋಡ್ ಶೋ ಅಕ್ಷರಶಃ ದಿಗಿಲು ಮೂಡಿಸಿದೆ. ಇದೀಗ ಅವರು ತಮ್ಮಿಂದ ಸಿಡಿದು ತಮಗೂ ಮೊದಲೇ ಕಾಂಗ್ರೆಸ್ ಸೇರಿದ್ದವರ ಮನವೊಲಿಕೆಗೆ ಕರಾಮತ್ತು ನಡೆಸುತ್ತಿದ್ದಾರೆ.


ರೋಡ್ ಶೋನಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್



ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ

### ಜಿ.ಪಂ. ಕ್ಷೇತ್ರವಾರು ಟೀಂ ರಚನೆ

ಮತ ಬೇಟೆಗೆ ಪೂರಕವಾಗಿ ಎನ್‌ಡಿಎ ಮತ್ತು ಕಾಂಗ್ರೆಸ್ ಉಭಯ ಪಾಳೇಯಗಳೂ ಜಿಲ್ಲಾ ಪಂಚಾಯಿತಿ ಕ್ಷೇತ್ರವಾರು ಪ್ರಭಾವಿ ನಾಯಕರನ್ನೊಳಗೊಂಡ ತಂಡಗಳನ್ನು ರಚಿಸಿದ್ದಾರೆ. ಎರಡೂ ಕಡೆಯವರು ಈಗಾಗಲೇ ಚಟುವಟಿಕೆಯಲ್ಲಿ ನಿರತರಾಗಿದ್ದು, ಮೇಲಿಂದ ಮೇಲೆ ಸಭೆಗಳನ್ನು ನಡೆಸುತ್ತಿದ್ದಾರೆ. ಸ್ಥಳೀಯ ಮುಖಂಡರು, ಪ್ರಮುಖ ಕಾರ್ಯಕರ್ತರು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಸಭೆಯನ್ನು ನಡೆಸಿ ಜವಾಬ್ದಾರಿಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಈಗಾಗಲೇ ಮತದಾರರನ್ನು ಸೆಳೆಯಲು ಗುಂಡು-ತುಂಡು ಮೋಜಿನ ಸಭೆಗಳ ಆಯೋಜನೆಗೆ ಸಂಪನ್ಮೂಲ ಪೂರೈಕೆ ಕೆಲಸವೂ ಸಾಗಿದೆ. ಚುನಾವಣೆಯಲ್ಲಿ ನೆರೆಹೊರೆ ಕ್ಷೇತ್ರಗಳ ನಾಯಕರೂ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಸಿ.ಪಿ. ಯೋಗೇಶ್ವರ್ ಪಕ್ಷಾಂತರದ ತರುವಾಯ ಬಿಜೆಪಿಯಲ್ಲೇ ಉಳಿದುಕೊಂಡ ಪದಾಧಿಕಾರಿಗಳು, ಮುಖಂಡರು ಜೆಡಿಎಸ್ ಜತೆಗೆ ಬೆರೆಯಲು ಹೆಚ್ಚೇನೂ ಉಳಿದಿಲ್ಲ. ಆದರೆ ಕಾಂಗ್ರೆಸ್ ಪಾಳಯದಲ್ಲಿ ಸಮನ್ವಯತೆ ಮೂಡಿಸುವುದೇ ದೊಡ್ಡ ಸವಾಲಿನ ಕೆಲಸ. ಅದೆಷ್ಟೋ ಮಂದಿ ಯೋಗೇಶ್ವರ್ ವಿರುದ್ಧ ಸಿಡಿದೆದ್ದು ಲೋಕಸಭೆ ಚುನಾವಣೆ ವೇಳೆ ಮತ್ತು ನಂತರದಲ್ಲಿ ಪಕ್ಷಾಂತರ ಮಾಡಿದ್ದರು. ಇನ್ನು ಮೂಲ ಕಾಂಗ್ರೆಸ್ಸಿಗರೂ ಯೋಗೇಶ್ವರ್ ಅವರಿಂದ ಅಂತರ ಕಾಯ್ದುಕೊಂಡವರೇ, ಅವರನ್ನೆಲ್ಲಾ ಸಂತೈಸಿ, ಸಂಭಾಲಿಸಲು ಖುದ್ದು ಡಿ.ಕೆ. ಸುರೇಶ್ ರಂಗಪ್ರವೇಶ ಮಾಡಿದ್ದಾರೆ.




ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಸುತ್ತಿರುವುದು

ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್, ಡಿ.ಕೆ. ಸುರೇಶ್, ಹೆಚ್.ಸಿ. ಬಾಲಕೃಷ್ಣ ಸೇರಿದಂತೆ ಇತರರು ತಂಡ ಕಟ್ಟಿಕೊಂಡು ಜಿಲ್ಲಾ ಪಂಚಾಯಿತಿ ಕ್ಷೇತ್ರವಾರು ಸಭೆಗಳನ್ನು ನಡೆಸಿದ್ದಾರೆ. ಇನ್ನೊಂದೆಡೆ ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ಜೆಡಿಎಲ್‌ಪಿ ನಾಯಕ ಸುರೇಶ್‌ಬಾಬು ಸೇರಿದಂತೆ ಬಿಜೆಪಿ-ಜೆಡಿಎಸ್ ಮಿಶ್ರಪಡೆಯೂ ಸಭೆಗಳ ಮೂಲಕ ತಮ್ಮ ಸೇನಾನಿಗಳನ್ನು ಸಜ್ಜು ಮಾಡುವಲ್ಲಿ ತೊಡಗಿಸಿಕೊಂಡಿವೆ. ಒಂದೆಡೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಸಭೆಗಳು ಜರುಗುತ್ತಿದ್ದರೆ, ಇನ್ನೊಂದೆಡೆ ಚನ್ನಪಟ್ಟಣದಾಚೆಗಿನ ಹೋಟೆಲ್, ಪ್ರಭಾವಿ ನಾಯಕರ ನಿವಾಸಗಳಲ್ಲೂ ರಾಜಕೀಯ ಸಭೆಗಳು ಸಾಗುತ್ತಿವೆ. ಬಿಜೆಪಿ ಕಚೇರಿಯಲ್ಲಿ ಮಿತ್ರಪಕ್ಷದ ನಾಯಕರೊಟ್ಟಿಗೆ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಸಭೆ ನಡೆಸಿದ್ದಾರೆ. ದಿನೇ ದಿನೇ ಕಳೆದಂತೆ ಈ ಕ್ಷೇತ್ರಕ್ಕೆ ಎರಡೂ ಪಕ್ಷಗಳ ಅಭ್ಯರ್ಥಿಗಳ ಪರ ನಾಯಕರುಗಳು ಚನ್ನಪಟ್ಟಣಕ್ಕೆ ಎಂಟ್ರಿ ಕೊಡಲಿದ್ದಾರೆ.


ಎನ್‌ಡಿಎ ಅಭ್ಯರ್ಥಿ ಎಂದು ನಿಖಿಲ್ ಘೋಷಣೆ ಮಾಡಿದ ಸಂದರ್ಭ

ಜೆಡಿಎಸ್-ಬಿಜೆಪಿ ಮೈತ್ರಿಕೂಟ ಯಾರನ್ನೇ ಕಣಕ್ಕೆ ಇಳಿಸಿದ್ದರೂ ಅವರ ವಿರುದ್ಧ ಟೀಕಾ ಪ್ರಹಾರಕ್ಕೆ ಕಾಂಗ್ರೆಸ್ ಮೊದಲೇ ಪ್ಲಾನ್ ರೂಪಿಸಿತ್ತು. ನಿಖಿಲ್ ಸ್ಪರ್ಧೆ ಮಾಡಿರುವುದನ್ನು ಕುಟುಂಬ ರಾಜಕಾರಣವೆಂದು ಎದುರಾಳಿ ಸಿ.ಪಿ. ಯೋಗೇಶ್ವರ್, ಡಿ.ಕೆ. ಬ್ರದರ್ಸ್ ಅವರಾದಿಯಾಗಿ ಕಾಂಗ್ರೆಸ್ ನಾಯಕರೆಲ್ಲಾ ಮುಗಿಬಿದ್ದು ಟೀ ಪ್ರಹಾರ ನಡೆಸುತ್ತಿದ್ದಾರೆ. ಒಂದೊಮ್ಮೆ ಎನ್‌ಡಿಎ ಏನಾದರೂ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ಕೊಟ್ಟಿದ್ದರೆ, ತಮ್ಮೆದುರು ಸೆಣೆಸಲು ಧೈರ್ಯವಿಲ್ಲದೆ ಹೀಗೆ ಎಂದು ಮೂದಲಿಸುತ್ತಿದ್ದರು. ಹೇಗೆ ಮಾಡಿದರೂ ಮೊಸರಲ್ಲಿ ಕಲ್ಲು ಹುಡುಕುತ್ತಿದ್ದರೆಂದೇ ದಳಪತಿ ತಮ್ಮ ಪುತ್ರನನ್ನೇ ರಣಕಣಕ್ಕೆ ಇಳಿಸಿದ್ದಾರೆ, ಎನ್ನುವ ಸಮರ್ಥನೆ ಜೆಡಿಎಸ್ ಪಾಳಯದಿಂದ ವ್ಯಕ್ತವಾಗುತ್ತಿದೆ.


ಮಾಜಿ ಪ್ರಧಾನಿ ಮೊಮ್ಮಗನಿಗೆ ಆಶೀರ್ವದಿಸುತ್ತಿರುವುದು

ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆಯಲ್ಲಿ ಸೇರಿದ್ದ ಜನಸ್ತೋಮದ ವಿಚಾರದಲ್ಲೂ ಕಾಂಗ್ರೆಸ್ಸಿನವರು ಅಪಸ್ವರ ಎತ್ತಿದ್ದು, ಅಲ್ಲಿ ನೆರೆದವರೆಲ್ಲಾ ಚನ್ನಪಟ್ಟಣ ಕ್ಷೇತ್ರಕ್ಕೆ ಸೇರಿದವರಲ್ಲ. ಹೊರಗಿನಿಂದ ಬಂದವರೂ ಸಾಕಷ್ಟಿದ್ದರು ಎನ್ನುವ ಟೀಕೆಗಳು ಸಾಮಾಜಿಕ ಜಾಲತಾಣದಲ್ಲೂ ಹರಿದಾಡುತ್ತಿವೆ.

### ಇಬ್ಬರಿಗೂ ನಿದ್ದೆಗೆಡಿಸಿದೆ ಅಭ್ಯರ್ಥಿಗಳ ಸಂಖ್ಯೆ

ಈ ಉಪಚುನಾವಣೆಯಲ್ಲಿ ಸ್ಪರ್ಧೆ ಬಯಸಿ 51 ಮಂದಿ ಉಮೇದುವಾರಿಕೆ ಅರ್ಜಿ ಸಲ್ಲಿಸಿದ್ದಾರೆ. ಇಷ್ಟೂ ಸಂಖ್ಯೆಯ ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದೇ ಆದಲ್ಲಿ 4 ಮತಯಂತ್ರಗಳನ್ನು ಜೋಡಿಸಿಡದೇ ಅನ್ಯಮಾರ್ಗವಿಲ್ಲ. ಇದು ಸಹಜವಾಗಿಯೇ ಚುನಾವಣಾ ಆಯೋಗಕ್ಕೆ ತಲೆನೋವಾಗಿ ಪರಿಣಮಿಸಿದೆ. ಅಂತೆಯೇ ಗೊಂದಲ ಉಂಟಾಗಬಹುದು ಎನ್ನುವ ಕಾರಣಕ್ಕೆ ಅಖಾಡದಲ್ಲಿ ಜಿದ್ದಾಜಿದ್ದಿನ ಸೆಣೆಸಾಟಕ್ಕೆ ಇಳಿದಿರುವ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ್ತು ಕಾಂಗ್ರೆಸ್‌ನ ಸಿ.ಪಿ. ಯೋಗೇಶ್ವರ್‌ರವರನ್ನು ನಿದ್ದೆಗೆಡಿಸಿದೆ. ಯಾರೆಲ್ಲಾ ತಮ್ಮ ಮತಬುಟ್ಟಿಗೆ ಕೈ ಹಾಕಬಹುದೋ ಅಂಥವರನ್ನು ಪಟ್ಟಿ ಮಾಡಿಕೊಂಡು, ನಾಮಪತ್ರ ವಾಪಸ್ ಮಾಡಿಸುವ ನಿಟ್ಟಿನಲ್ಲಿ ಎರಡೂ ಪಾಳಯದವರು ಈಗಾಗಲೇ ನಿರತರಾಗಿದ್ದಾರೆ. ಪಕ್ಷಾಂತರಕ್ಕೆ ರೇಟ್ ಫಿಕ್ಸ್ ಆದಂತೆಯೇ ನಾಮಪತ್ರ ವಾಪಸ್‌ಗೂ ಭರ್ಜರಿ ಧಾರಣೆ ನಿಗದಿಗೊಳ್ಳುತ್ತಿದೆ. ಕೆಲವರು ಈಗಾಗಲೇ ಖೆಡ್ಡಾಕ್ಕೆ ಬಿದ್ದಿದ್ದರೆ, ಮತ್ತೆ ಕೆಲವರು ರೇಟ್ ಹೆಚ್ಚಿಸಿಕೊಳ್ಳುವ ಉಮೇದಿಯಲ್ಲಿ ಹಗ್ಗಜಗ್ಗಾಡುತ್ತಿದ್ದಾರೆ. ಮತೀಯತೆ ಆಧಾರದ

☞ 14

## ಸಿ.ಪಿ. ಯೋಗೇಶ್ವರ್ ಆಸ್ತಿ ವಿವರ

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಬಳಿಯಿರುವ ಆಸ್ತಿ ಅವರ ಹೆಸರಲ್ಲಿ ಒಟ್ಟು 27,94,06,412 ಮೌಲ್ಯದ ಸ್ಥಿರಾಸ್ತಿ ಇದ್ದು, ಪತ್ನಿ ಶೀಲಾ ಹೆಸರಲ್ಲಿ 25,35,37,740 ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ಪತ್ನಿ ಶೀಲಾ ಹೆಸರಿನಲ್ಲಿ 7,10,80, 556 ರೂ. ಮೌಲ್ಯದ ಚರಾಸ್ತಿ ಹೊಂದಿದ್ದು, ಶೇಷಗಿರಿಹಳ್ಳಿ, ಕೋತನಹಳ್ಳಿ, ಕೆಂಜಿಗರಹಳ್ಳಿ, ಕೇತೋಹಳ್ಳಿ, ಹಂಪಾಪುರ ಗ್ರಾಮದಲ್ಲಿ ಸಿ.ಪಿ. ಯೋಗೇಶ್ವರ್ ಸ್ಥಿರಾಸ್ತಿ ಹೊಂದಿದ್ದು ಯೋಗೇಶ್ವರ್ ಹೆಸರಲ್ಲಿ 22,02, 47,157 ರೂ. ಮೌಲ್ಯದ ಮತ್ತು ಪತ್ನಿ ಶೀಲಾ ಹೆಸರಿನಲ್ಲಿ 2,14,52,740 ರೂ. ಮೌಲ್ಯದ ಕೃಷಿ ಭೂಮಿ ಹೊಂದಿದ್ದಾರೆ.

ಶೀಲಾ ಹೆಸರಿನಲ್ಲಿ 6,65 ಕೋಟಿ ರೂ. ಮೌಲ್ಯದ ಕೃಷಿಯೇತರ ಭೂಮಿ ಇದೆ. ಯೋಗೇಶ್ವರ್ ಹೆಸರಲ್ಲಿ 2,37,62,000 ಕೋಟಿ ರೂ. ಮೌಲ್ಯದ ಮತ್ತು ಶೀಲಾ ಹೆಸರಲ್ಲಿ 15.45 ಕೋಟಿ ರೂ. ಮೌಲ್ಯದ ಮನೆಗಳಿವೆ. ಯೋಗೇಶ್ವರ್ ಹೆಸರಲ್ಲಿ 25,86,31,284 ರೂ. ಸಾಲವಿದ್ದು, ಶೀಲಾ ಹೆಸರಲ್ಲಿ 3,41,42,184 ರೂ. ಸಾಲವಿದೆ. 250 ಗ್ರಾಂ, ಚಿನ್ನಾಭರಣ, ಯೋಗೇಶ್ವರ್ ಹೊಂದಿದ್ದು, ಸಾರ್ವಜನಿಕರಿಂದ 1 ಕೆಜಿ ಚಿನ್ನ, 50 ಕೆಜಿ ಬೆಳ್ಳಿಯನ್ನು ಶೀಲಾರವರು ಸ್ವೀಕರಿಸಿದ್ದಾರೆ.

## ಚನ್ನಪಟ್ಟಣದಲ್ಲಿ ಯೋಗೇಶ್ವರ್ ಗೆಲುವು ಖಚಿತ : ಸಿಎಂ

ಚನ್ನಪಟ್ಟಣದ ಜನರು ಸಿ.ಪಿ. ಯೋಗೇಶ್ವರ್ ಅವರನ್ನು ಆಶೀರ್ವದಿಸಿ ಬೆಂಬಲಿಸುವ ನಂಬಿಕೆಯಿದೆ. ಕಾಂಗ್ರೆಸ್ ಅಭ್ಯರ್ಥಿ ದೊಡ್ಡ ಅಂತರದಲ್ಲಿ ಗೆಲ್ಲುವ ವಿಶ್ವಾಸವಿದೆ. ಈ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿನವರು ನಿಖಿಲ್ ಕುಮಾರಸ್ವಾಮಿಯವರನ್ನು ಅಭ್ಯರ್ಥಿ ಮಾಡಿದ್ದಾರೆ. ನಮಗೆ ಅದು ಮುಖ್ಯವಲ್ಲ. ಯೋಗೇಶ್ವರ್ ಇಲ್ಲಿಂದ ಗೆದ್ದು ವಿಧಾನಸಭೆಗೆ ಬರುತ್ತಾರೆ ಎನ್ನುವುದು ಸತ್ಯ. ಯೋಗೇಶ್ವರ್‌ರವರು ಕಾಂಗ್ರೆಸ್ ಪಕ್ಷದಲ್ಲಿದ್ದು, ಎರಡು ಬಾರಿ ಶಾಸಕರಾಗಿದ್ದರು. ಬಿಜೆಪಿ ಹಾಗೂ ಎನ್‌ಡಿಎನಿಂದ ಅವರಿಗೆ ಅನ್ಯಾಯವಾದ ಕಾರಣ ಅವರು ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನೊಪ್ಪಿ ಮರಳಿ ಬಂದಿರುವ ಯೋಗೇಶ್ವರ್‌ರನ್ನು ಇಡೀ ಕಾಂಗ್ರೆಸ್ ಪಕ್ಷ ಸ್ವಾಗತಿಸಿದೆ. ನಮ್ಮ ಅಭ್ಯರ್ಥಿಯೇ ಈ ಚುನಾವಣೆಯಲ್ಲಿ ಗೆಲುವು ಸಾಧಿಸುವುದು ಖಚಿತ. ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಗ್ಯಾರಂಟಿ ಯೋಜನೆಗಳು ನುಡಿದಂತೆ ನಡೆಯುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ಚನ್ನಪಟ್ಟಣದ ಅಭಿವೃದ್ಧಿ ಕೆಲಸಗಳು ಮುಂದಿನ ತಿಂಗಳಿನಿಂದ ಶಾಸಕರಾಗಿ ಯೋಗೇಶ್ವರ್‌ರವರು ಮುಂದುವರೆಸುತ್ತಾರೆ ಎಂದು ನಾಮಪತ್ರ ಸಲ್ಲಿಸುವ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯರವರು ವಿಶ್ವಾಸ ವ್ಯಕ್ತಪಡಿಸಿದರು.

## ಎನ್‌ಡಿಎ ಅಭ್ಯರ್ಥಿ ನಿಖಿಲ್ ಆಸ್ತಿ ವಿವರ

ಎನ್‌ಡಿ ಮೈತ್ರಿಕೂಟದ ಅಭ್ಯರ್ಥಿಯಾದ ನಿಖಿಲ್ ಕುಮಾರಸ್ವಾಮಿ ಅವರು ಒಟ್ಟು 113 ಕೋಟಿ ಆಸ್ತಿ ಹೊಂದಿದ್ದಾರೆ. ನಿಖಿಲ್ ಬಳಿ ಒಟ್ಟು 78,15 ಕೋಟಿ ಮೌಲ್ಯದ ಚರಾಸ್ತಿ, 29.34 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ನಿಖಿಲ್ ಪತ್ನಿ ರೇವತಿ ನಿಖಿಲ್ ಹೆಸರಲ್ಲಿ 5.49 ಕೋಟಿ ಮೌಲ್ಯದ ಚರಾಸ್ತಿ, 43 ಲಕ್ಷ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದು, ಮಗನ ಹೆಸರಲ್ಲಿ 11 ಲಕ್ಷ ರೂ. ಹಣ ಹೊಂದಿದ್ದಾರೆ. ಇನ್ನು ನಿಖಿಲ್ ಹೆಸರಲ್ಲಿ 1.400 ಕೆಜಿ ಚಿನ್ನ, 16 ಕೆಜಿ ಬೆಳ್ಳಿ ಇದ್ದರೆ, ಪತ್ನಿ ರೇವತಿ ಹೆಸರಲ್ಲಿ 1.411 ಕೆಜಿ ಚಿನ್ನ, 33 ಕೆಜಿ ಬೆಳ್ಳಿ, 13 ಕ್ಯಾರೆಟ್ ಡೈಮಂಡ್ ಇದೆ. ನಿಖಿಲ್ ಹೆಸರಲ್ಲಿ ಒಂದು ಇನ್ನೋವಾ, 1 ರೇಂಜ್ ರೋವರ್ ಹಾಗೂ ಎರಡು ಕ್ಯಾರಾಮ್ಯಸ್, ಒಂದು ಇನ್ನೋವಾ ಕ್ರಿಸ್ಟ್ ಕಾರು ಇದೆ. ನಿಖಿಲ್ ಕುಮಾರಸ್ವಾಮಿ ಪದವೀಧರನಾಗಿದ್ದು, ನಿಖಿಲ್ ಹೆಸರಲ್ಲಿ ಒಟ್ಟು 70.44 ಕೋಟಿ ಸಾಲ ಇದೆ. ರೇವಲ ಹೆಸರಲ್ಲಿ 4 ಕೋಟಿ 56 ಲಕ್ಷ ಸಾಲ ಇದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ (2023ರಲ್ಲಿ) 76.8 ಕೋಟಿ ಒಟ್ಟು ಆಸ್ತಿ ಹೊಂದಿದ್ದ ನಿಖಿಲ್ ಒಂದೇ ವರ್ಷದಲ್ಲಿ 47 ಕೋಟಿ ಹೆಚ್ಚುವರಿ ಆಸ್ತಿ ಹೊಂದಿದ್ದಾರೆ.

## ಕಠಿಣ ಚುನಾವಣೆ ಎಂದು ಗೊತ್ತಿದ್ದೇ ನಿಖಿಲ್ ಕಣಕ್ಕೆ : ಎಚ್‌ಡಿಕೆ

ಸಾಕಷ್ಟು ಬಿಜೆಪಿ ನಾಯಕರು ಯೋಗೇಶ್ವರ್‌ರನ್ನು ಎನ್‌ಡಿಎ ಅಭ್ಯರ್ಥಿ ಮಾಡಿ ಎಂದು ಮನವಿ ಮಾಡಿದ್ದರು. ಅದಕ್ಕೆ ನಾನು ತಲೆ ಬಾಗಿದ್ದೆ. ಈ ವಿಚಾರದಲ್ಲಿ ಸಾಕಷ್ಟು ಚರ್ಚೆಗಳು ನಡೆದಿತ್ತು. ಅವರು ಮೊದಲೇ ತೀರ್ಮಾನ ಮಾಡಿದಂತೆ ಕಾಂಗ್ರೆಸ್ ಸೇರಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾರವರು ಕರೆ ಮಾಡಿದ್ದರು ಮತ್ತು ಪ್ರಹ್ಲಾದ್ ಜೋಶಿರವರು ಸಹ ಈ ಬಗ್ಗೆ ಚರ್ಚೆ ಮಾಡಿ ಕೊನೆ ಹಂತದಲ್ಲಿ ಸಿ.ಪಿ. ಯೋಗೇಶ್ವರ್‌ರವರನ್ನು ಮನವೊಲಿಸಲು ಹೇಳಿದ್ದರು. ಅಷ್ಟರಲ್ಲಿ ಯೋಗೇಶ್ವರ್ ಕಾಂಗ್ರೆಸ್ ಸೇರಿದ್ದಾರೆ. ಬಿಜೆಪಿ-ಜೆಡಿಎಸ್ ನಾಯಕರ ಅಂತಿಮ ನಿರ್ಣಯದಿಂದ ನಿಖಿಲ್ ಅಭ್ಯರ್ಥಿಯಾಗಿದ್ದಾರೆ. ನಮ್ಮ ತೀರ್ಮಾನ ಇದ್ದಿದ್ದೇ ಬೇರೆ, ಆದರೆ ಹಲವು ರಾಜಕೀಯ ಬೆಳವಣಿಗೆಯಿಂದ ನಿಖಿಲ್ ಅಭ್ಯರ್ಥಿ ಆಗಿದ್ದಾರೆ. ಎರಡೂ ಪಕ್ಷದ ನಾಯಕರ ಗಮನಕ್ಕೆ ತರದೇ ಒಂದಷ್ಟು ಮಂದಿ ಏನೇನೋ ಮಾಡಿದ್ದಾರೆ. ರಾಜಕೀಯದಲ್ಲಿ ವಿರೋಧ ಪಕ್ಷದ ತಂತ್ರ, ಪ್ರತಿ ತಂತ್ರ ಇದ್ದಿದ್ದೇ. ಕಳೆದ ನಾಲ್ಕು ತಿಂಗಳಿಂದ ಇಲ್ಲಿಗೆ ಬಂದು ಸಾಕಷ್ಟು ಬೆಳವಣಿಗೆ ಮಾಡಿದ್ದಾರೆ. ಕೆಲವು ಕಾಂಗ್ರೆಸ್ ನಾಯಕರು ನಿಖಿಲ್ ಸ್ಪರ್ಧೆ ಮೊದಲೇ ತೀರ್ಮಾನ ಆಗಿತ್ತು ಅನ್ನೋ ಆಪಾದನೆ ಮಾಡಿದ್ದಾರೆ. ನಮ್ಮಲ್ಲಿ ಈ ಬಗ್ಗೆ ಮುಕ್ತವಾಗಿಯೇ ಚರ್ಚೆ ಆಗಿತ್ತು. ಅಂತಿಮವಾಗಿ ನಿಖಿಲ್‌ರನ್ನು ಸುಲಭವಾದ ಚುನಾವಣೆಯಂತೆ ಕಣಕ್ಕಿಳಿಸಿಲ್ಲ. ಇದು ಕಠಿಣವಾದ ಚುನಾವಣೆ ಎಂದು ಗೊತ್ತಿದ್ದೇ ಕಣಕ್ಕೆ ಇಳಿಸಲಾಗಿದೆ.


ಜೆಡಿಎಸ್-ಬಿಜೆಪಿ ನಾಯಕರ ಜೊತೆ ನಿಖಿಲ್ ಕುಮಾರಸ್ವಾಮಿ

### ನಿಪ್ಪಾಣಿ ನಗರ ಠಾಣೆಯ ಪಿಎಸ್ಐ ಉಮಾದೇವಿ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆ...

# ರಾತ್ರಿ ಸಮಯ ಬಹಿರ್ದೆಸೆಗೆ ಹೋಗಿದ್ದ ಅಪ್ರಾಪ್ತೆ ತರುಣಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ವಿಕೃತಕಾಮಿ ಸಲೀಂ ಬಂಧನ...



ಹಣ್ಣಿನ ವ್ಯಾಪಾರಿ, ವಿಕೃತ ಕಾಮಿ ಸಲೀಂ ಬಾಗವಾನ

**ಆತ ಗೇಣುದ್ದ ಗಡ್ಡ ಬಿಟ್ಟುಕೊಂಡು ಊರಿಗೆ ಉಪದೇಶ ಮಾಡುವ ಸೋಗು ಹಾಕಿಕೊಂಡ 59 ವರ್ಷದ ಮುಸ್ಲಿಂ ಹಣ್ಣಿನ ವ್ಯಾಪಾರಿ. ಹೆಂಗಸರೆಂದರೆ ಸಾಕು ಜೊಲ್ಲು ಸುರಿಸುತ್ತಿದ್ದ ಮಹಾ ಹರಾಮಿ ಕಾಮುಕನಾಗಿದ್ದನು. ತನ್ನ ಮನೆಯ ಸಮೀಪ ವಾಸವಿದ್ದ 17 ವರ್ಷದ ಮುಸ್ಲಿಂ ಅಪ್ರಾಪ್ತ ಕಾಲೇಜು ತರುಣಿ ಅದೊಂದು ದಿನ ಮಧ್ಯರಾತ್ರಿ ಸಮಯದಲ್ಲಿ ತನ್ನ ತಾಯಿಯನ್ನು ಕರೆದುಕೊಂಡು ಬಹಿರ್ದೆಸೆಗೆ ಹೋಗಿ ತಾಯಿ ಬರುವ ದಾರಿ ಕಾಯುತ್ತ ನಿಂತಿದ್ದಳು. ಮಧ್ಯರಾತ್ರಿ ಇದನ್ನು ಗಮನಿಸಿದ ಹಣ್ಣಿನ ವ್ಯಾಪಾರಿ ಕಳ್ಳ ಬೆಕ್ಕಿನಂತೆ ಬಂದು ಅಪ್ರಾಪ್ತೆಯನ್ನು ಬಲವಾಗಿ ತಬ್ಬಿಕೊಂಡು, ಬಾಯಿ ಮುಚ್ಚಿ ಅವಳ ಎದೆ ಹಿಚುಕತೊಡಗಿದನು. ಗಾಬರಿಗೊಂಡ ಅಪ್ರಾಪ್ತೆ ಕಾಮುಕ ಹಣ್ಣಿನ ವ್ಯಾಪಾರಿಯನ್ನು ನೂಕಿದಳು. ಇದರಿಂದ ಹೆದರಿ ಆತ ಮನೆ ಸೇರಿಕೊಂಡನು. ಮರುದಿನ ತುಂಬಾ ಹೆದರಿಕೊಂಡ ಅಪ್ರಾಪ್ತೆ ತನ್ನ ಮೇಲೆ ಹಣ್ಣಿನ ವ್ಯಾಪಾರಿ ನಡೆಸಿದ ಲೈಂಗಿಕ ದೌರ್ಜನ್ಯ ವಿವರಿಸಿದಳು. ಆಕ್ರೋಶಗೊಂಡ ಅಪ್ರಾಪ್ತೆಯ ತಾಯಿ ಹಣ್ಣಿನ ವ್ಯಾಪಾರಿಯ ಮೇಲೆ ದೂರು ದಾಖಲಿಸಿದಳು. ಪ್ರಕರಣದ ಬೆನ್ನತ್ತಿದ ಪಿಎಸ್ಐ ಉಮಾದೇವಿ ಮತ್ತು ಸಿಬ್ಬಂದಿಗಳು ಸಿಪಿಐ ಬಿ.ಎಸ್. ತಳವಾರ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ನಿರ್ದೇಶನದಲ್ಲಿ ಕಾಮುಕನನ್ನು ಬಂಧಿಸಿ ಜೈಲಿಗಟ್ಟಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪೊಲೀಸ್ ಉಪವಿಭಾಗದ ನಿಪ್ಪಾಣಿ ನಗರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

**ಬೆಳಗಾವಿ**
✍ ಮನ್ನಾಪೂರ

ಇಂದು ದೇಶದಾದ್ಯಂತ ವಯಸ್ಸಾದವರಿಂದಲೇ ಹೆಣ್ಣು ಮಕ್ಕಳ ಮೇಲೆ ಅದರಲ್ಲೂ ಹೆಚ್ಚಾಗಿ ಅಪ್ರಾಪ್ತ ಬಾಲಕಿ, ತರುಣಿಯರ ಮೇಲೆ ವಿಕೃತಕಾಮಿಗಳು ನಿರಂತರವಾಗಿ ಲೈಂಗಿಕ ದೌರ್ಜನ್ಯ ನಡೆಸುತ್ತಿರುವುದು ಖಂಡನಾರ್ಹ. ದೇಶದಲ್ಲಿ ಬಿಗಿಯಾದ ಕಾನೂನುಗಳಿದ್ದರೂ ಮತ್ತು ನ್ಯಾಯಾಲಯದಲ್ಲಿ ಕಠಿಣ ಶಿಕ್ಷೆ ವಿಧಿಸುವ ಪ್ರಮಾಣ ಹೆಚ್ಚಾಗುತ್ತಿದ್ದರೂ ವಯಸ್ಸಾದ ಕಾಮುಕರು ಹದಿಹರೆಯದ ತರುಣರಿಗಿಂತ ಮುಂದೆ ಹೋಗಿ ಅಪ್ರಾಪ್ತೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದಾರೆ.



ಎಸ್ಪಿ ಡಾ. ಭೀಮಾಶಂಕರ ಗುಳೇದ



ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.



ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ

ಇತ್ತೀಚಿಗೆ ಗಡಿ ಜಿಲ್ಲೆ ಬೆಳಗಾವಿಯ ನಿಪ್ಪಾಣಿ ನಗರದಲ್ಲಿ 59 ವರ್ಷದ ಹಣ್ಣಿನ ವ್ಯಾಪಾರಿ ಗೇಣುದ್ದ ಬಿಳಿ ಗಡ್ಡವನ್ನು ಬಿಟ್ಟುಕೊಂಡು ಸಮಾಜಕ್ಕೆ ಉಪದೇಶ ಮಾಡುತ್ತಿದ್ದ ಸಲೀಂ ಬಾಬಾಸಾಹೇಬ ಬಾಗವಾನ ಎಂಬಾತನು 17 ವರ್ಷದ ಕಾಲೇಜು ತರುಣಿ, ತನ್ನ ಮೊಮ್ಮಗಳ ವಯಸ್ಸಿನ ಅಪ್ರಾಪ್ತೆಯ ಮೇಲೆ ಲೈಂಗಿಕ ಅತ್ಯಾಚಾರ ವೆಸಗಲು ಪ್ರಯತ್ನಿಸಿ ದೌರ್ಜನ್ಯ ಮಾಡಿದ ಪ್ರಕರಣದಲ್ಲಿ ನಿಪ್ಪಾಣಿ ನಗರ ಪೊಲೀಸರ ಕೈಗೆ ಸಿಕ್ಕು ಜೈಲು ಸೇರಿ ಇಂದು ತಂಗಳು ಮುರಿಯುತ್ತ ಕಂಬಿ ಎಣಿಸುತ್ತಿದ್ದಾನೆ.

**ಕಾಮ ನೆತ್ತಿಗೇರಿಸಿಕೊಂಡಿದ್ದ ಸಲೀಂ...**

ಒಮ್ಮೆ ಮನುಷ್ಯರ ತಲೆಯಲ್ಲಿ ಕಾಮದ ಪಿತ್ತನೆತ್ತಿಗೇರಿದರೆ ಸಾಕು. ಅಂತಹವರು ಸಂಬಂಧ, ರೂಪ, ಯೌವನ ಯಾವುದನ್ನು ನೋಡದೇ ವಿಕೃತ ಮನೋಭಾವ ಬೆಳೆಸಿಕೊಂಡಿರುತ್ತಾರೆ. ಇಲ್ಲೂ ಕೂಡಾ ನಿಪ್ಪಾಣಿ ನಗರದ ಹಣ್ಣಿನ ವ್ಯಾಪಾರಿ ಸಲೀಂ ಬಾಬಾಸಾಹೇಬ ಬಾಗವಾನನ ಗತಿ ಆಗಿದೆ.

ಇಂದು ಜಮಾತದಲ್ಲಿ ಹಿರಿಯ ಎನಿಸಿಕೊಂಡಿದ್ದವ ತನ್ನ ಹೀನಕೃತ್ಯದಿಂದ ಕುಲಗೆಟ್ಟು ಹೋಗಿದ್ದಾನೆ. ಈತನ ಕೃತ್ಯದಿಂದ ಹೆಂಡತಿ, ಮಕ್ಕಳು, ಬಂಧುಗಳು ನಾಚಿ ತಲೆ ತಗ್ಗಿಸುವಂತಹ ಘಟನೆ ಇದಾಗಿದೆ. ನಿಪ್ಪಾಣಿಯ ಬಡ್ಡೆ ಗಲ್ಲಿಯ ನಿವಾಸಿಯಾಗಿದ್ದ ಈತ ತಕ್ಕಮಟ್ಟಿಗೆ ಸ್ಥಿತಿವಂತ. ಆದರೆ ಈತ ಇಂದು ಹೇಸಿಗೆ ತಿನ್ನುವ ಕೃತ್ಯ ಮಾಡಿದ್ದಾನೆ.

**ಸಲೀಂನ ಮನೆಯ ಹತ್ತಿರದಲ್ಲಿದ್ದ ಅಪ್ರಾಪ್ತೆ...**

ಆಕೆ 17 ವರ್ಷದ ಕಾಲೇಜು ಓದುತ್ತಿದ್ದ ಅಪ್ರಾಪ್ತೆ. ನೋಡಲು ಸುಂದರವಾಗಿ ದಷ್ಟ-ಪುಷ್ಟವಾಗಿ ಬೆಳೆದಿದ್ದಳು. ನಾಲ್ಕು ವರ್ಷಗಳ ಹಿಂದೆ ತಂದೆಯನ್ನು ಕಳೆದುಕೊಂಡು ತಾಯಿಯ ಜತೆಗೆ ವಾಸವಿದ್ದು, ಈಕೆಗೊಬ್ಬ ತಮ್ಮನಿದ್ದು ಈಕೆಯು ಇತ್ತೀಚಿಗೆ ತನ್ನ ತಾಯಿಯೊಂದಿಗೆ ಬಡ್ಡೆಗಲ್ಲಿಯಲ್ಲಿನ ಬಾಡಿಗೆ ಮನೆಯಲ್ಲಿದ್ದಳು. ತಾಯಿ ಉಪಜೀವನಕ್ಕೆ ಸಣ್ಣಪುಟ್ಟ ಕೆಲಸ ಮಾಡಿ ಪುಡಿಗಾಸು ಸಂಪಾದಿಸಿ ಮಗಳು ಮತ್ತು ಮಗನನ್ನು ಓದಿಸುತ್ತಿದ್ದಳು. 17 ವರ್ಷದ ಅಪ್ರಾಪ್ತೆ ತಾನಾಯಿತು ತನ್ನ ಕಾಲೇಜು ಆಯಿತು ಎಂಬಂತೆ ತನ್ನ ಪಾಡಿಗೆ ತಾನಿದ್ದಳು. ಯಾವಾಗಲಾದರೊಮ್ಮೆ ಅಪರೂಪಕ್ಕೊಮ್ಮೆ ಸಲೀಂ ಬಾಗವಾನ್ ಎದುರಿಗೆ ಕಂಡಾಗ ಚಾಚಾ ಎಂದು ಬಾಯಿ ತುಂಬಾ ಗೌರವದಿಂದ ಕರೆಯುತ್ತಿದ್ದಳು.



ಎಎಸ್ಐ ಎಸ್.ಕೆ. ನರೇಗಲ್



ಮುಖ್ಯಪೇದೆ ಪಾರೇಶ ಗಸ್ತಿ



ಪೇದೆ ಬಿ.ಎಸ್. ನೇರ್ಲಿ

**ಅಪ್ರಾಪ್ತೆಯ ಮೇಲೆ ಕಣ್ಣು ಬಿತ್ತು...**

17 ವರ್ಷದ ಅಪ್ರಾಪ್ತೆಯನ್ನು ಕಂಡಾಗಿನಿಂದ ಸಲೀಂ ಬಾಗವಾನನ ವಿಕೃತಕಾಮ ಜಾಗೃತಗೊಂಡಿತ್ತು. ಇಂತಹ ಸುಂದರಿಯನ್ನು ಹೇಗಾದರೂ ಮಾಡಿ ಅನುಭವಿಸಲೇಬೇಕು ಎಂಬ ಲೈಂಗಿಕ ದುರಾಸೆ ವಿಕೃತ ಕಾಮುಕನ ಮನಸ್ಸಿನಲ್ಲೂ ಪುಟಿದೇಳತೊಡಗಿತು. ಅಂದಿನಿಂದ ಮುದಿಯ ಸಲೀಂ ಬಾಗವಾನ ಸಮಯಕ್ಕಾಗಿ ಕಾಯ್ದು ಕುಳಿತಿದ್ದನು. ಈತನ ಮನೆಯಲ್ಲಿ ಹೆಂಡತಿ, ಮಗ, ಮೊಮ್ಮಗಳು ಇದ್ದರೂ ಈತ ಮಹಾ ಚಪಲ ಚನ್ನಿಗರಾಯನಂತೆ ಹೆಣ್ಣು ಮಕ್ಕಳನ್ನು ಕಂಡು ಬಿಡಾಡಿ ನಾಯಿ ತರಹ ಜೊಲ್ಲು ಸುರಿಸುತ್ತಿದ್ದನು.

**ತಾಯಿಯೊಂದಿಗೆ ಬಹಿರ್ದೆಸೆಗೆ...**

ಅಂದು ದಿನಾಂಕ 19-10-2024 ರಂದು ರಾತ್ರಿ ನಿಪ್ಪಾಣಿ ನಗರದಲ್ಲಿ ಜರುಗಿದ 'ಉರುಸ್' ಜಾತ್ರೆಗೆ ಹೋಗಿ ಮಧ್ಯರಾತ್ರಿ 20-10-2024ರಂದು ಅಪ್ರಾಪ್ತೆ ತರುಣಿ, ತಮ್ಮ ಹಾಗೂ ತಾಯಿ ಬಡ್ಡೆ ಗಲ್ಲಿಯ ನಿವಾಸಕ್ಕೆ ಬಂದರು. ಈ ಸಂದರ್ಭದಲ್ಲಿ ಅಪ್ರಾಪ್ತೆಯ ತಾಯಿಗೆ ಬಹಿರ್ದೆಸೆ ಬಂದಂತಾಗಿ ಮಗಳನ್ನು ಕರೆದುಕೊಂಡು ಮನೆಯಿಂದ ಅನತಿ ದೂರದಲ್ಲಿದ್ದ ಟಾಯ್ಲೆಟ್‌ಗೆ ಹೋಗಿದ್ದಳು. ಈ ಸಂದರ್ಭದಲ್ಲಿ ಅಪ್ರಾಪ್ತೆ ತಾಯಿ ಬರುವ ದಾರಿ ಕಾಯುತ್ತ ರಸ್ತೆಯ ಮೇಲೆ ಒಂದು ದಂಡೆಗೆ ನಿಂತಿದ್ದಳು. ಎಲ್ಲ ಕಡೆಗೂ ನಿಶ್ಯಬ್ದ ವಾತಾವರಣವಿತ್ತು ಜಿರುಂಡೆಗಳ ಸಪ್ಪಳ ಸಂಗೀತದಂತೆ ಗುಂಯಗುಟ್ಟುತ್ತಿತ್ತು.

**ಅಪ್ರಾಪ್ತೆಯ ಮೇಲೆ ರೇಪ್‌ಗೆ ಪ್ರಯತ್ನ...**

ಅಂದು ರಾತ್ರಿ ವಿಕೃತ ಕಾಮುಕ ಸಲೀಂ ಬಾಬಾಸಾಹೇಬ ಬಾಗವಾನ್‌ಗೆ ನಿದ್ರೆ ಬಂದಿರಲಿಲ್ಲ. ಯಾಕೋ... ಏನೋ... ತಲೆಯಲ್ಲಿ ಲೈಂಗಿಕ ವಿಚಾರಗಳು ಬರತೊಡಗಿದ್ದವು. ಮನೆಯಲ್ಲಿ ಹೆಂಡತಿ, ಮಕ್ಕಳು ಮಲಗಿಕೊಂಡಿದ್ದರು. ಕಿಟಕಿಯಲ್ಲಿ ನೋಡಿದಾಗ ಅಪ್ರಾಪ್ತೆಯು ಟಾಯ್ಲೆಟ್ ಹೊರಗಡೆಗೆ ನಿಂತಿರುವುದು ಕಂಡಿದೆ. ಇದೇ ಸರಿಯಾದ ಸಮಯವಿದೆ ಹೇಗಾದರೂ ಮಾಡಿ ಇಂದು ಅಪ್ರಾಪ್ತೆಯನ್ನು ಬಲೆಗೆ ಕೆಡವಿಕೊಂಡು ಸುಖಿಸಬೇಕು ಎಂಬ ಹುಚ್ಚು ಆಸೆಯಿಂದ ಕಳ್ಳ ಬೆಕ್ಕಿನಂತೆ ಸಪ್ಪಳ ಮಾಡದೇ ಹಿಂದಿನಿಂದ ಬಂದು ಅಪ್ರಾಪ್ತೆಯನ್ನು ಬಲವಾಗಿ ತಬ್ಬಿಕೊಂಡು ಆಕೆ ಚೀರಾಡದಂತೆ ಆಕೆಯ ಬಾಯಿ ಮುಚ್ಚಿ ತನ್ನ ಹೊಲಸು ಬಾಯಿಂದ ಕಚ್ಚಲು ಮುಂದಾಗಿ, ಅಪ್ರಾಪ್ತೆಯ ಎದೆಯನ್ನು ತನ್ನ ಒರಟು ಕೈಗಳಿಂದ ಬಲವಾಗಿ ಹಿಚುಕತೊಡಗಿದನು. ಒಮ್ಮೆಲೆ ನಡೆದ ಘಟನೆಯಿಂದ ಅಪ್ರಾಪ್ತೆ ಭಯ ಬಿದ್ದು ಸಲೀಂ ಬಾಗವಾನನಿಗೆ ನೂಕಿದ್ದಾಳೆ. ನೂಕಿದ ರಭಸಕ್ಕೆ ಕೆಳಗೆ ಬಿದ್ದು ಎಲ್ಲಿ ಬಾಯಿ ಮಾಡಿ ತನ್ನ ಮರ್ಯಾದೆ ಕಳೆದಾಳು ಎಂದು ಹೆದರಿ ಓಡಿ ತನ್ನ ಮನೆ ಸೇರಿಕೊಂಡನು. ಇತ್ತ ಅಪ್ರಾಪ್ತೆ ಏನೂ ಹೇಳದೇ ತನ್ನ ತಾಯಿಯ ಜತೆ ಮನೆಗೆ ತೆರಳಿದಳು.



ಸಿಪಿಐ ಬಿ.ಎಸ್. ತಳವಾರ



ಪಿಎಸ್ಐ ಉಮಾದೇವಿ

ಅದೇ ದಿನ ಮಧ್ಯಾಹ್ನ ಇದ್ದಕ್ಕಿದ್ದಂತೆ ಅಪ್ರಾಪ್ತೆ ಅಳತೊಡಗಿದಾಗ ಯಾಕೆ...? ಏನಾಯಿತು...? ಎಂದು ಕೇಳಿದಾಗ 'ಹಣ್ಣಿನ ವ್ಯಾಪಾರಿ ಸಲೀಂ ಬಾಗವಾನ್ ನನ್ನ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಪಟ್ಟ ಇದರಿಂದ ನನಗೆ ತುಂಬಾ ಹೆದರಿಕೆಯಾಗಿದೆ' ಎಂದು ನಡೆದಿದ್ದ ಎಲ್ಲ ವಿಷಯ ತಿಳಿಸಿದಳು. ಮಗಳ ಬಾಯಿಂದ ವಿಷಯ ಕೇಳಿ ತಾಯಿ ಉರಿದೆದ್ದಳು.

**ಪೊಲೀಸರಿಗೆ ದೂರು ನೀಡಿದಳು...**

ಬಡ್ಡೆ ಗಲ್ಲಿಯ ಕೆಲವು ಜನ ಹಿರಿಯರಿಗೆ ವಿಷಯ ತಿಳಿಸಿ ನೇರವಾಗಿ ನಿಪ್ಪಾಣಿ ನಗರ ಪೊಲೀಸ್ ಠಾಣೆಗೆ ಧಾವಿಸಿ ಬಂದು ತನ್ನ ಅಪ್ರಾಪ್ತೆ ಮಗಳ ಮೇಲೆ ಹಣ್ಣಿನ ವ್ಯಾಪಾರಿ ಸಲೀಂ ಬಾಬಾಸಾಹೇಬ ಬಾಗವಾನ ನಡೆಸಿದ ಹೀನಕೃತ್ಯವನ್ನು ವಿವರಿಸಿ ಅಂದು ಕರ್ತವ್ಯದ ಮೇಲಿದ್ದ ಪಿಎಸ್ಐ ಉಮಾದೇವಿ ಅವರ ಹತ್ತಿರ ದೂರನ್ನು ನೀಡಿದಳು. ಪ್ರಕರಣದ ಗಂಭೀರತೆಯನ್ನು ಅರಿತುಕೊಂಡ ಪಿಎಸ್ಐ ಉಮಾದೇವಿ ಅವರು ತಕ್ಷಣ ಸಿಪಿಐ ಬಿ.ಎಸ್. ತಳವಾರ, ಚಿಕ್ಕೋಡಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು.

**ವಿಕೃತ ಕಾಮಿ ಸಲೀಂ ಬಾಗವಾನ ಬಂಧನ...**

ಶತಾಯ-ಗತಾಯ ಆರೋಪಿಯನ್ನು ಬಂಧಿಸಲು ನಗರ ಪಿಎಸ್ಐ ಉಮಾದೇವಿ ಸಿದ್ಧತೆ ನಡೆಸಿದರು. ಈ ಸಂದರ್ಭದಲ್ಲಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್., ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ಬಿ.ಎಸ್. ತಳವಾರ ಅವರಿಂದ ಅಗತ್ಯ ನಿರ್ದೇಶನಗಳನ್ನು ಪಡೆದುಕೊಂಡರು. ಖಚಿತ ಮಾಹಿತಿ ಆಧರಿಸಿ ವಿಕೃತ ಕಾಮುಕ ಸಲೀಂ ಬಾಬಾಸಾಹೇಬ ಬಾಗವಾನನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ಮಾಡಲಾಗಿ ಆತ ತನ್ನ ಹೀನಕೃತ್ಯ ಒಪ್ಪಿಕೊಂಡನು. ನ್ಯಾಯಾ ಧೀಶರ ಮುಂದೆ ಸಲೀಂನನ್ನು ಹಾಜರುಪಡಿಸಿದಾಗ ನ್ಯಾಯಾಧೀಶರು ಈತನನ್ನು ಜೈಲಿಗೆ ಅಟ್ಟಿದ್ದಾರೆ. ಪ್ರಕರಣದಲ್ಲಿ ತನಿಖೆಗೆ ಮತ್ತು ಆರೋಪಿ ಬಂಧನದಲ್ಲಿ ಎಎಸ್ಐ ಎಸ್.ಕೆ. ನರೇಗಲ್, ಮುಖ್ಯಪೇದೆಗಳಾದ ಬಿ.ಜೆ. ತಳವಾರ, ಪಾರೇಶ ಗಸ್ತಿ, ಪೇದೆ ಬಿ.ಎಸ್. ನೇರ್ಲಿ ತನಿಖಾಧಿಕಾರಿ ಉಮಾದೇವಿ ಅವರಿಗೆ ನೆರವಾಗಿದ್ದಾರೆ. ☯



**ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಟ್ಯೂಷನ್ ಬರುವಂತೆ ಬಾಲಕಿಯನ್ನು ಕರೆಯಿಸಿ ಬಳಿಕ ಚಾಕೋಲೇಟ್ ಕೊಡಿಸುವುದಾಗಿ ಪುಸಲಾಯಿಸಿ ಟ್ಯೂಷನ್ ಸೆಂಟರ್‌ನಿಂದ ಕರೆದೊಯ್ದು ನಿರ್ಜನ ಗಲ್ಲಿಯಲ್ಲಿ ಅತ್ಯಾಚಾರ ನಡೆಸಿದ್ದಲ್ಲದೆ, ವಿಷಯ ಬಹಿರಂಗವಾಗಬಹುದೆಂದು ಹೆದರಿ ಕೊಲೆಗೈದು ಶವವನ್ನು ಸಂಪಿನೊಳಗೆ ಹಾಕಿ ಆಕೆಯ ಪೋಷಕರೊಂದಿಗೆ ಸೇರಿ ಬಾಲಕಿಯ ಹುಡುಕಾಟದ ನಾಟಕವಾಡಿದ್ದ ಕಾಮುಕನ ಕೃತ್ಯ ಸಾಕ್ಷ್ಯಾಧಾರಗಳಿಂದ ಸಾಬೀತಾದ ಹಿನ್ನಲೆಯಲ್ಲಿ ಅಪರಾಧಿಗೆ ಮಂಡ್ಯ ಜಿಲ್ಲಾ ಒಂದನೇ ತ್ವರಿತಗತಿ ನ್ಯಾಯಾಲಯವು ಅಕ್ಟೋಬರ್ 19 ಶನಿವಾರ ಜೀವಾವಧಿ ಶಿಕ್ಷೆಯನ್ನು ಪ್ರಕಟಿಸಿ ತೀರ್ಪು ನೀಡಿದೆ.**

# ಮಳವಳ್ಳಿ: ಬಾಲಕಿಯ ಹತ್ಯಾ'ಚಾರಿಗೆ ಜೀವಾವಧಿ ಶಿಕ್ಷೆ

**ಮಂಡ್ಯ**

✍ಬಿ.ಎಂ. ಲವಕುಮಾರ್

ಪ್ರಕರಣದಲ್ಲಿ ಅಪರಾಧಿಯಾಗಿರುವ ಟ್ಯೂಷನ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾಂತರಾಜು(52) ಶಿಕ್ಷೆಗೆ ಗುರಿಯಾದ ಹತ್ಯಾ'ಚಾರಿ. ಈತ ಮಳವಳ್ಳಿ ತಾಲ್ಲೂಕಿನ ನೆಲಮಾಕನಹಳ್ಳಿ ಗ್ರಾಮದವನಾಗಿದ್ದು, ಸುಮಾರು 15 ವರ್ಷಗಳ ಕಾಲ ಮೈಸೂರಿನಲ್ಲಿ ನೆಲೆಸಿದ್ದನು. ಇದಾದ ಬಳಿಕ ಮಳವಳ್ಳಿ ಪಟ್ಟಣಕ್ಕೆ ಬಂದ ಈತ ಅಲ್ಲಿನ ಟ್ಯೂಷನ್ ಸೆಂಟರ್‌ನಲ್ಲಿ ಕೆಲಸಕ್ಕೆ ಸೇರಿ ಕೊಂಡಿದ್ದನು. ಅದೇನಾಯಿತೋ ಈ ಕಾಮುಕ ಕಾಂತರಾಜು ಬಾಲಕಿ ಮೇಲೆ ಅತ್ಯಾಚಾರ ಎಸಗುವ ಸ್ಕೆಚ್ ಹಾಕಿದ್ದನು.





ಅದರಂತೆ 2022ರ ಅಕ್ಟೋಬರ್ 10ರಂದು ತಾನು ಕೆಲಸ ಮಾಡುತ್ತಿದ್ದ ಟ್ಯೂಷನ್ ಸೆಂಟರ್‌ಗೆ ಟ್ಯೂಷನ್ ಗಾಗಿ ಬರುತ್ತಿದ್ದ ಮಳವಳ್ಳಿ ಪಟ್ಟಣದ ಎನ್ ಇಎಸ್ ಬಡಾವಣೆಯಲ್ಲಿ ವಾಸವಾಗಿರುವ ದಂಪತಿಯ ಪುತ್ರಿಗೆ ಕರೆ ಮಾಡಿ ಬೆಳಿಗ್ಗೆ 11 ಗಂಟೆ ಸುಮಾರಿಗೆ ಟ್ಯೂಷನ್‌ಗೆ ಬರುವಂತೆ ತಿಳಿಸಿದ್ದನು. ಬಾಲಕಿ ಟ್ಯೂಷನ್‌ಗೆ ಬಂದ ಸಂದರ್ಭದಲ್ಲಿ ಚಾಕೊಲೇಟ್ ಕೊಡಿಸುವುದಾಗಿ ಪುಸಲಾಯಿಸಿ ಅಲ್ಲಿಂದ ಕರೆದೊಯ್ದು ಸಮೀಪದ ನಿರ್ಜನ ಗಲ್ಲಿಯಲ್ಲಿ ಅತ್ಯಾಚಾರ ನಡೆಸಿ, ಬಳಿಕ ಅಸ್ವಸ್ಥ ಗೊಂಡಿದ್ದ ಬಾಲಕಿಯ ಕೊಲೆಗೈದು ಶವವನ್ನು ಮಳವಳ್ಳಿ ಪಟ್ಟಣದ ಮೈಸೂರು ರಸ್ತೆಯ ಮಯೂರ ಬೇಕರಿ ಹಿಂಭಾಗದ ನಿರ್ಮಾಣ ಹಂತದ ಮನೆಯ ಕಟ್ಟಡದ ನೀರಿನ ಸಂಪಿಗೆ ಹಾಕಿ ತನಗೇನು ಗೊತ್ತೇ ಇಲ್ಲ ಎಂಬಂತೆ ಇದ್ದು ಬಿಟ್ಟಿದ್ದನು.



## ಟ್ಯೂಷನ್‌ಗೆಂದು ಮನೆಯಿಂದ ಹೋದ ಬಾಲಕಿ

ಬೆಳಿಗ್ಗೆ 11 ಗಂಟೆಗೆ ಟ್ಯೂಷನ್‌ಗೆಂದು ಮನೆಯಿಂದ ಹೋದ ಬಾಲಕಿ ಸಂಜೆಯಾದರೂ ಮನೆಗೆ ಬಾರದೆ ಇದ್ದಾಗ ಗಾಬರಿಗೊಂಡ ಪೋಷಕರು ಟ್ಯೂಷನ್ ಸೆಂಟರ್ ಸೇರಿದಂತೆ ಅಕ್ಕಪಕ್ಕದಲ್ಲಿ ವಿಚಾರಿಸಿದರೂ ಬಾಲಕಿ ಪತ್ತೆಯಾಗಿರಲಿಲ್ಲ. ಟ್ಯೂಷನ್ ಸೆಂಟರ್ ನೋಡಿಕೊಂಡಿದ್ದ ಕಾಂತರಾಜು ಕೂಡ ನನಗೆ ಬಾಲಕಿ ಬಗ್ಗೆ ಏನೂ ಗೊತ್ತಿಲ್ಲ ಎಂದು ಹೇಳಿ, ಆತನೂ ಬಾಲಕಿಯ ಪಾಲಕರೊಂದಿಗೆ ಹುಡುಕಾಟ ನಡೆಸಿದ್ದನು. ಕೊನೆಗೆ ಮೈಸೂರು ರಸ್ತೆಯ ಮಯೂರ ಬೇಕರಿ ಹಿಂಭಾಗ ನಾಗರಾಜು ಎಂಬುವವರ ನಿರ್ಮಾಣ ಹಂತದ ಮನೆಯ ಕಟ್ಟಡದ ಸಮೀಪದಲ್ಲಿದ್ದ ಯಾರೋ ಒಬ್ಬರು ಬಾಲಕಿ ನೀರಿನ ಸಂಪ್‌ನಲ್ಲಿ ಬಿದ್ದಿರುವ ಬಗ್ಗೆ ನೀಡಿದ ಮಾಹಿತಿ ಮೇರೆಗೆ ಪೊಲೀಸರು ನೀರಿನ ಸಂಪ್‌ನಲ್ಲಿ ಪರಿಶೀಲನೆ ನಡೆಸಿದಾಗ ಬಾಲಕಿಯ ಶವ ಪತ್ತೆಯಾಗಿತ್ತು. ಆಗಲೇ ಬಾಲಕಿ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವ ಬಗ್ಗೆ ಸಾಕಷ್ಟು ಅನುಮಾನ ವ್ಯಕ್ತವಾಗಿದ್ದವು.

ಈ ಪ್ರಕರಣದ ತನಿಖೆ ಕೈಗೊಂಡಿದ್ದ ಮಳವಳ್ಳಿ ಪಟ್ಟಣ ಠಾಣೆಯ ಪೊಲಿಸರು ಕಾಂತರಾಜನನ್ನು ಬಂಧಿಸಿ ವಿಚಾರಣೆ ನಡೆಸಿ, ಹಲವು ಸಾಕ್ಷ್ಯಗಳನ್ನು ಕಲೆ ಹಾಕಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ಮಂಡ್ಯ ಜಿಲ್ಲಾ 1ನೇ ತ್ವರಿತಗತಿ ನ್ಯಾಯಾಲಯದ ನ್ಯಾಯಾಧೀಶರಾದ ಮಂಜುಳಾ ಇಟ್ಟಿ ಅವರು ಸಾಕ್ಷ್ಯಾಧಾರಗಳಿಂದ ಅಪರಾಧ ಸಾಬೀತಾದ ಹಿನ್ನಲೆಯಲ್ಲಿ ಜೀವಾವಧಿ ಶಿಕ್ಷೆಯನ್ನು ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಪ್ರಕರಣ ನ್ಯಾಯಾಲಯದ ಮೆಟ್ಟಿಲು ಏರುತ್ತಿದ್ದಂತೆ ಅತ್ಯಾಚಾರಕ್ಕೊಳಕ್ಕಾಗಿ ಕೊಲೆಯಾದ ಬಾಲಕಿಯ ಕುಟುಂಬದ ಪರವಾಗಿ ನ್ಯಾಯವಾದಿ ಬಿ.ಟಿ. ವಿಶ್ವನಾಥ್ ವಕಾಲತ್ತು ವಹಿಸುವುದಾಗಿ ಮಂಡ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ಸರ್ಕಾರವೇ ವಿಶೇಷ ಅಭಿಯೋಕರನ್ನಾಗಿ ವಿ.ಎಸ್. ಭಟ್ ಅವರನ್ನು ನೇಮಕ ಮಾಡಿತ್ತು. ಅಲ್ಲದೆ ನ್ಯಾಯವಾದಿ ವಿ.ಎಸ್. ಭಟ್ ಅವರು ಸಮರ್ಥವಾಗಿ ವಾದ ಮಂಡಿಸಿ ಅಪರಾಧಿಗೆ ಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಾಲಕಿಯ ಅತ್ಯಾಚಾರದ ಘಟನೆ ನಡೆದಾಗ ಇಡೀ ಕರ್ನಾಟಕವೇ ಆಕ್ರೋಶಗೊಂಡಿತ್ತು. ವ್ಯಾಪಕ ಖಂಡನೆ, ಪ್ರತಿಭಟನೆಗಳು ನಡೆದಿದ್ದವು. ಹೀಗಾಗಿ ಮಂಡ್ಯ ಎಸ್ಪಿ ಯತೀಶ್ ಸೇರಿದಂತೆ, ಮಂಡ್ಯ ಪೊಲೀಸರ ಮೇಲೆ ಒತ್ತಡಗಳು ಬಂದಿದ್ದವಲ್ಲದೆ, ಸರ್ಕಾರ ಈ ಸಂಬಂಧ ಸಮಗ್ರ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿತ್ತು. ಹೀಗಾಗಿ ಮಳವಳ್ಳಿ ಡಿವೈಎಸ್ಪಿ ನವೀನ್‌ಕುಮಾರ್ ನೇತೃತ್ವದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿತ್ತು.

## ಅತ್ಯಾಚಾರಿಯ ವಿಕೃತಿ ಅನಾವರಣ

ಈ ತಂಡ ತನಿಖೆ ನಡೆಸಿ ಹಂತಕ ಕಾಂತರಾಜ್‌ನ ಕಾಮುಖ ಮುಖವನ್ನು ಬಯಲು ಮಾಡಿದ್ದರಲ್ಲದೆ, ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೇ ವಾರದಲ್ಲಿ ಹಂತಕನ ವಿರುದ್ಧ 638 ಪುಟಗಳ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಮೇಲ್ನೋಟಕ್ಕೆ ಬಾಲಕಿ ಆಕಸ್ಮಿಕವಾಗಿ ಸಂಪುಗೆ ಬಿದ್ದು ಸಾವನ್ನಪ್ಪಿದ್ದಾಳೆ ಎಂಬಂತೆ ಇತ್ತಾದರೂ ಬಾಲಕಿಯ ಶವವನ್ನು ಸಂಪಿನಿಂದ ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸುವ ವೇಳೆ ಆಕೆ ಮೈಮೇಲಿನ ಗಾಯಗಳು ಮತ್ತು ನಡೆದಿದ್ದ ದೌರ್ಜನ್ಯಗಳು ನಿಜಕ್ಕೂ ಎಲ್ಲರಲ್ಲಿ ಆಕ್ರೋಶ ತರಿಸುವಂತಿತ್ತು. ಕಾಮುಕ ಕಾಂತರಾಜ್ ಆ ಬಾಲಕಿ ಮೇಲೆ ಕಾಮತೃಷೆ ತೀರಿಸಿಕೊಂಡಿದ್ದಲ್ಲದೆ ಭೀಕರವಾಗಿ ಕೊಲೆಗೈದಿದ್ದನು.

ಪೊಲೀಸರು ಸಲ್ಲಿಸಿದ ದೋಷಾರೋಪಣಾ ಪಟ್ಟಿಯಲ್ಲಿ ಬಾಲಕಿ ಸಾವು ಆಕಸ್ಮಿಕವಲ್ಲ, ಸಂಪೂರ್ಣ ಪೂರ್ಣ ನಿಯೋಜಿತ ಎಂದು ತಿಳಿಸಿದ್ದರು. ಬಾಲಕಿಯನ್ನು ಪುಸಲಾಯಿಸಲು ಆರೋಪಿ ಕಾಂತರಾಜು ಪ್ರತಿದಿನ ಚಾಕೋಲೇಟ್ ನೀಡುತ್ತಿದ್ದ. ಶಾಲೆಗೆ ರಜೆಯಿದ್ದರಿಂದ ಟ್ಯೂಷನ್ ಇದೆಯಾ ಎಂದು ಕೇಳಲು ಬಾಲಕಿ ಕರೆ ಮಾಡಿದ್ದಳು. ಆಗ ಕಾಂತರಾಜ್ ನಾಳೆ 11 ಗಂಟೆಗೆ ಟ್ಯೂಷನ್ ಇದೆ ಬಾ ಅಂತಾ ಹೇಳಿದ್ದನು. ಕಾಂತರಾಜು ಕರೆ ಹಿನ್ನಲೆ 11 ಗಂಟೆಗೆ ಬಾಲಕಿ ಟ್ಯೂಷನ್ನತ್ತ ತೆರಳಿದ್ದಳು. ಇದೇ ಸಮಯಕ್ಕೆ ಕಾದಿದ್ದ ಕಾಂತರಾಜ್ ಟ್ಯೂಷನ್ ಕೇಂದ್ರಕ್ಕೆ ಬೀಗ ಹಾಕಿದ ಹಿನ್ನೆಲೆಯಲ್ಲಿ ತಾನು ವಾಸವಿದ್ದ ಮೇಲಿನ ಮಹಡಿಗೆ ಬಾ ಎಂದು ಕರೆದಿದ್ದನು.



ಸಂಪ್‌ನಲ್ಲಿ ಹೆಣ ಪರಿಶೀಲಿಸುತ್ತಿರುವುದು

ಅಲ್ಲಿಗೆ ಹೋದ ಬಾಲಕಿಗೆ ಚಾಕೋಲೆಟ್ ಕೊಟ್ಟು ಟ್ಯೂಷನ್ ಪಕ್ಕದ ನಿರ್ಮಾಣ ಹಂತದ ಮನೆಗೆ ಕರೆದೊಯ್ದು, ಬಲವಂತವಾಗಿ ಸಂಭೋಗ ಮಾಡಿದ್ದಾನೆ. ಆಕೆ ಕಿರುಚದಂತೆ ಆಕೆಯ ಒಳ ಉಡುಪನ್ನು ಬಾಯಿಗೆ ತುರುಕಿದ್ದ. ಅತ್ಯಾಚಾರ ಎಸಗಿದ ಬಳಿಕ ಕಲ್ಲಿನಿಂದ ಹಲ್ಲೆ ನಡೆಸಿ, ವೈರ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿ, ಬಾಲಕಿಯ ಶವವನ್ನು ನೀರಿನ ಸಂಪ್‌ಗೆ ಎಸೆದಿದ್ದ. ನಂತರ ಬಾಲಕಿಯ ಬಟ್ಟೆಗಳನ್ನು ಮನೆಯ ಹೊರಗೆ ಬಿಸಾಕಿ, ಏನು ಗೊತ್ತಿಲ್ಲದಂತೆ ನಾಟಕ ವಾಡಿದ್ದನು.

ಇಷ್ಟೆಲ್ಲ ದುಷ್ಕೃತ್ಯ ಎಸಗಿದ ಕೀಚಕ ಕಾಂತರಾಜು, ತನ್ನ ಮೇಲೆ ಅನುಮಾನ ಬಾರದಂತೆ ಪೋಷಕರೊಂದಿಗೆ ಬಾಲಕಿಗಾಗಿ ಹುಡುಕಾಟ ನಡೆಸಿದ್ದನಲ್ಲದೆ, ಬೇರೆಯವರ ಮೇಲೆ ಅನುಮಾನ ಮೂಡುವಂತೆ ಷಡ್ಯಂತ್ರ ಮಾಡಿದ್ದ. ಫೋನ್ ಕರೆ ಪರಿಶೀಲನೆ ಬಳಿಕ ಕೀಚಕನ ಕಾಂತರಾಜುವಿನ ಕೃತ್ಯ ಬಯಲಾಗಿತ್ತು. ಇನ್ನು ಈ ಕಾಮುಕನ ವೃತ್ತಾಂತವನ್ನು ಕೆದಕಿದ ಪೊಲೀಸರಿಗೆ ಈತ ಓದಿರೋದು ಪಿಯುಸಿ ಅಲ್ಲ, ಮಾಸ್ಟರ್ ಡಿಗ್ರಿ. ಮಾನವಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾನೆ. ಮಾನವನ ಬಗ್ಗೆ ಸಂಪೂರ್ಣ ಅಧ್ಯಯನ ಮಾಡಬೇಕಿದ್ದವ ಮಾಡಿದ್ದು ಮಾತ್ರ ಮಾನವರೇ ತಲೆತಗ್ಗಿಸುವಂತ ಹೇಯ ಕೃತ್ಯವಾಗಿತ್ತು.



ಹಂತಕ ಕಾಂತರಾಜು

## ಹಂತಕ ಕಾಂತರಾಜು ಹಿನ್ನಲೆ ಏನು?

ಈತ ಎಂಎ ಬಳಿಕ ಪಿಎಚ್‌ಡಿಗೂ ಸೇರಿದ್ದನಲ್ಲದೆ, ಅರ್ಧಕ್ಕೆ ಓದು ಬಿಟ್ಟು ಕೆಲಸಕ್ಕೆ ಸೇರಿದ್ದನು. 6 ವರ್ಷಗಳ ಹಿಂದೆ ಹೆಂಡತಿಯೊಂದಿಗೆ ದೂರವಾಗಿದ್ದ. ದೂರವಾಗಿದ್ದರೂ ತನ್ನ ಇಬ್ಬರು ಹೆಣ್ಣುಮಕ್ಕಳ ಜೊತೆ ಸಂಪರ್ಕದಲ್ಲಿದ್ದ. ನಂತರ ಪ್ರತಿಷ್ಠಿತ ಇನ್ಫೋಸಿಸ್ ಸಂಸ್ಥೆಯಲ್ಲಿ ಅಡ್ಮಿನ್ ವಿಭಾಗದಲ್ಲಿ ಕೆಲಸ ಪ್ರಾರಂಭಿಸಿದ್ದ. ಕೊರೋನಾ ಹಿನ್ನೆಲೆಯಲ್ಲಿ ಕೆಲಸ ಕಳೆದುಕೊಂಡಿದ್ದವನಿಗೆ ಇನ್ಫೋಸಿಸ್ ಮುಖ್ಯಸ್ಥೆ ಸುಧಾಮೂರ್ತಿ ಅವರು ಮನೆಯಲ್ಲಿಯೇ ಗಾರ್ಡನ್ ಆಗಿ ಕೆಲಸ ನೀಡಿದ್ದರು. ಆದರೆ, ಕೆಲಸ ನೀಡಿದ್ದ ಮಮಕಾರವನ್ನು ಮರೆತು ಕೇವಲ 2 ತಿಂಗಳಿಗೆ ಕೆಲಸ ಬಿಟ್ಟಿದ್ದನು. ಆ ನಂತರ ಮಳವಳ್ಳಿಗೆ ಬಂದು ಜ್ಞಾನ ಕುಟೀರ ಟ್ಯೂಷನ್ ಸೆಂಟರ್‌ನಲ್ಲಿ ಮೇಲ್ವಿಚಾರಕನಾಗಿ ನೇಮಕವಾಗಿದ್ದನು.



ಮಕ್ಕಳಿಗೆ ಪಾಠ ಮಾಡಿ ಮಾದರಿಯಾಗಬೇಕಾದವನು ಬಾಲಕಿ ಮೇಲೆ ಕಾಮುಕ ದೃಷ್ಟಿ ಹರಿಸಿ ಅತ್ಯಾಚಾರ ಎಸಗಿದ್ದಲ್ಲದೆ, ಕಾಮತೃಷೆ ಮುಗಿದ ಮೇಲೆ ಕೊಲೆಗೈದಿದ್ದಾನೆ. ಸದ್ಯ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಇದರಿಂದ ಬಾಲಕಿಯನ್ನು ಹೆತ್ತವರಿಗೆ ತುಸು ನೆಮ್ಮದಿ ನೀಡಿದಂತಾಗಿದೆ. ☯

### ಘಟಪ್ರಭಾ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆ...

# ಇಬ್ಬರು ಐನಾತಿ ಮನೆಗಳ್ಳರ ಬಂಧನ : 3 ಲಕ್ಷ ರೂ.ಗಳ ಸ್ವತ್ತು ವಶಕ್ಕೆ!

**ಬೆಳಗಾವಿ**

✍ ಮನ್ನಾಪೂರ

ಮೈಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಐನಾತಿಗಳು ತಮ್ಮ ದಿನನಿತ್ಯದ ಮೋಜು-ಮಜಾ ಮಾಡಲು ಹಣಕ್ಕಾಗಿ ಬೀಗ ಹಾಕಿದ್ದ ಮನೆಗಳನ್ನು ಗುರುತಿಸಿ ಅಂತಹ ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿ ಆಗುತ್ತಿದ್ದರು. ಪೊಲೀಸರಿಗೆ ತಲೆನೋವಾಗಿದ್ದ ಕಳ್ಳರಿಬ್ಬರ ಬಗ್ಗೆ ಖಚಿತ ಮಾಹಿತಿ ಆಧರಿಸಿ ಅವರನ್ನು ವಶಕ್ಕೆ ತೆಗೆದುಕೊಂಡು ಸುಮಾರು 3 ಲಕ್ಷ ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿಯ ಆಭರಣ ಸೇರಿದಂತೆ ಒಂದು ಮೋಟಾರ್ ಸೈಕಲ್ ಜಪ್ತಿ ಮಾಡಿಕೊಂಡು ಅವರನ್ನು ಜೈಲಿಗಟ್ಟುವಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್ಐಗಳಾದ ಹೆಚ್.ಕೆ. ನರಲೆ, ಎಂ.ವ್ಹಿ. ಮುರನಾಳ ಮತ್ತು ಸಿಬ್ಬಂದಿಗಳು ಯಶಸ್ವಿಯಾಗಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಘಟಪ್ರಭಾ ಪೊಲೀಸ್ ಠಾಣೆಯಿಂದ ವರದಿಯಾಗಿದೆ.



ಡಿವೈಎಸ್ಪಿ ಡಿ.ಹೆಚ್. ಮುಲ್ಲಾ



ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ

ಇತ್ತೀಚಿಗೆ ಘಟಪ್ರಭಾ ಮತ್ತು ಸುತ್ತಲಿನ ಪರಿಸರದಲ್ಲಿ ಮನೆಗಳ್ಳತನ ಮತ್ತು ಮೋಟಾರ್ ಬೈಕ್ ಕಳ್ಳತನಗಳು ಮೇಲಿಂದ ಮೇಲೆ ನಡೆಯುತ್ತಿದ್ದವು. ಇದಕ್ಕಾಗಿ ಘಟಪ್ರಭಾ ಪೊಲೀಸರು ಎಷ್ಟೇ ಮುನ್ನೆಚ್ಚರಿಕೆ ಕೈಗೊಂಡರು ಕೂಡಾ ಐನಾತಿ ಕಳ್ಳರು ಅದ್ವೇಗೋ ಮನೆಗಳ್ಳತನ ಮಾಡಿಕೊಂಡು ಹೋಗುತ್ತಿದ್ದರು. ಕಳೆದ ತಿಂಗಳು ಘಟಪ್ರಭಾದ ಪೊಲೀಸ್ ಠಾಣೆಗೆ ನೂತನವಾಗಿ ಧಾಡಸಿ ಮತ್ತು ಚತುರತನಕ್ಕೆ ಹೆಸರಾದ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಹಾಜರಾದರು. ಜನಾನುರಾಗಿಗಳು, ಕಾಯ್ದೆ-ಸುವ್ಯವಸ್ಥೆ ಕಾಪಾಡಿಕೊಂಡು ಬರುವಲ್ಲಿ ತುಂಬಾ ಕಟ್ಟು-ನಿಟ್ಟಿನ ಅಧಿಕಾರಿ ಎಂದು ಹೆಸರಾದವರು.



ಇಬ್ಬರು ಮನೆಗಳ್ಳರನ್ನು ಬಂಧಿಸಿ ಅವರಿಂದ ಚಿನ್ನ, ಬೆಳ್ಳಿಯ ಆಭರಣ, ಮೋಟಾರ್ ಸೈಕಲ್ ವಶಪಡಿಸಿಕೊಂಡಿರುವ ಘಟಪ್ರಭಾ ಪೊಲೀಸರು

**ಮನೆಗಳ್ಳರ ಪತ್ತೆಗೆ ವ್ಯಾಪಕ ಜಾಲ...**

ಅಧಿಕಾರ ವಹಿಸಿಕೊಂಡ ನಂತರ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾರವರು ಪಿಎಸ್ಐಗಳಾದ ಹೆಚ್.ಕೆ. ನರಲೆ ಮತ್ತು ಎಂ.ವ್ಹಿ. ಮುರನಾಳ ಮತ್ತು ಸಿಬ್ಬಂದಿಗಳ ಮೀಟಿಂಗ್ ಕರೆದಿದ್ದರು. ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅನೈತಿಕ ಚಟುವಟಿಕೆಗಳು, ಗಾಂಜಾ, ಸಾರಾಯಿ ಅಕ್ರಮ ಮಾರಾಟ, ಮೀಟರ್ ಬಡ್ಡಿ ದಂಧೆ, ಗುಂಡಾಗಿರಿ, ಜೂಜಾಟ, ಮನೆಗಳ್ಳತನ ಮಾಡುವವರನ್ನು ಯಾವುದೇ ಮುಲಾಜಿಲ್ಲದೇ ಸದೆಬಡಿಯಬೇಕು ಎಂದು ಕರೆ ನೀಡಿದರು. ಹೆಚ್ಚಾಗುತ್ತಿರುವ ಮನೆಗಳ್ಳತನ ಪ್ರಕರಣದಿಂದ ಪೊಲೀಸ್ ಇಲಾಖೆಗೆ ನಾಗರೀಕರಿಂದ ತಪ್ಪು ಅಭಿಪ್ರಾಯ ಮೂಡುತ್ತದೆ. ಅದಕ್ಕಾಗಿ ತಕ್ಷಣ ನೀವೆಲ್ಲ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು.

**ವಿಶೇಷ ತನಿಖಾ ತಂಡ ರಚನೆ...**

ತಮ್ಮ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಆವೇದ್ಯ ದಂಧೆಗಳಿಗೆ ಕಡಿವಾಣ ಹಾಕಲು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್, ಆರ್.ಬಿ. ಬಸರಗಿ, ಗೋಕಾಕದ ಡೈನಾಮಿಕ್ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರಿಂದ ನಿರ್ದೇಶನ ಪಡೆದುಕೊಂಡು ಒಂದು ವಿಶೇಷ ತನಿಖಾ ತಂಡ ರಚಿಸಲು ನಿರ್ಧರಿಸಿದರು. ತಮ್ಮ ನೇತೃತ್ವದಲ್ಲಿ ಪಿಎಸ್ಐಗಳಾದ ಹೆಚ್.ಕೆ. ನರಲೆ, ಎಂ.ವಿ. ಮುರನಾಳ ಚತುರ ಮತ್ತು ಧಾಡಸಿ ಸಿಬ್ಬಂದಿಗಳಾದ ಎಂ.ಎಂ. ದೇವಡಿ, ಆರ್.ಕೆ. ಹೊಳ್ಕರ, ರಾಜು ಧುಮಾಳೆ, ಬಿ.ಎಸ್. ನಾಯಿಕ, ರಾಮಕೃಷ್ಣ ಗಿಡ್ಡಪ್ಪಗೋಳ, ಬಿ.ಎಂ. ತಳವಾರ ಇವರನ್ನೊಳಗೊಂಡ ಒಂದು ವಿಶೇಷ ತನಿಖಾ ತಂಡ ರಚಿಸಿ ಅದರ ನೇತೃತ್ವದ ಹೊಣೆಯನ್ನು ತಾವೇ ಹೊತ್ತುಕೊಂಡು ತನಿಖಾ ತಂಡಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಿದರು.

**ಇಬ್ಬರು ಐನಾತಿ ಮನೆಗಳ್ಳರ ಬಂಧನ...**

ಅಂದುಕೊಂಡಂತೆ ವಿಶೇಷ ತನಿಖಾ ತಂಡ ಕಾರ್ಯಾಚರಣೆ ಆರಂಭಿಸಿತು. ಖಚಿತ ಮಾಹಿತಿ ಆಧರಿಸಿ ಗೋಕಾಕ ನಗರದ ನಿವಾಸಿಗಳಾಗಿದ್ದ ಹಣಮಂತ ಭಜಂತ್ರಿ, ಹಾಲಪ್ಪ ವಾಲೀಕಾರ ಎಂಬಿಬ್ಬರನ್ನು ತಮ್ಮ ವಶಕ್ಕೆ ತೆಗೆದುಕೊಂಡು ವಿಶೇಷ ತನಿಖಾ ತಂಡ ಅವರನ್ನು ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರ ಮುಂದೆ ಹಾಜರುಪಡಿಸಿದರು. ವಿಚಾರಣೆ ಸಂದರ್ಭದಲ್ಲಿ ಐನಾತಿ ಕಳ್ಳರು ನಿಜವನ್ನು ಕಕ್ಕಿದರು. ಘಟಪ್ರಭಾದಲ್ಲಿ ತಾವು ಮಾಡಿದ ಮನೆಗಳ್ಳತನವನ್ನು ಒಪ್ಪಿಕೊಂಡರು. ಮತ್ತು ತಾವು ಉಪಯೋಗಿಸುವ ಮೋಟಾರ್ ಸೈಕಲ್ ಕೂಡಾ ಕಳ್ಳತನ ಮಾಡಿದ್ದು ಎಂದು ಹೇಳಿಕೊಂಡರು. ಅಧಿಕಾರ ವಹಿಸಿಕೊಂಡ ಹೆಚ್.ಡಿ. ಇನ್ಸ್‌ಪೆಕ್ಟರ್ ಮುಲ್ಲಾ ಅವರ ಕಾರ್ಯವೈಖರಿ ನಾಗರೀಕರಿಗೆ ಗೊತ್ತಾಗಿ ನೆಮ್ಮದಿಯ ನಿಟ್ಟುಸಿರುಬಿಟ್ಟಿದ್ದಾರೆ.



ಪಿಎಸ್ಐ (ಕಾ.ಸು) ಹೆಚ್.ಕೆ. ನರಲೆ

**ಕಳ್ಳರಿಬ್ಬರಿಂದ 3 ಲಕ್ಷ ರೂ. ಸ್ವತ್ತು ಜಪ್ತಿ...**

ಬಂಧಿತ ಐನಾತಿ ಕಳ್ಳರಾದ ಹಣಮಂತ ಭಜಂತ್ರಿ ಮತ್ತು ಹಾಲಪ್ಪ ವಾಲೀಕಾರ ಕಳುವು ಮಾಡಿದ್ದ ಬೆಳ್ಳಿ ಮತ್ತು ಬಂಗಾರದ ಆಭರಣಗಳ ಮೌಲ್ಯ ಸುಮಾರು 3 ಲಕ್ಷ ರೂ.ಗಳಾಗಿದ್ದು. ಅವರಿಂದ ಚಿನ್ನ ಮತ್ತು ಬೆಳ್ಳಿಯ ಆಭರಣ, ಮೋಟಾರ್ ಸೈಕಲ್ ಕೂಡಾ ಜಪ್ತಿ ಮಾಡಿಕೊಳ್ಳಲಾಗಿದೆ. ಬಂಧಿತರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ನ್ಯಾಯಾಲಯ ಇವರನ್ನು ಜೈಲಿಗೆ ಅಟ್ಟಿದೆ.

**ಶ್ಲಾಘನೆ...**

ಘಟಪ್ರಭಾ ಪರಿಸರದಲ್ಲಿ ತೀವ್ರ ತಲೆನೋವಾಗಿದ್ದ ಐನಾತಿ ಕಳ್ಳರಿಬ್ಬರನ್ನು ಬಂಧಿಸಿ ಅವರಿಂದ 3 ಲಕ್ಷ ರೂ. ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್ಐಗಳಾದ ಹೆಚ್.ಕೆ. ನರಲೆ, ಎಂ.ವ್ಹಿ. ಮುರನಾಳ ಮತ್ತು ಸಿಬ್ಬಂದಿಗಳನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ಆರ್.ಬಿ. ಬಸರಗಿ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಸೇರಿದಂತೆ ಪ್ರಜ್ಞಾವಂತ ನಾಗರೀಕರು ಶ್ಲಾಘಿಸಿದ್ದಾರೆ. ☯

# ಭಾವಿ ಪತ್ನಿಯನ್ನು ಅವನೇ ಕೊಂದು ಬಿಟ್ಟನಾ?

3 ☜

ಈ ವೇಳೆ ನಿರಂಜನ ಅವಳನ್ನು ಸಾಯಿಸಿದ್ದು ಬಳಿಕ ನೇಣಿಗೆ ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬುದನ್ನು ಬಿಂಬಿಸುವ ಪ್ರಯತ್ನ ಮಾಡಿದ್ದಾನೆ ಎಂದು ಹೇಳುತ್ತಿದ್ದಾರೆ. ಆದರೆ ಆರೋಪಿ ಎಂದು ಹೇಳಲಾಗುತ್ತಿರುವ ನಿರಂಜನ್ ಅಂದು (ಅ.4) ಸಂಜೆ ಕವಿತಾ ಮನೆಯ ಹಂಚು ತೆಗೆದು ಹೊರಬಂದು ತನ್ನ ಕಾರಿನಲ್ಲಿ ಅಲ್ಲಿಂದ ಪರಾರಿಯಾಗಿದ್ದನು. ಆದರೆ ಮನೆಯ ಹಂಚು ತೆಗೆದು ಹೊರಬಂದು ಅಲ್ಲಿಂದ ಕಾರನ್ನೇರಿ ನಿರಂಜನ ಹೋಗುವುದನ್ನು ನೋಡಿದ ಅಕ್ಕಪಕ್ಕದ ಜನ ನೋಡಿದ್ದು ಅದನ್ನು ಜಮೀನಿನಲ್ಲಿದ್ದ ಕವಿತಾಳ ಹೆತ್ತವರಿಗೆ ತಿಳಿಸಿದ್ದಾರೆ.

ಭಾವಿ ಅಳಿಯ ಮನೆಯ ಹಂಚುತೆಗೆದು ಹಾರಿ ಅಲ್ಲಿಂದ ಓಡಿ ಹೋಗಿದ್ದಾನೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಅವರಿಗೆ ಆತಂಕ ಶುರುವಾಗಿದೆ. ಹೀಗಾಗಿ ಓಡೋಡಿ ಮನೆಯ ಕಡೆ ಬಂದಿದ್ದಾರೆ. ಅಲ್ಲದೆ ಬಾಗಿಲು ಬಡಿದು ಬಾಗಿಲು ತೆಗೆಯುವಂತೆ ಮಗಳನ್ನು ಕೂಗಿ ಕರೆದರೂ ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬಾರದೆ ಇದ್ದಾಗ ಇನ್ನಷ್ಟು ಭಯ, ಆತಂಕ ಶುರುವಾಗಿದೆ. ಹೇಗೋ ಕಷ್ಟಪಟ್ಟು ಒಳಕ್ಕೆ ಹೋಗಿ ನೋಡಿದಾಗ ಮಗಳ ಶವ ನೇಣುಬಿಗಿದ ಸ್ಥಿತಿಯಲ್ಲಿರುವುದು ಪತ್ತೆಯಾಗಿದೆ. ಆಕ್ರೋಶಗೊಂಡ ಹೆತ್ತವರು ಮತ್ತು ಸಂಬಂಧಿಕರು ಕೊಲೆಗೆ ಕಾರಣನಾದ ನಿರಂಜನನ್ನು ಹುಡುಕಲು ಆರಂಭಿಸಿದ್ದರು.




ನಿಶ್ಚಿತಾರ್ಥ ಸಂದರ್ಭದಲ್ಲಿ ಕವಿತಾ ಹಾಗೂ ನಿರಂಜನ್

ಇತ್ತ ಯಾವಾಗ ಜನ ತನ್ನ ಹುಡುಕಲು ಆರಂಭಿಸಿದ್ದಾರೆ ಎಂಬುದು ಗೊತ್ತಾಯಿತೋ ನನ್ನನ್ನು ಸುಮ್ಮನೆ ಬಿಡಲ್ಲ ಎಂಬ ಭಯದಲ್ಲಿ ನಿರಂಜನ್ ನೇರವಾಗಿ ಅಂತರಸಂತೆ ಪೊಲೀಸ್ ಠಾಣೆಗೆ ತೆರಳಿ ಶರಣಾಗಿ ನಾನು ಕವಿತಾಳನ್ನು ಕೊಲೆ ಮಾಡಿಲ್ಲ, ಆದರೆ ನಾನೇ ಕೊಲೆ ಮಾಡಿದ್ದೇಂದು ತಪ್ಪು ತಿಳಿದು ಜನ ನನ್ನ ಸಾಯಿಸಿ ಬಿಡುತ್ತಾರೆ ಎಂದು ಶರಣಾಗುತ್ತಿರುವುದಾಗಿ ಹೇಳಿದ್ದಾನೆ. ಅತ್ತ ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ತೆರಳಿದ ಪೊಲೀಸರು ಶವದ ಮಹಜರು ನಡೆಸಿದ್ದು ಬಳಿಕ ಶವವನ್ನು ಮೈಸೂರಿನ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಾಸುದಾರರಿಗೆ ಶವವನ್ನು ಒಪ್ಪಿಸಿದ್ದು ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಮೃತ ಕವಿತಾಳ ಪೋಷಕರು ನೀಡಿದ ದೂರಿನ ಮೇರೆಗೆ ಹೆಚ್.ಡಿ.ಕೋಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಕವಿತಾಳ ತಂದೆ ಪುಟ್ಟಮಲ್ಲಪ್ಪ ಮಾತ್ರ ನಿರಂಜನ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಿದ್ದು ಆತನೇ ಮಗಳನ್ನು ಕೊಲೆ ಮಾಡಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಂತೆ ಬಿಂಬಿಸುವ ಕೆಲಸವನ್ನು ನಿರಂಜನ್ ಮಾಡಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಪೊಲೀಸರು ಕವಿತಾಳ ತಂದೆ ಪುಟ್ಟಮಲ್ಲಪ್ಪ ನೀಡಿದ ದೂರನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಕವಿತಾಳ ಸಾವಿನ ಸತ್ಯಾಸತ್ಯತೆ ಹೊರಗೆ ಬರಬೇಕಲ್ಲದೆ, ಆಕೆಯ ಸಾವಿಗೆ ನ್ಯಾಯವೂ ದೊರೆಯಬೇಕಿದೆ. ಹೆತ್ತು ಸಾಕಿ ಕೈಗೆ ಬಂದಿದ್ದ ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಸೇರಿಸಿ ಆಕೆ ಸುಖವಾಗಿರಬೇಕೆಂದು ಬಯಸಿದ್ದ ಹೆತ್ತವರು ತಾವೇ ತಮ್ಮ ಕೈಯ್ಯಾರೆ ಮಗಳಿಗೆ ಕೊಳ್ಳಿಯಿಡಬೇಕಾದ ದುಸ್ಥಿತಿ ಎದುರಾಗಿರುವುದು ಮಾತ್ರ ನಿಜಕ್ಕೂ ಬೇಸರದ ಸಂಗತಿಯೇ... ಇಂತಹ ಪರಿಸ್ಥಿತಿ ಯಾವ ಹೆತ್ತವರಿಗೂ ಬಾರದಿರಲಿ... ☯

# ಅಣ್ಣನ ಲವ್ವಿಡವ್ವಿಯಲ್ಲಿ ತಮ್ಮ ಬಲಿಪಶುವಾದ!


ಕೊಲೆಯಾದ ಸುಮೀತ್

**ಕಲಬುರಗಿ ಹೊರವಲಯದಲ್ಲಿರುವ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ನಾಗನಳ್ಳಿ ಗ್ರಾಮದಲ್ಲಿ ಸಚಿನ್ ಎಂಬಾತನು ತನ್ನದೇ ಓಣಿಯಲ್ಲಿರುವ ಉಷಾ ಅಲಿಯಾಸ್ ವೈಷ್ಣವಿಯ ಜೊತೆ ಲವ್ವಿಡವ್ವಿ ನಡೆಸುತ್ತಿದ್ದ. ಮನೆಯವರ ಒಪ್ಪಿಗೆ ಇರಲಿಲ್ಲ. ಉಷಾಳ ಅಣ್ಣ ವರುಣಕುಮಾರನಿಗೆ ಈ ವಿಷಯ ತಿಳಿದು ಸಚಿನ್‌ನ ಕತೆ ಮುಗಿಸಬೇಕೆಂದು ಬಂದವರೇ ಸಚಿನ್ ಕಾಣದೇ ಇದ್ದಾಗ ಆತನ ತಮ್ಮನಾದ ಸುಮಿತ್ ಅಲ್ಲಿಯೇ ಇದ್ದ. ನಿನ್ನ ಅಣ್ಣ ಎಲ್ಲಿದ್ದಾನೆ ತಂದುಕೊಡು ಎಂದು ಕೇಳಿ ಮನೆಯಲ್ಲಿದ್ದವರನ್ನು ಜಗಳವಾಡುತ್ತಿರುವಾಗ ಬಿಡಿಸಲು ಮುಂದಾದ ಸುಮೀತ್‌ನ ಹೊಟ್ಟೆಗೆ ಚಾಕು ಇರಿದು, ಬಂದವರೆಲ್ಲ ಮನೆಮುಂದಿಗೆಲ್ಲ ಹೊಡಿಬಡಿ ಮಾಡಿ ಹೋಗಿದ್ದಾರೆ. ಚಾಕುವಿನ ಪ್ರಹಾರ ಜೋರಾಗಿ ರಕ್ತಸ್ರಾವವಾಗಿ ಸುಮೀತ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ ಘಟನೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.**


ಪಪ್ರಮುಖ ಆರೋಪಿ ವರುಣಕುಮಾರ

**ಕಲಬುರಗಿ**
✍ಬಿ.ವಿ. ಕುಲಕರ್ಣಿ

ಕಲಬುರಗಿ ನಗರದ ಹೊರವಲಯದಲ್ಲಿರುವ ನಾಗನಳ್ಳಿ ಗ್ರಾಮದಲ್ಲಿ ದೊಡ್ಡ ಪ್ರಮಾಣದ ಪೊಲೀಸ್ ತರಬೇತಿ ಶಿಬಿರ ಕೂಡಾ ಇದೆ. ಅದೇ ಗ್ರಾಮದ ಪರಿಶಿಷ್ಟ ಜಾತಿಗೆ (ಹೊಲೆಯ) ಸೇರಿದ ಶೋಭಾ ಗಂಡ ನಾಗೇಂದ್ರ ಮಲ್ಲಾಬಾದಿ (47) ಕುಟುಂಬ ಸಮೇತ ವಾಸಿಸುತ್ತಿದ್ದು, ಇವರಿಗೆ ಮೂರು ಜನ ಗಂಡು ಮಕ್ಕಳು, ಸುಶೀಲ್, ಸಚಿನ್, ಸುಮೀತ್. ಹೊಟ್ಟೆಪಾಡಿಗಾಗಿ ಶೋಭಾ ಮಕ್ಕಳೊಂದಿಗೆ ಐರೋಲಿ ಠಾಣೆ ನವಿ ಮುಂಬೈಯಲ್ಲಿ ಇರುತ್ತಾಳೆ. ಸಚಿನ್ ಎಂಬಾತನು ಅದೇ ನಾಗನಳ್ಳಿ ಗ್ರಾಮದ ತನ್ನ ಸೋದರ ಅತ್ತೆ ಸಿದ್ದಮ್ಮರವರ ಮನೆಯಲ್ಲಿಯೇ ಇರುತ್ತಿದ್ದ.


ಶೋಭಾಳ ತವರೂರು ಕಲಬುರಗಿ ಜಿಲ್ಲೆಯ ತಾಲೂಕಾ ಸ್ಥಳವಾದ ಕಮಲಾಪುರ ಇದ್ದು, ಆಕೆಯ ತಂದೆ ಮರಣ ಹೊಂದಿರುವ ಸುದ್ದಿ ಕೇಳಿ ಇನ್ನೋರ್ವ ಮಗನಾದ ಸುಮೀತ್ (19) ಈತನಿಗೆ ಜೊತೆಯಲ್ಲಿ ಕರೆದುಕೊಂಡು ಬಂದಿದ್ದಾಳೆ. ದಿನಾಂಕ 19-09-2024ರಂದು ತಂದೆಯ ಅಂತ್ಯಕ್ರಿಯೆ ಮುಗಿಸಿಕೊಂಡು ತನ್ನ ಮನೆ ಇರುವ ನಾಗನಳ್ಳಿ ಗ್ರಾಮಕ್ಕೆ ಬಂದಿದ್ದಾಳೆ. ಅಷ್ಟರಲ್ಲಿ ಈಕೆಯ ನಾದಿನಿ ಸಿದ್ದಮ್ಮ ತಿಳಿಸಿದ್ದೇನೆಂದರೆ ಸಚಿನ್ ಈತನು ನಮ್ಮ ಓಣಿಯ ವರುಣಕುಮಾರ ಯುವಣಿ ಈತನ ತಂಗಿಯಾದ ಉಷಾ ಅಲಿಯಾಸ್ ವೈಷ್ಣವಿಯನ್ನು ಪ್ರೀತಿಸುತ್ತಿದ್ದಾನೆ ಅಂತ ಜಗಳ ಮಾಡಲು ಬಂದಿದ್ದರು.


ಪಿಐ ಸುಸೀಲ್‌ಕುಮಾರ್


ಪಿಎಸ್‌ಐ ಅನಿಲ್ ಜೈನ್

ದಿನಾಂಕ 20-9-2024ರಂದು ಸಾಯಂಕಾಲ 7 ಗಂಟೆ ಸುಮಾರಿಗೆ ವರುಣಕುಮಾರ ತಂದೆ ರಾಜಕುಮಾರ ಯುವಣಿ, ರಾಜಕುಮಾರ ತಂದೆ ಚಂದಪ್ಪ ಯುವಣಿ, ಜಯಮ್ಮ ಗಂಡ ರಾಜಕುಮಾರ ಇವರು ಸಿದ್ದಮ್ಮಳ ಮನೆಗೆ ಬಂದು ಸುಮೀತ್‌ನಿಗೆ ಕೇಳುತ್ತಾರೆ, ನಿನ್ನ ಅಣ್ಣ ಸಚಿನ್ ಈತನಿಗೆ ನಮ್ಮ ಕೈಯಲ್ಲಿ ತಂದುಕೊಡು ಭೋಸಡಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ನಿಂದಿಸುತ್ತ ಕೈಯಿಂದ ಹೊಡೆದು ಹೋಗಿರುತ್ತಾರೆ. ನಂತರ ರಾತ್ರಿ 8.30 ಗಂಟೆ ಸುಮಾರಿಗೆ ಶೋಭಾಳು ಮನೆಯ ಮುಂದೆ ಕುಳಿತಿರುವಾಗ ಅದೇ ಸಮಯಕ್ಕೆ ವರುಣಕುಮಾರ ತಂದೆ ರಾಜಕುಮಾರ ಯುವಣಿ ಈತನು ತನ್ನದೇ ಆದ ಆಟೋರಿಕ್ಷಾ ಸಂಖ್ಯೆ ಕೆಎ-32 ಎಎ-7208 ಅದರಲ್ಲಿ ಸಿದ್ದು ಜಿಡಿಎ ಕಾಲೋನಿ, ಕಲಬುರಗಿ, ಪ್ರಜ್ವಲ್, ಅನಿಲ್, ಜಡಿಡಿಎ ಕಾಲೋನಿ ಸಂಗಡ ಇನ್ನಿಬ್ಬರನ್ನು ಕರೆದುಕೊಂಡು ಬಂದಿದ್ದಾನೆ. ಆಗ ಅವರನ್ನು ನೋಡಿದ ಶೋಭಾ ಕೇಳುತ್ತಾಳೆ, ಯಾಕಪ್ಪಾ ನನ್ನ ಮಕ್ಕಳೊಂದಿಗೆ ಯಾಕೆ ಜಗಳ ಮಾಡುತ್ತೀ ಎಂದಾಗ ವರುಣಕುಮಾರನು 'ಏ ರಂಡಿ, ಭೋಸಡಿ, ನಿನ್ನ ಮಗ ಸಚಿನ್ ಎಲ್ಲಿ ಇದ್ದಾನೆ? ಅವನಿಗೆ ತಂದುಕೊಡಬೇಕು ಇಲ್ಲವಾದರೆ ನಿಮ್ಮೊಬ್ಬಬ್ಬರಿಗೆ ಗತಿ ಕಾಣಿಸುತ್ತೇನೆ ಅಂತ ಜಗಳ ಮಾಡುತ್ತಿರುವಾಗ ಸಂಗಡ ಬಂದವರು ನನ್ನ ಮೇಲೆ ಕೈ ಮಾಡಿ ಹೊಡಿಬಡಿ ಮಾಡಿ ನೂಕಿಸಿಕೊಟ್ಟರು. ನಾನು ಕೆಳಗೆ ಬಿದ್ದೆ. ನನ್ನ ಮಗ ಸುಮೀತ್ ಬಂದು ನನ್ನ ತಾಯಿಗೆ ಏಕೆ ಹೊಡೆಯುತ್ತಿದ್ದೀರಿ ಎಂದು ಬಿಡಿಸಲು ಬಂದಾಗ ವರುಣಕುಮಾರನು ತನ್ನ ಹತ್ತಿರವಿದ್ದ ಚಾಕು ತೆಗೆದು ಮಗನೇ ಇವತ್ತು ನಿನಗೆ ಮುಗಿಸಿಯೇ ಬಿಡುತ್ತೇನೆ ಎಂದು ಎಡಗಡೆ ಹೊಟ್ಟೆಗೆ ಇರಿದೇಬಿಟ್ಟನು. ಆಗ ಅಲ್ಲೇ ಇದ್ದ ನಮ್ಮ ನಾದಿನಿ ಸಿದಮ್ಮ, ಆಕೆಯ ಗಂಡ ವಿಜಯಕುಮಾರ, ಭೀಮಾಶಂಕರ ಹಾಗೂ ಯಶೋದಾ ಮುಲ್ಲಾಬಾದಿ ಇವರು ಬಿಡಿಸಲು ಬಂದಾಗ ಅವರಿಗೂ ಕೂಡಾ ಹೊಡೆಯತೊಡಗಿದರು. ಯಶೋಧಾಳ ಕೈಗೆ ಕೂಡಾ ಚಾಕುವಿನಿಂದ ಊರ ಮಾಡಿದರು.


ಕಮೀಷನರ್ ಡಾ. ಎಸ್.ಡಿ. ಶರಣಪ್ಪ


ಎಸಿಪಿ ಡಿ.ಜಿ. ರಾಜಣ್ಣ

ಎಲ್ಲರೂ ಕಾಲ್ಕಿತ್ತಿದರು. ನನ್ನ ಮಗನಾದ ಸುಮೀತನಿಗೆ ಮಾರಣಾಂತಿಕ ಹಲ್ಲೆಯಾದ ಕಾರಣ ಖಾಸಗಿ ವಾಹನದಲ್ಲಿ ಹಾಕಿಕೊಂಡು ಕಲಬುರಗಿ ನಗರದ ಜಿಮ್ಸ್ ಆಸ್ಪತ್ರೆಯಲ್ಲಿ ತ್ರಾಮಕೇರ ಐಸಿಯುದಲ್ಲಿ ಉಪಚಾರಕ್ಕಾಗಿ ಸೇರಿಸಲಾಯಿತು. ರಾತ್ರಿ 10.50ರಿಂದ 11.50ವರೆಗೆ ಪೊಲೀಸರು ಹೇಳಿಕೆ ಪಡೆದು ರಾತ್ರಿ 12.20ಕ್ಕೆ ಠಾಣೆಗೆ ಬಂದು ಫಿರ್ಯಾದಿಯ ಹೇಳಿಕೆ ಸಾರಾಂಶದ ಮೇಲಿಂದ ಠಾಣೆಯ ಗುನ್ನೆ ನಂ. 229/2024 ಕಲಂ 189(2), 191(2) (3), 115(2), 118(1), 109, 352 ಸಂಗಡ 190 ಬಿಎನ್‌ಎಸ್ ಆಕ್ಟ್ 2023ರ ಪ್ರಕಾರ ಪ್ರಕರಣವನ್ನು ವ್ಹಿ.ವ್ಹಿ. ಠಾಣೆಯ ಪಿಐ ಸುಶೀಲ್ ಕುಮಾರ್‌ರವರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿ ಬೆಳಿಗ್ಗೆ 8.30ರ ಸುಮಾರಿಗೆ ಸುಮೀತ್ ಪುನಃ ಆಸ್ಪತ್ರೆಗೆ ಭೇಟಿ ನೀಡಿ ಫಿರ್ಯಾದಿದಾರರಿಗೆ ವಿಚಾರಿಸಿ ಪುರವಣಿಗೆ ಹೇಳಿಕೆಯನ್ನು ಪಡೆದುಕೊಂಡು ಫಿರ್ಯಾದಿ ಹೇಳಿಕೆ ಪ್ರಕಾರ ಆರೋಪಿ ಎಂದು ಗೊತ್ತಾಗುತ್ತದೆ. ಪುರವಣಿ ಹೇಳಿಕೆ ಆಧಾರದ ಮೇಲೆ ಕಲಂ 189(2), ಆಕ್ಟ್ 2023 ಹಾಗೂ 3(1)(ಆರ್)(ಎಸ್) 3(2)(ವಿ) ಎಸ್‌ಸಿ/ಎಸ್‌ಟಿ ಪಿಎ ನೇದ್ದಲ್ಲಿ ಅಳವಡಿಸಿಕೊಳ್ಳಲು ಮಾನ್ಯ 3ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಪತ್ರದ ಮೂಲಕ ಕೋರಿಕೊಳ್ಳಲಾಯಿತು. ನಂತರ ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ವರ್ಗಾವಣೆ ನೀಡಲು ಕೋರಿಕೊಂಡರು.

ಈ ವಿಷಯ ಮೇಲಧಿಕಾರಿಗಳ ಗಮನಕ್ಕೆ ತಂದಾಗ ಮಾನ್ಯ ಕಲಬುರಗಿ ನಗರ ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ.ಗೆ ಮಾನ್ಯ ಉಪ ಪೊಲೀಸ್ ಆಯುಕ್ತ ಕನಿಕಾ ಸಿಕ್ರೀವಾಲ್, ಪ್ರವೀಣ ಹೆಚ್. ನಾಯಕ ಮತ್ತು ಸಬ್ ಅರ್ಬನ್ ಉಪವಿಭಾಗ ಸಹಾಯಕ ಪೊಲೀಸ್ ಆಯುಕ್ತರಾದ ಡಿ.ಜಿ. ರಾಜಣ್ಣರವರು ಭೇಟಿ ನೀಡಿ ತಕ್ಷಣವೇ ಆರೋಪಿಗಳ ಪತ್ತೆಗೆ ಆದೇಶ ನೀಡಿದರು. ಆದೇಶದ ಪ್ರಕಾರ ಪಿಐ ಸುಶೀಲ್‌ಕುಮಾರ್‌ರವರು ಪಿಎಸ್‌ಐ ಅನಿಲ್ ಜೈನ್ ಮತ್ತು ಸಿಬ್ಬಂದಿಯವರಾದ ಹೆಚ್‌ಸಿಗಳಾದ ಸಂಜಕುಮಾರ್, ಸುಲ್ತಾನ್, ಪ್ರಕಾಶ್, ಪಿಸಿಗಳಾದ ರಾಜಕುಮಾರ, ರೇಣುಕಾ ಅವರನ್ನೊಳಗೊಂಡ ತಂಡ ರಚಿಸಿ 24 ಗಂಟೆಗಳಲ್ಲಿ ಆರೋಪಿಗಳ ಹೆಡೆಮುರಿಕಟ್ಟಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಈ ಆರು ಜನ ಆರೋಪಿಗಳನ್ನು ಬಂಧಿಸಲಾಗಿ ಇನ್ನೂ ಈರ್ವರ ಶೋಧದಲ್ಲಿ ತೊಡಗಿದ್ದಾರೆ. ಆರೋಪಿಗಳಾದ ವರುಣಕುಮಾರ (ಪ್ರಮುಖ ಆರೋಪಿ), ಸಿದ್ದು ಅಲಿಯಾಸ್ ಸಿದ್ದರಾಮ, ಪ್ರಜ್ವಲ್, ಅನಿಲ್, ದೀಪಕ್, ರಾಜಕುಮಾರ, ವೈಷ್ಣವಿ, ಜಯಮ್ಮ ಇವರಲ್ಲಿ ಆರು ಜನರನ್ನು ಬಂಧಿಸಲಾಗಿದೆ. ಈ ಘಟನೆ ಬಗ್ಗೆ ತನಿಖೆ ಸಬ್ ಅರ್ಬನ್ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು ಡಿ.ಜಿ. ರಾಜಣ್ಣರವರು ವಹಿಸಿಕೊಂಡಿರುತ್ತಾರೆ. ☯


ಆರೋಪಿಗಳಾದ ಜಯಮ್ಮ, ಪ್ರಜ್ವಲವ, ರಾಜಕುಮಾರ, ಸಿದ್ದು ಅಲಿಯಾಸ್ ಸಿದ್ದರಾಮ ಹಾಗೂ ವೈಷ್ಣವಿ ಅಲಿಯಾಸ್ ಉಷಾ

# ಚನ್ನಪಟ್ಟಣದಲ್ಲಿ ರಂಗೇರಿದ ಉಪ ಚುನಾವಣೆಯ ಅಖಾಡ...!


ಡಿ.ಕೆ. ಸುರೇಶ್ ಜೊತೆ ಯೋಗೇಶ್ವರ್ ರೋಡ್ ಶೋನಲ್ಲಿ

9 ☞

ಮೇಲೆ ಮತ ವಿಭಜಿಸಬಹುದು ಎನ್ನಬಹುದಾದ ಅಭ್ಯರ್ಥಿಯನ್ನು ವಾಪಸ್ ತೆಗೆಸಲು ಕಾಂಗ್ರೆಸ್ ಕಣದಲ್ಲಿ ಉಳಿಸಲು ಜೆಡಿಎಸ್ ಸಂಪನ್ಮೂಲ ಪೂರೈಕೆಯ ಆಮಿಷಕ್ಕೂ ಇಳಿದಿರುವ ನಿದರ್ಶನವುಂಟು.

### ಎಚ್‌ಡಿಕೆ ಆರೋಪ ಮಾಡುವುದನ್ನು ಬಿಟ್ಟು ಚುನಾವಣೆ ಎದುರಿಸಲಿ : ಡಿ.ಕೆ. ಸುರೇಶ್

ನಿಖಿಲ್ ಕುಮಾರಸ್ವಾಮಿ ನಾಮಪತ್ರ ವೇಳೆ ಜನರನ್ನು ಕರೆತಂದ ಬಸ್‌ಗಳನ್ನು ಸೀಜ್ ಮಾಡಿ ಎನ್‌ಸಿಆರ್ ಹಾಕಿಸಲಾಗಿದೆ ಎಂಬ ಎಚ್.ಡಿ. ಕುಮಾರಸ್ವಾಮಿ ರವರ ಆರೋಪಕ್ಕೆ ಡಿ.ಕೆ. ಸುರೇಶ್‌ರವರು ಪ್ರತಿಕ್ರಿಯಿಸಿ ಕುಮಾರಸ್ವಾಮಿ ಅವರು ಅನೇಕ ಚುನಾವಣೆಗಳನ್ನು ಮಾಡಿದ್ದಾರೆ. ಚುನಾವಣೆ ನೀತಿ ಸಂಹಿತೆ ಬಗ್ಗೆ ಅವರಿಗೂ ಜ್ಞಾನವಿದೆ. ನೀತಿ ಸಂಹಿತೆ ಸಮಯದಲ್ಲಿ ಯಾರು ಯಾವ ಪಾತ್ರ ವಹಿಸುತ್ತಾರೆ, ಪ್ರಕ್ರಿಯೆ ಹೇಗಿರುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ನೀತಿ ಸಂಹಿತೆ ಉಲ್ಲಂಘನೆ ಆಗಿದ್ದರೆ ಅದು ಚುನಾವಣಾ ಅಧಿಕಾರಿಗಳಿಗೆ ಸಂಬಂಧಪಟ್ಟ ವಿಚಾರ, ಅದು ನಮಗೆ ಸಂಬಂಧಿಸುವುದಿಲ್ಲ, ಇತ್ತೀಚೆಗೆ ಕುಮಾರಸ್ವಾಮಿಯವರು ಆರೋಪ ಮಾಡುವುದನ್ನೇ ಅಭ್ಯಾಸ ಮಾಡಿಕೊಂಡು, ದಿನನಿತ್ಯ ಕಾಂಗ್ರೆಸ್ ವಿರುದ್ಧ ದೂಷಣೆ ಮಾಡುತ್ತಿದ್ದಾರೆ. ಅವರು ಬಸ್‌ಗಳಲ್ಲಿ ಜನರನ್ನು ಕರೆತಂದಿದ್ದರೆ, ಅದಕ್ಕೆ ಲೆಕ್ಕ ಕೊಡಬೇಕು. ಅದಕ್ಕಾಗಿ ಅನುಮತಿ ಪಡೆಯಬೇಕು ಎಂಬ ಸಾಮಾನ್ಯ ಜ್ಞಾನ ಇಲ್ಲವಾದರೆ ಅವರು ಹೇಗೆ ಕೇಂದ್ರ ಸಚಿವರಾಗಿದ್ದಾರೆ, ಸಂವಿಧಾನದ ಬಗ್ಗೆ ಮೊದಲು ತಿಳಿದುಕೊಳ್ಳಲಿ. ಬಸ್‌ಗಳಿಗೂ ನನಗೂ ಏನು ಸಂಬಂಧ, ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಯಿಲ್ಲ ಹೀಗಾಗಿ ಯೋಗೇಶ್ವರ್‌ರವರನ್ನು ಹೈಜಾಕ್ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ ಎಚ್‌ಡಿಕೆಯವರು, ಯೋಗೇಶ್ವರ್‌ರವರು 9 ಬಾರಿ ಚುನಾವಣೆ ಎದುರಿಸಿ ಐದು ಬಾರಿ ಶಾಸಕರಾಗಿದ್ದಾರೆ. ನಿಮ್ಮ ಮಗನನ್ನು ಚುನಾವಣೆಯಲ್ಲಿ ನಿಲ್ಲಿಸಲು ತಂತ್ರಗಾರಿಕೆ ಮಾಡಿ ಯೋಗೇಶ್ವರ್ ಅವರನ್ನು ಆಚೆ ಕಳುಹಿಸಿದ್ದೀರಿ. ನೀವೇ ಆಚೆ ಕಳುಹಿಸಿ ಕಾಂಗ್ರೆಸ್ ಮೇಲೆ ದೂಷಣೆ ಮಾಡಬೇಡಿ, ಷಡ್ಯಂತ್ರ ಮಾಡುತ್ತಿರುವವರು ಬಿಜೆಪಿಯವರು, ಯಡಿಯೂರಪ್ಪ ಅವರ ಮನೆಯಲ್ಲಿ ಷಡ್ಯಂತ್ರ ಮಾಡಲಾಗುತ್ತಿದೆ. ಇದೆಲ್ಲವೂ ರಾಜಕಾರಣದ ಪ್ರಕ್ರಿಯೆ. ಅವರ ಕೆಲಸ ಅವರು ಮಾಡುತ್ತಾರೆ. ನಮ್ಮ ಕೆಲಸ ನಾವು ಮಾಡುತ್ತೇವೆ. ನಮ್ಮಲ್ಲಿ ಯಾವುದೇ ರೀತಿ ಅಸಮಾಧಾನಯಿಲ್ಲ. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಪಕ್ಷದಿಂದ ಯಾರೇ ಅಭ್ಯರ್ಥಿಯಾದರೂ ನಾವೇ ಅಭ್ಯರ್ಥಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ರವರು ಹೇಳಿದ್ದಾರೆ. ನಾವು ಅದನ್ನೇ ಹೇಳುತ್ತಿದ್ದೇವೆ. ಇಲ್ಲಿ ಸಿ.ಪಿ. ಯೋಗೇಶ್ವರ್ ಅಭ್ಯರ್ಥಿಯಲ್ಲಿ ಡಿ.ಕೆ. ಶಿವಕುಮಾರ್‌ರವರೇ ಅಭ್ಯರ್ಥಿ. ರಾಮನಗರ ಜಿಲ್ಲಾ ಉಸ್ತುವಾರಿ ಸಿಚವರಾದ ರಾಮಲಿಂಗ ರೆಡ್ಡಿರವರ ನೇತೃತ್ವದಲ್ಲಿ ನಾವು ಎಲ್ಲರೂ ಚುನಾವಣೆ ಮಾಡುತ್ತಿದ್ದೇವೆ ಎನ್ನುತ್ತಾರೆ ಡಿ.ಕೆ. ಸುರೇಶ್ ರವರು.


ನಾಮಪತ್ರ ಸಲ್ಲಿಸುವ ವೇಳೆ

ಚನ್ನಪಟ್ಟಣ ಉಪಚುನಾವಣಾ ಕಣ ಸಧ್ಯ ಸರ್ಕಾರ ವರ್ಸಸ್ ಎಚ್.ಡಿ. ಕುಮಾರಸ್ವಾಮಿ ಎನ್ನುವಂತಾಗಿದೆ. ರಾಮನಗರ ಜಿಲ್ಲೆಯಿಂದ ಜೆಡಿಎಸ್‌ಗೆ ಗೇಟ್‌ಪಾಸ್ ಕೊಡಬೇಕೆಂದು ಸಿಎಂ, ಡಿಸಿಎಂ ಜಿದ್ದಿಗೆ ಬಿದ್ದಿದ್ದಾಗೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಯೋಗೇಶ್ವರ್ ಬೆನ್ನಿಗೆ ನಿಂತಿದ್ದು, ಇವರ ಜೊತೆಗೆ ಕುಮಾರಸ್ವಾಮಿ ಅವರ ಹಳೆಯ ಮಿತ್ರರು, ಸಚಿವರಾದ ಜಮೀರ್ ಅಹಮ್ಮದ್, ಚೆಲುವರಾಯಸ್ವಾಮಿ, ಶಾಸಕ ಬಾಲಕೃಷ್ಣ ಸಹಕಾರ ನೀಡುತ್ತಿದ್ದಾರೆ. ಶತಾಯಗತಾಯ ಕ್ಷೇತ್ರವನ್ನು ಪಡೇ ತೀರಲು ಕಾಂಗ್ರೆಸ್ ತನ್ನ ಇಡೀ ತಂತ್ರಗಳನ್ನು ಈ ಚುನಾವಣೆಯಲ್ಲಿ ಬಳಕೆ ಮಾಡುತ್ತಿದ್ದು, ಅನ್ಯಪಕ್ಷದ ಮುಖಂಡರು, ಕಾರ್ಯಕರ್ತರನ್ನು ಸೆಳೆಯಲು ಕಾರ್ಯಾಚರಣೆಯೂ ನಿರಾತಂಕವಾಗಿ ಸಾಗಿದೆ.

ಆದರೆ, ಕ್ಷೇತ್ರ ಉಳಿಸಿಕೊಳ್ಳಲು ಜೆಡಿಎಸ್ ಸಹ ಪ್ರತಿತಂತ್ರ ಹೆಣೆಯುತ್ತಿದೆ. ಜೆಡಿಎಸ್ ಮುಳುಗಿ ಹೋಗುತ್ತಿದೆ ಎನ್ನುವ ಪರಿಸ್ಥಿತಿ ಬಂದ ಸಂದರ್ಭದಲ್ಲಿ ಫೀನಿಕವ್ಸನಂತೆ ಮೇಲೆದ್ದು, ಕೇಂದ್ರ ಸಚಿವ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿರುವ ಎಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರವನ್ನು ಬಿಟ್ಟುಕೊಡಲು ಸುಲಭವಾಗಿ ಬಿಟ್ಟುಕೊಡಲು ಸಿದ್ಧರಿಲ್ಲ. ಅವಶ್ಯವಿರುವ ಎಲ್ಲ ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಜೆಡಿಎಸ್ ತನ್ನ ಶಾಸಕರು, ಮುಖಂಡರ ಜೊತೆಗೆ ಮಿತ್ರ ಪಕ್ಷ ಬಿಜೆಪಿಯ ಘಟಾನುಘಟಿ ನಾಯಕರು ಸಾಥ್ ನೀಡುತ್ತಿದ್ದಾರೆ. ಮಾಜಿ ಸಿಎಂಗಳಾದ ಬಿ.ಎಸ್. ಯಡಿಯೂರಪ್ಪ, ಸದಾನಂದ ಗೌಡ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಮಾಜಿ ಡಿಸಿಎಂ ಅಶ್ವತ್ಥ್‌ನಾರಾಯಣ, ಬಿಜೆಪಿ ಅಧ್ಯಕ್ಷ ವಿಜಯೇಂದ್ರ, ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಸಧ್ಯದ ಪಾಲಿಗೆ ಜೆಡಿಎಸ್ ಬೆನ್ನಿಗಿದ್ದಾರೆ. ಎರಡೂ ಪಕ್ಷಗಳ ನಾಯಕರು ನಿಖಿಲ್ ಗೆಲುವಿಗೆ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಒಟ್ಟಾರೆ, ಕ್ಷೇತ್ರದಲ್ಲಿ ಗೆಲುವಿಗಾಗಿ ಎರಡೂ ಪಕ್ಷಗಳು ಜಿದ್ದಾಜಿದ್ದಿ ನಡೆಸುತ್ತಿವೆ, ಪ್ರಚಾರ ಆರಂಭದಲ್ಲೇ ಭರ್ಜರಿ ಎನಿಸಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇದು ಯಾವ ಹಂತಕ್ಕೆ ತಲುಪುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ☯

**2023ರ ಫಲಿತಾಂಶ**

ಜೆಡಿಎಸ್ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಪಡೆದ ಮತ : 96,592
ಬಿಜೆಪಿ ಅಭ್ಯರ್ಥಿ ಯೋಗೇಶ್ವರ್ ಪಡೆದ ಮತ : 80.677
ಕಾಂಗ್ರೆಸ್ ಅಭ್ಯರ್ಥಿ ಎಸ್. ಗಂಗಾಧರ್ ಪಡೆದ ಮತ : 15,374


ಯೋಗೇಶ್ವರ್ ನಾಮಪತ್ರ ಸಲ್ಲಿಸುವ ವೇಳೆ ನೆರೆದಿದ್ದ ಜನಸ್ತೋಮ


ರೋಡ್ ಶೋನಲ್ಲಿ ಹೆಚ್.ಡಿ. ಕುಮಾರಸ್ವಾಮಿ



## ದೀಪಾವಳಿಯ ಹಾಡು

ಬಾ ಬೆಳಗು ದೀಪಗಳೆ ದೀಪಾವಳಿಯ ದೀಪಗಳೆ
ಕೆಟ್ಟ ಕಹಿಯನು ಸರಿಸಿ
ಮನಸ್ಸಿನ ಕಶ್ಮಲವ ಕಡೆಗಣಿಸಿ
ಬಾ ಬೆಳಗು ದೀಪಗಳೆ ದೀಪಾವಳಿಯ ದೀಪಗಳೆ.

ನಾನು ನನ್ನದು ಎಂಬ ಅಹಂಕಾರವ ಅಳಿಸಿ
ಮಾತು ನಡೆಯಲಿ ಸತ್ಯವನು ಬಳಸಿ
ನೀತಿ ಶಾಂತಿಯಲಿ ಗಾಂಧೀಯ ಅನುಸರಿಸಿ
ಇರುವಂತೆ ಬಾ ಬೆಳಘು ದೀಪಗಳೆ ದೀಪಾವಳಿಯ ದೀಪಗಳೆ.

ಜಾತಿ ಜಾತಿ ಎಂಬ ಕೆಟ್ಟ ಕತ್ತಲ ಅಟ್ಟಿ
ನಾವು ನಮ್ಮದು ಎಂಬ ಒಳ್ಳೆಯ ಬೆಳಕನ್ನು ಹರಡಿ
ಅವರವರ ಕರ್ಮವನು ಧರ್ಮದಿಂದ ಮಾಡುವಂತೆ
ಬಾ ಬೆಳಗು ದೀಪಗಳೆ ದೀಪಾವಳಿಯ ದೀಪಗಳೆ.

ಹಳೆ ವರುಷವ ಕಳೆದು ಹೊಸ ವರುಷದ ಬೆಳಕನ್ನು
ಹೊಸ ಹೊಸ ಆಸೆಗಳ ಹರುಷದಲಿ ಕಳೆವಂತೆ
ದಿಕ್ಕು ದಿಕ್ಕುಗಳಲ್ಲಿ ನೆಮ್ಮದಿ ನೆಲೆಸುವಂತೆ
ಬಾ ಬೆಳಗು ದೀಪಗಳೆ ದೀಪಾವಳಿಯ ದೀಪಗಳೆ.

ರಾಮನೊಬ್ಬ ರಹೀಮನೊಬ್ಬ ಇಬ್ಬರು ಒಬ್ಬರಂತೆ
ಈ ಇಬ್ಬರು ಇರುವರು ಎಲ್ಲರಲ್ಲೂ
ಭಯ ಭಕ್ತಿಯ ಇರಿಸಿ ದಾನ ಧ್ಯಾನವ ಮಾಡುವಂತೆ
ಬಾ ಬೆಳಗು ದೀಪಗಳೆ ದೀಪಾವಳಿಯ ದೀಪಗಳು.

ಜಾತಿ ಮತವನು ಬಿಟ್ಟು ಕೋಮುಗಲಭೆಯ ಕಡೆಗಿಟ್ಟು
ದೇಶದ ಐಕ್ಯತೆಗಾಗಿ ದುಡಿಯುವಂತೆ ಮಾಡು
ಎಲ್ಲರೂ ಒಂದಾಗಿ ಒಳ್ಳೆ ಮಾರ್ಗದಲಿ ನಡೆಯುವಂತೆ
ಮಾಡಲು ಬಾ ಬೆಲಗು ದೀಪಗಳೆ ದೀಪಾವಳಿಯ ದೀಪಗಳೆ.



ರಚನೆ : ಬಿ. ಬಸವರಾಜು
ನಿವೃತ್ತ ಶಿಕ್ಷಕರು, ಸಾತನೂರು

# 40 ವರ್ಷ ಕನಸು ಈಡೇರಿಸಿಕೊಂಡ ನವರಸ ನಾಯಕ; ಶಂಕನಾರ್ ನಾಗ್ ಕನಸಿನ ಹಾದಿಯಲ್ಲಿ ನವರಸ ನಾಯಕ



ನವರಸ ನಾಯಕ ಜಗ್ಗೇಶ್ ರಾಜಕೀಯ ಹಾಗೂ ಸಿನಿಮಾ ಎರಡರಲ್ಲೂ ಆಕ್ಟಿವ್ ಆಗಿದ್ದಾರೆ. ರಾಜ್ಯಸಭಾ ಸದಸ್ಯರಾಗಿದ್ದರೂ, ಸಿನಿಮಾ ನಂಟು ಬಿಟ್ಟಿಲ್ಲ, ರಾಜಕೀಯ ಜೀವನ ಒಂದು ಕಡೆ ನಡೆಯುತ್ತಿದ್ದರೆ, ಇನ್ನೊಂದು ಕಡೆ ಸಿನಿಮಾ ಚಟುವಟಿಕೆಗಳಲ್ಲೂ ಆಕ್ಟಿವ್ ಆಗಿದ್ದಾರೆ. ಇದೇ ವೇಳೆ ತಮ್ಮ 40 ವರ್ಷಗಳ ಹಳೆಯ ಕನಸನ್ನು ನನಸು ಮಾಡಿಕೊಂಡಿದ್ದಾರೆ.

ಜಗ್ಗೇಶ್ ಬೆಂಗಳೂರಿನಲ್ಲಿ ಹೊಸದೊಂದು ಸ್ಟುಡಿಯೋ ನಿರ್ಮಾಣ ಮಾಡಿದ್ದಾರೆ. ಕನ್ನಡ ಚಿತ್ರರಂಗಕ್ಕೆ ಅತ್ಯಗತ್ಯವಿರುವ ಆಧುನಿಕ ಸೌಲಭ್ಯಗಳನ್ನು ಈ ಸ್ಟುಡಿಯೋದಲ್ಲಿ ಒದಗಿಸಿದ್ದಾರೆ. ಕನ್ನಡ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮಾಡುವುದಕ್ಕೆ ಈ ಸ್ಟುಡಿಯೋವನ್ನು ನಿರ್ಮಾಣ ಮಾಡಿದ್ದು, ಅದಕ್ಕೆ 'ಜಗ್ಗೇಶ್ ಸ್ಟುಡಿಯೋಸ್' ಅಂತಲೇ ಹೆಸರಿಟ್ಟಿದ್ದಾರೆ.

ಈ ಸ್ಟುಡಿಯೋ ಈಗಾಗಲೇ ಕೆಲಸವನ್ನೂ ಆರಂಭ ಮಾಡಿದೆ. ತಮ್ಮ ಕೋಮಲ್ ನಟಿಸಿದ 'ಯಲಾ ಕುನ್ನಿ' ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸ ಕೂಡ ಇಲ್ಲೇ ನಡೆದಿದೆ. ಈಗಾಗಲೇ ಹಲವು ಸಿನಿಮಾಗಳ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಇಲ್ಲಿ ನಡೆದಿದೆ. ಕನ್ನಡ ಸಿನಿಮಾ ಅಷ್ಟೇ ಅಲ್ಲ, ಹಿಂದಿ ಹಾಗೂ ಮಲಯಾಳಂ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೂಡ ನಡೆದಿದೆ. ಈ ಸ್ಟುಡಿಯೋ ಬಗ್ಗೆ ಸ್ವತಃ ಜಗ್ಗೇಶ್ ಅವರೇ ಕನ್ನಡ ಪಿಕ್ಚರ್ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ನವರಸ ನಾಯಕ ಜಗ್ಗೇಶ್‌ಗೆ ಸ್ಟುಡಿಯೋ ಕಟ್ಟಬೇಕು ಅನ್ನೋದು ಇಂದಿನ ಕನಸಲ್ಲ, ಚಿತ್ರರಂಗಕ್ಕೆ ಅವರು ಪಾದಾರ್ಪಣೆ ಮಾಡಿದ ಸಮಯದಿಂದಲೇ ಇಂತಹದ್ದೊಂದು ಸ್ಟುಡಿಯೋ ಕಟ್ಟಬೇಕು ಅನ್ನೋ ಆಸೆ. 80ರ ದಶಕದಲ್ಲಿ ಚಿತ್ರರಂಗಕ್ಕೆ ಬಂದ ಜಗ್ಗೇಶ್ ಆಗ ಸ್ಟುಡಿಯೋದಿಂದ ಸ್ಟುಡಿಯೋಗೆ ಅವಕಾಶಕ್ಕಾಗಿಯೋ, ಸಿನಿಮಾದ ಕೆಲಸಕ್ಕಾಗಿ ಹೋಗಿ ಬರುತ್ತಿದ್ದರು. ಆಗ ಇಂತಹದ್ದೊಂದು ಸ್ಟುಡಿಯೋ ಕಟ್ಟಬೇಕು ಅಂದು ಕೊಂಡಿದ್ದರು. ಅದು ಈಗ ಈಡೇರಿದೆ.

ನಾನು 80ನೇ ಇಸವಿಯಲ್ಲಿ ಸಿನಿಮಾರಂಗಕ್ಕೆ ಬಂದವನು. ಆ ಸಮಯದಲ್ಲಿ ಬಿಸಿಆರ್‌ಸಿ ಅಂತ ಒಂದು ಡಬ್ಬಿಂಗ್ ಥಿಯೇಟರ್ ಇತ್ತು. ಆ ಸಂದರ್ಭದಲ್ಲಿ ನಾನು ಅಲ್ಲಿಗೆ ಹೋದಾಗ ಎಸ್.ಎಸ್. ರಾವ್ ಅವರು ಡಬ್ಬಿಂಗ್ ಮಾಡುತ್ತಿದ್ದರು. ಆ ಸಮಯದಲ್ಲಿ ನಿರ್ದೇಶಕರಿಗೆ ಒಂದು ಪ್ರಶ್ನೆ ಕೇಳಿದ್ದೆ. ಈ ಸ್ಟುಡಿಯೋ ಕಟ್ಟುವುದಕ್ಕೆ ಎಷ್ಟು ಆಗುತ್ತೆ ಸರ್ ಅಂತ. ಆಗ ಅವರು 8 ರಿಂದ 9 ಲಕ್ಷ ರೂಪಾಯಿ ಆಗುತ್ತೆ ಅಂದರು. ಆ ದಿನಕ್ಕೆ ಈ ಅಮೌಂಟ್ ಕೇಳಿ ವಿಶ್ವದ ಅಗಲ ಕಾಣಿಸಿತ್ತು. ಆನಂತರ ಚಾಮುಂಡೇಶ್ವರಿ ಸ್ಟುಡಿಯೋ. ಅಲ್ಲಿ ನನ್ನ ವರ್ಣರಂಜಿತ ಬದುಕು ಎಂದು ಆ ದಿನವನ್ನು ಜಗ್ಗೇಶ್ ನೆನಪಿಸಿಕೊಂಡಿದ್ದಾರೆ.

ಅವರ ಕಾಲದಲ್ಲಿ ಸ್ಕ್ರೀನ್ ನೋಡಿಕೊಂಡು ಡಬ್ಬಿಂಗ್ ಮಾಡುತ್ತಿದ್ದರು. ಆದರೆ, ಈಗ ಕಾಲ ಬದಲಾಗಿದ್ದು ಟಿವಿ ಸ್ಕ್ರೀನ್ ನೋಡಿಕೊಂಡು ಡಬ್ಬಿಂಗ್ ಮಾಡುತ್ತಾರೆ. ಅದನ್ನು ನೋಡಿ ಜಗ್ಗೇಶ್‌ಗೆ ಬೇಜಾರಾಗಿತ್ತು. ಕನ್ನಡ ಚಿತ್ರರಂಗ ಎಲ್ಲಿಗೆ ಬಂತು ನಿಂತಿದೆ ಅಂತ ಅನಿಸುವುದಕ್ಕೆ ಶುರುವಾಗಿತ್ತು. ಆಗ ಒಂದು ವೇಳೆ ಸ್ಟುಡಿಯೋ ಮಾಡಿದರೆ ಹಳೇ ಪದ್ಧತಿ ವಾಪಾಸ್ ಬರಬೇಕು ಅಂತ ಅಂದುಕೊಂಡಿದ್ದರು.

ಈಗಿನ ಮ್ಯೂಸಿಕ್ ಡೈರೆಕ್ಟರ್‌ಗಳು ತಮ್ಮ ಮನೆಯಲ್ಲಿಯೇ ಒಂದು ರೂಮ್‌ನಲ್ಲಿ ಸ್ಟುಡಿಯೋಗಳನ್ನು ಮಾಡಿಕೊಳ್ಳುತ್ತಾರೆ. ಡಬ್ಬಿಂಗ್ ಥಿಯೇಟರ್ ಅನ್ನೋ ಕಾನ್ಸೆಪ್ಟ್ ಸತ್ತು ಹೋಗಿದೆ. ಎಲ್ಲಾ ಕಡೆ ಡಬ್ಬಿಂಗ್ ಥಿಯೇಟರ್ ಅಂತ ಮಾಡಿದ್ದಾರೆ. ತುಂಬಾ ಚಿಕ್ಕ ಚಿಕ್ಕದಾಗಿರುತ್ತೆ. ಆರ್ಟಿಸ್ಟ್‌ಗೆ ಫೀಲ್ ಬರಬೇಕು. ಅದಕ್ಕಾಗಿ ಬೆಸ್ಟ್ ಸ್ಟುಡಿಯೋ ಮಾಡಬೇಕು ಅನ್ನುವ ಅವಕಾಶ ಸಿಕ್ಕಿದೆ. ಎಂದು ಜಗ್ಗೇಶ್ ಹೇಳಿದ್ದಾರೆ.

ಅಂದ್ಹಾಗೆ ಜಗ್ಗೇಶ್ ಸ್ಟುಡಿಯೋ ವಿಶೇಷತೆಯಿದೆ. ಇದೊಂದು ಫ್ಲೋಟಿಂಗ್ ಸ್ಟುಡಿಯೋ. ಇಲ್ಲಿ ಸೌಂಡ್ ಆಚೆ ಹೋಗುವುದಿಲ್ಲ, ಚಿತ್ರೀಕರಣ ಮುಗಿಸಿಕೊಂಡು ಸಿನಿಮಾ ತಂಡ ಬಂದರೆ, ಸಿಜಿ ಕೆಲಸವೊಂದನ್ನು ಬಿಟ್ಟು ಉಳಿದದ್ದು ಎಲ್ಲವೂ ಇಲ್ಲಿ ಆಗುತ್ತೆ. ಡಬ್ಬಿಂಗ್, ರೀ ರೆಕಾರ್ಡಿಂಗ್, ಸಾಂಗ್ ರೆಕಾರ್ಡಿಂಗ್, ಮಿಕ್ಸಿಂಗ್, ಡಿಟಿಎಸ್ ಎಲ್ಲವೂ ಒಂದೇ ಫ್ಲೋರ್‌ನಲ್ಲಿ ಆಗುತ್ತೆ. ಸದ್ಯಕ್ಕೀಗ ಒಂದು ಮಲಯಾಳಂ ಹಾಗೂ ಒಂದು ಹಿಂದಿ ಸಿನಿಮಾದ ಆರು ಸಾಂಗ್ ರೆಕಾರ್ಡಿಂಗ್ ಆಗಿದೆ. ☯

# ತುಳು ಚಿತ್ರರಂಗಕ್ಕೆ ಕಾಲಿಟ್ಟ 'ಗೋಲ್ಡನ್ ಸ್ಟಾರ್' ಗಣೇಶ್ ಪತ್ನಿ

ತುಳುನಾಡಿನ ಜತೆಗೆ ಒಡನಾಟವಿರುವ, ಕರಾವಳಿಯ ಅಳಿಯ 'ಗೋಲ್ಡನ್ ಸ್ಟಾರ್' ಗಣೇಶ್ ಮತ್ತು ಅವರ ಪತ್ನಿ, ಮಂಗಳೂರು ಮೂಲದ ಶಿಲ್ಪಾ ಗಣೇಶ್ ತುಳುವಿನಲ್ಲಿ ಸಿನಿಮಾ ನಿರ್ಮಾಣ ಮಾಡಲು ಹೊರಟಿದ್ದಾರೆ. ಡಿಸೆಂಬರ್



ತಿಂಗಳಿನಿಂದ ಈ ಸಿನಿಮಾದ ಶೂಟಿಂಗ್ ಆರಂಭ ಆಗಲಿದೆ. ಈ ಸಿನಿಮಾಗೆ ಸಂದೀಪ್ ಬೆದ್ರ ನಿರ್ದೇಶಕರಾಗಿದ್ದು, ಮೋಹನ್ ಭಟ್ಕಳ್ ಚಿತ್ರಕಥೆ ಬರೆದಿದ್ದು, ಸಂತೋಷ್ ರೈ ಪಾತಾಜೆ ಛಾಯಾಗ್ರಹಣ ಮಾಡಲಿದ್ದಾರೆ.

ಹರಿಕೃಷ್ಣ ಬಂಟ್ವಾಳ್ ಪುತ್ರ ನಿತ್ಯಪ್ರಕಾಶ್ ಬಂಟ್ವಾಳ್ ಅವರು ಶಿಲ್ಪಾ ಗಣೇಶ್ ನಿರ್ಮಾಣದ ಈ ಸಿನಿಮಾದಲ್ಲಿ ಹೀರೋ ಆಗಿ ಅಭಿನಯಿಸಲಿದ್ದಾರೆ. ನಾಯಕಿಯ ಪಾತ್ರಕ್ಕೆ ಹೊಸಬರನ್ನು ಪರಿಚಯಿಸುವ ಸಾಧ್ಯತೆ ಇದೆ. ಅಂದಹಾಗೆ, ಗಣೇಶ್ ನಾಯಕತ್ವದಲ್ಲಿ ಅನೇಕ ಸಿನಿಮಾಗಳನ್ನು ಶಿಲ್ಪಾ ಗಣೇಶ್ ನಿರ್ಮಾಣ ಮಾಡಿದ್ದಾರೆ. ಇದೀಗ ಅವರಿಗೆ ತವರಿನಲ್ಲಿ ಒಂದು ಸಿನಿಮಾವನ್ನು ನಿರ್ಮಾಣ ಮಾಡಬೇಕು ಎಂಬ ಆಸೆ ಹುಟ್ಟಿಕೊಂಡಿದೆ. ಅದರ ಫಲವಾಗಿ ಈ ತುಳು ಸಿನಿಮಾ ಸೆಟ್ಟೇರುತ್ತಿದೆ. ☯

# ಎಲ್ಲಿಗೆ ಪಯಣ ಯಾವುದೋ ದಾರಿ ಜರ್ನಿಯಲ್ಲಿ ಥ್ರಿಲ್ಲರ್ ಕಥನ



ಒಬ್ಬರಿಗೊಬ್ಬರು ಪರಿಚಯವಿಲ್ಲದ ನಾಲ್ಕು ಜನ ಒಂದೇ ಕಾರಿನಲ್ಲಿ ಪಯಣಿಸುವಾಗ ಅಲ್ಲಿರೋ ಪ್ರತಿಯೊಬ್ಬರ ಮನದಲ್ಲಿ ಏನೇನೆಲ್ಲ ಕಲ್ಪನೆಗಳು ಉಂಟಾಗುತ್ತವೆ, ಅಷ್ಟಕ್ಕೂ ಅವರು ಆರಂಭಿಸಿದ ಪಯಣ ಯಾವರೀತಿ ಅಂತ್ಯ ಕಂಡಿತು ಎಂಬುದನ್ನು ಎಲ್ಲಿಗೆ ಪಯಣ ಯಾವುದೋ ದಾರಿ ಚಿತ್ರದಲ್ಲಿ ನಿರ್ದೇಶಕ ಕಿರಣ್ ಎಸ್. ಸೂರ್ಯ ಅವರು ರಣರೋಚಕವಾಗಿ ನಿರೂಪಿಸಿದ್ದಾರೆ. ಚಿತ್ರದ ಕಥೆ ತೆರೆದುಕೊಳ್ಳುವುದೇ ಒಂದು ಆಸ್ಪತ್ರೆಯ ವಾರ್ಡ್‌ನಿಂದ. ಅಲ್ಲಿನ ಬೆಡ್ ಮೇಲೆ ನಿಸ್ತೇಜಳಾಗಿ ಮಲಗಿದ್ದ ನಾಯಕಿ ಅಕ್ಷತಾ(ಸ್ಫೂರ್ತಿ ಉಡಿಮನೆ)ಗೆ ಅಲ್ಲಿದ್ದ ವೈದ್ಯ ಪದೇ ಪದೇ ಚುಚ್ಚುವುದನ್ನು ನೀಡಿ ಪ್ರಜ್ಞೆ ತಪ್ಪಿಸುತ್ತಾನೆ, ಅಲ್ಲಿಂದ ಚಿತ್ರದ ಕಥೆ ತೆರೆದುಕೊಳ್ಳುತ್ತದೆ, ನಾಯಕ ಅಮರ್ (ಅಭಿಮನ್ಯು ಕಾಶಿನಾಥ್) ಒಬ್ಬ ಚಿತ್ರಬರಹಗಾರ, ಪ್ರಕೃತಿ, ಹೆಣ್ಣಿನ ಒಡಲಲ್ಲಿರುವ ಸೌಂದರ್ಯವನ್ನು ತನ್ನ ಕುಂಚದ ಮೂಲಕ ಯಥಾವತ್ತಾಗಿ ಮರುಸೃಷ್ಟಿಸುವಂಥ ನಿಪುಣ ಕುಂಚಕಲಾವಿದ. ಒಮ್ಮೆ ಹೆಣ್ಣೊಬ್ಬಳ ಸುಂದರ ದೇಹ ಸೌಂದರ್ಯವನ್ನು ಚಿತ್ರಿಸಲು ರೂಪದರ್ಶಿಯೊಬ್ಬಳನ್ನು ಕರೆಸಿಕೊಳ್ಳುತ್ತಾನೆ, ಆಕೆಯೇ ಅಕ್ಷತಾ, ತಮ್ಮನ ಚಿಕಿತ್ಸೆಗೆ ಹಣ ಹೊಂದಿಸಲು ಆಕೆ ಪರಪುರುಷನ ಮುಂದೆ ಆ ಸ್ಥಿತಿಯಲ್ಲಿ ನಿಲ್ಲಲು ಒಪ್ಪಿಕೊಂಡಿರುತ್ತಾಳೆ, ಆಕೆಯ ಪರಿಸ್ಥಿತಿ ಅರಿಯದ ಅಮರ್ ಚಿತ್ರ ಪೂರ್ಣಗೊಳ್ಳುವ ಮೊದಲೇ ಹೊರಟುಹೋಗಿದ್ದ ಅಕ್ಷತಾ ಮೇಲೆ ಸಿಡಿಮಿಡಿಗೊಳ್ಳುತ್ತಾನೆ, ನಂತರ ಆಕೆ ಮತ್ತೆ ಸಿಕ್ಕಾಗ ಆಕೆಯ ಪರಿಸ್ಥಿತಿ ಅರಿತ ಮೇಲೆ ಇಬ್ಬರ ನಡುವೆ ಸ್ನೇಹ, ಪ್ರೀತಿ ಚಿಗುರುತ್ತದೆ, ಎಲ್ಲವೂ ಸರಿಯಾಗೇ ಸಾಗುತ್ತಿರುವಾಗ ಚಿತ್ರಕಥೆಯಲ್ಲಿ ಒಂದು ರೋಚಕ ತಿರುವು ಎದುರಾಗುತ್ತದೆ, ಅಮರ್ ವಿರಾಜಪೇಟೆಯಲ್ಲಿ ಹೊಸದಾಗಿ ಒಂಟಿ ಮನೆಯೊಂದನ್ನು ಖರೀದಿಸಿ ಅಲ್ಲಿ ಪೇಂಟಿಂಗ್ ಎಕ್ಸಿಬಿಷನ್ ನಡೆಸಲು ಮುಂದಾಗುತ್ತಾನೆ, ಅಷ್ಟರಲ್ಲಿ ಅಮರ್ ಒಂದುವಾರ ಬೇರೊಂದು ಕಡೆ ಹೋಗಬೇಕಾದ ಸಂದರ್ಭ ಎದುರಾಗುತ್ತದೆ, ಆಗ ಅಕ್ಷತಾ ತಾನೊಬ್ಬಳೇ ಆ ಮನೆಗೆ ಹೋಗಿ ಮನೆಯನ್ನು ಎಕ್ಸಿಬಿಷನ್‌ಗೆ ಸಜ್ಜುಗೊಳಿಸಲು ಮುಂದಾಗುತ್ತಾಳೆ. ಮನೆಗೆ ಪೇಂಟಿಂಗ್ ಮಾಡಲು ಬಂದ ಸಂಪತ್ ಆಕೆಯ ದೇಹಸೌಂದರ್ಯ ಕಂಡು ಬಲವಂತಮಾಡಲು ಮುಂದಾಗುತ್ತಾನೆ, ಆಕೆ ಒಪ್ಪದಿದ್ದಾಗ ಆಕೆ ಮನೆಯಲ್ಲಿ ವೇಶ್ಯಾವಾಟಿಕೆ ಮಾಡುತ್ತಿದ್ದಾಳೆಂದು ಸುದ್ದಿ ಹಬ್ಬಿಸುತ್ತಾನೆ. ಹೀಗೆ ಸಾಗುವ ಕಥೆಯಲ್ಲಿ ಮುಂದೆ ನಾಯಕ ಅಮರ್ ಕೆಲಸ ಮುಗಿಸಿಕೊಂಡು ಕಾರಲ್ಲಿ ವಿರಾಜಪೇಟೆಗೆ ಹೊರಡುತ್ತಾನೆ, ಮಾರ್ಗಮಧ್ಯೆ ಆತನಿಗೆ ಸಿಗುವ ಸುಂದರ ಯುವತಿ ನೀತು(ವಿಜಯಶ್ರೀ ಕಲಬುರ್ಗಿ) ಸೇರಿದಂತೆ ನಾಲ್ವರು ಅಪರಿಚಿತ ವ್ಯಕ್ತಿಗಳಿಗೂ ಏನು ಸಂಬಂಧ, ಅವರು ಹೋಗುವ ಮಾರ್ಗ ಮಧ್ಯದಲ್ಲಿ ಏನೇಲೆಲ್ಲ ಘಟನೆಗಳು ಸಂಭವಿಸಿದವು, ಅವರೆಲ್ಲರೂ ವಿರಾಜಪೇಟೆಗೆ ತಲುಪುತ್ತಾರೆ, ಇಲ್ವಾ ಈ ಎಲ್ಲ ಪ್ರಶ್ನೆಗೆ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಉತ್ತರವಿದೆ.

ನಟ, ನಿರ್ದೇಶಕ ಕಾಶೀನಾಥ್ ಅವರ ಪುತ್ರ ಅಭಿಮನ್ಯು ಕಾಶಿನಾಥ್ ನಾಯಕ ಅಮರ್ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ, ನಾಯಕಿ ಸ್ಫೂರ್ತಿ ಉಡಿಮನೆ ತೆರೆಮೇಲೆ ತುಂಬಾ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಮತ್ತೊಬ್ಬ ನಾಯಕಿ ವಿಜಯಶ್ರೀ ಕಲಬುರ್ಗಿ ಲವಲವಿಕೆ ತುಂಬಿದ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ, ಅಚ್ಚರಿಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ನಟ ಬಲ ರಾಜವಾಡಿ ಗಮನ ಸೆಳೆಯುತ್ತಾರೆ, ವಿಶೇಷವಾಗಿ ಕಿಚ್ಚ ಸುದೀಪ್ ಅವರ ಕಂಠದಲ್ಲಿ ಮೂಡಿಬಂದಿರುವ ಹಾಡು ಇಷ್ಟವಾಗುತ್ತದೆ, ಸುದರ್ಶನ ಆರ್ಟ್ಸ್ ಬ್ಯಾನರ್ ಅಡಿ ಈ ಚಿತ್ರವನ್ನು ಜತಿನ್ ಪಟೇಲ್ ಅವರು ನಿರ್ಮಾಣ ಮಾಡಿದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿರುವ ಕಿರಣ್ ಎಸ್. ಸೂರ್ಯ ನಿರ್ದೇಶನ ಕಾರ್ಯವನ್ನೂ ನಿಭಾಯಿಸಿದ್ದಾರೆ. ☯


## ವರದಿಗಾರರು ಬೇಕಾಗಿದ್ದಾರೆ

''ಪೊಲೀಸ್ ನ್ಯೂಸ್'' ಪತ್ರಿಕೆಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ವರದಿಗಾರರಾಗಿ ಕೆಲಸ ಮಾಡಲು ಇಚ್ಛಿಸುವವರು ತಮ್ಮ ಭಾವಚಿತ್ರ ಸಮೇತ ತಮ್ಮ ಬಗ್ಗೆ ವಿವರಿಸಿ ಮತ್ತು ಒಂದು ಸುದ್ದಿಯನ್ನು ಬರೆದು ಕಳುಹಿಸಿ ಕೊಡಿ.

**ವಿವರ ಕಳುಹಿಸುವ ವಿಧಾನ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

080-23588510

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 27.10.2024



# ಭೈರತಿ ರಣಗಲ್ ಟೀಸರ್‌ನಲ್ಲೇ ಕುತೂಹಲ

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಶ್ರೀಮತಿ ಗೀತಾ ಶಿವರಾಜಕುಮಾರ್ ಅವರು ನಿರ್ಮಿಸಿರುವ ಬಹುನಿರೀಕ್ಷಿತ ಚಿತ್ರ ಭೈರತಿ ರಣಗಲ್. ಮಫ್ತಿ ಖ್ಯಾತಿಯ ನರ್ತನ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಕರುನಾಡ ಚಕ್ರವರ್ತಿ ಶಿವರಾಜಕುಮಾರ್ ಅವರು ನಾಯಕನಾಗಿ ನಟಿಸಿದ್ದಾರೆ. ಬಹು ನಿರೀಕ್ಷಿತ ಭೈರತಿ ರಣಗಲ್ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿರುವ ಈ ಟೀಸರ್ ಸಿನಿರಸಿಕರಲ್ಲಿ ಸಾಕಷ್ಟು ಕುತೂಹಲ ನಿರೀಕ್ಷೆಗಳನ್ನು ಹುಟ್ಟು ಹಾಕಿದ್ದು, ಶಿವಣ್ಣ ಅವರ ಲುಕ್‌ಗೆ ಅವರ ಅಭಿಮಾನಿಗಳು ಫಿದಾ ಆಗಿದ್ದಾರೆ. ಈಗಾಗಲೇ ಟೈಟಲ್ ಸಾಂಗ್ ಹಾಗೂ ಟೀಸರ್ ಮೂಲಕ ಜನರ ಮನಸಿಗೆ ಹತ್ತಿರವಾಗಿರುವ ಭೈರತಿ ರಣಗಲ್ ಚಿತ್ರವು ನವೆಂಬರ್ 15ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಅದಕ್ಕೂ ಮುನ್ನ ಚಿತ್ರದ ಟ್ರೈಲರ್ ಬಿಡುಗಡೆಯಾಗಲಿದೆ. ನರ್ತನ್ ಹಾಗೂ ಶಿವಣ್ಣ ಅವರ ಕಾಂಬಿನೇಶನ್‌ನಲ್ಲಿ ಬಂದಿದ್ದ ಮಫ್ತಿ ಚಿತ್ರದ ಪ್ರೀಕ್ವೆಲ್ ಆಗಿರುವ ಭೈರತಿ ರಣಗಲ್ ಚಿತ್ರವು ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ.

ಭೈರತಿ ರಣಗಲ್ ಹಿಂದಿನ ಕಥೆ ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ನರ್ತನ್, ಮಫ್ತಿ ಚಿತ್ರವನ್ನು ಮಾಡುವಾಗಲೇ, ಭೈರತಿ ರಣಗಲ್ ಪಾತ್ರದ ತೂಕ ಹೆಚ್ಚಿತ್ತು. ಚಿತ್ರ ನೋಡಿದಾಗ ಜನರಿಗೆ ಅದೇಕೋ ಸಾಕಾಗಲಿಲ್ಲ. ಏಕೆಂದರೆ, ಶಿವಣ್ಣ ಅವರ ಪಾತ್ರ ಇಂಟರ್ ವೆಲ್ ನಂತರ ಬರುತ್ತದೆ. ತುಂಬಾ ವ್ಯಾಲ್ಯೂ ಇರುವ ಈ ಪಾತ್ರವನ್ನು ಇಷ್ಟಕ್ಕೇ ಮುಗಿಸಬಾರದು, ಇದರ ಹಿನ್ನೆಲೆಯನ್ನಿಟ್ಟುಕೊಂಡು ಏನಾದರೂ ಬರೆಯಬೇಕು ಎಂದುಕೊಂಡಾಗಲೇ ಭೈರತಿ ರಣಗಲ್ ಹಿಂದಿನ ಕಥೆ ಸೃಷ್ಟಿಯಾಯಿತು. ಪೆನ್ ಹಿಡಿದು ಕೂತಾಗ ತುಂಬಾ ಸಲೀಸಾಗಿ ಕಥೆ ಬೆಳೆಯುತ್ತ ಹೋಯಿತು. ಭೈರತಿ ರಣಗಲ್ ಒಬ್ಬ ಗ್ಯಾಂಗ್‌ಸ್ಟರ್ ಆಗಿದ್ದು ಹೇಗೆ? ಅತ ಸದಾ ಆ ಕಪ್ಪು ಬಟ್ಟೆಯನ್ನೇ ಯಾಕೆ ಹಾಕುತ್ತಾರೆ ಇದನ್ನೆಲ್ಲ ಇಟ್ಟುಕೊಂಡು ಚಿತ್ರದ ಕಥೆ ಹೆಣೆಯುತ್ತ ಹೋದಂತೆ ಮತ್ತೊಂದು ಚರಿತ್ರೆಯ ಉಗಮವಾಯಿತು. ಹೀಗೆ ರಚಿಸಿದ ಕಥೆಯನ್ನು ಶಿವಣ್ಣ ಅವರ ಬಳಿ ಹೇಳಿದಾಗ, ಅವರು ಕೂಡ ತುಂಬಾ ಇಷ್ಟಪಟ್ಟರು. ಶಿವಣ್ಣ ಹಾಗೂ ಗೀತಕ್ಕ ಬೇರೇನೂ ಕೇಳದೆ, ಚಿತ್ರವನ್ನು ಕಂಟಿನ್ಯೂ ಮಾಡಲು ಹೇಳಿದರು, ಈಗ ಚಿತ್ರ ಬಿಡುಗಡೆಗೆ ಸಿದ್ದವಾಗಿದೆ, ಮೊನ್ನೆಯಷ್ಟೇ ಟೀಸರ ಬಿಡುಗಡೆ ಮಾಡಿದ್ದೇವೆ, ಟೀಸರ್‌ಗೆ ಎಲ್ಲರಿಂದಲೂ ಪ್ರಶಂಸೆ ವ್ಯಕ್ತವಾಗಿದೆ. ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ವೀಕ್ಷಣೆಯಾಗಿದೆ ಎಂದು ವಿವರಿಸಿದರು.

ಈ ಚಿತ್ರದಲ್ಲಿ ಶಿವರಾಜಕುಮಾರ್ ಅವರ ಜೊತೆ ನಾಯಕಿಯಾಗಿ ನಟ ರುಕ್ಮಿಣಿ ವಸಂತ್ ಅವರು ಅಭಿನಯಿಸಿದ್ದಾರೆ. ಉಳಿದಂತೆ ಅವಿನಾಶ್, ದೇವರಾಜ್, ಛಾಯಾಸಿಂಗ್, ಬಾಬು ಹಿರಣ್ಣಯ್ಯ, ಮಧು ಗುರುಸ್ವಾಮಿ, ಮತ್ತು ಗೋಪಾಲಕೃಷ್ಣ ದೇಶಪಾಂಡೆ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಖಳನಾಯಕನಾಗಿ ರಾಹುಲ್ ಬೋಸ್ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ರವಿ ಬಸ್ರೂರ್ ಅವರ ಸಂಗೀತ ಸಂಯೋಜನೆ, ನವೀನ್‌ಕುಮಾರ್ ಅವರ ಛಾಯಾಗ್ರಹಣ, ಆಕಾಶ್ ಹಿರೇಮಠ ಅವರ ಸಂಕಲನ, ಗುಣ ಅವರ ಕಲಾನಿರ್ದೇಶನ ಚೇತನ್ ಡಿಸೋಜಾ ಮತ್ತು ದಿಲೀಪ್ ಸುಬ್ರಮಣ್ಯ ಅವರ ಸಾಹಸ ಸಂಯೋಜನೆ ಭೈರತಿ ರಣಗಲ್ ಚಿತ್ರಕ್ಕಿದೆ. ☯



# ಸ್ಟೈಲೀಶ್ ಆಗಿ ನಿಶ್ವಿಕಾ ನಾಯ್ಡು

ಸ್ಯಾಂಡಲ್‌ವುಡ್ ನಟಿ ನಿಶ್ವಿಕಾ ನಾಯ್ಡು ಅವರು ಸದಾ ಒಂದಲ್ಲಾ ಒಂದು ಫೋಟೋಶೂಟ್ ಮೂಲಕ ಗಮನ ಸೆಳೆಯುತ್ತಾರೆ. ಇದೀಗ ಹೊಸ ಫೋಟೋಶೂಟ್‌ನಲ್ಲಿ ನಿಶ್ವಿಕಾ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ. ಸ್ಟೈಲೀಶ್ ಆಗಿ ಸೀರೆಯುಟ್ಟು ಹಾಟ್ ಆಗಿ ನಿಶ್ವಿಕಾ ಕಾಣಿಸಿಕೊಂಡಿದ್ದಾರೆ. ಕಪ್ಪು ಬಣ್ಣದ ಸೀರೆಯಲ್ಲಿ ನಟಿ ಮಿಂಚಿದ್ದಾರೆ. ಹೇರ್ ಸ್ಟೈಲ್‌ನಲ್ಲಿ ಮಿಂಚುತ್ತಾ ವಿವಿಧ ಭಂಗಿಯಲ್ಲಿ ನಟಿ ಪೋಸ್ ನೀಡಿದ್ದಾರೆ. ನಟಿಯ ಮುದ್ದಾದ ನಗುವಿಗೆ ಪಡ್ಡೆಹುಡುಗರು ಫಿದಾ ಆಗಿದ್ದಾರೆ.

ಇನ್ನೂ 2018ರಲ್ಲಿ 'ಅಮ್ಮ ಐ ಲವ್ ಯೂ' ಚಿತ್ರದ ಮೂಲಕ ನಿಶ್ವಿಕಾ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು. ಚಿರಂಜೀವಿ ಸರ್ಜಾಗೆ ನಾಯಕಿಯಾಗಿ ನಟಿಸಿದರು. ವಾಸು ನಾನು ಪಕ್ಕಾ ಕಮರ್ಷಿಯಲ್, ಪಡ್ಡೆಹುಲಿ, ಜೆಂಟಲ್‌ಮ್ಯಾನ್, ರಾಮರ್ಜುನ, ಸಖತ್, ಗಾಳಿಪಟ-2 ಸೇರಿದಂತೆ ಹಲವು ಸಿನಿಮಾಗಳಲ್ಲಿ ನಿಶ್ವಿಕಾ ನಾಯಕಿಯಾಗಿ ನಟಿಸಿದರು. ಈ ವರ್ಷ ತೆರೆಕಂಡ 'ಕರಟಕ ದಮನಕ' ಸಿನಿಮಾದಲ್ಲಿ 'ಹಿತ್ತಲಕ ಕರಿಬ್ಯಾಡ ಮಾವ' ಹಾಡಿಗೆ ಖ್ಯಾತ ನಟ ಪ್ರಭುದೇವ ಜೊತೆ ನಿಶ್ವಿಕಾ ಹೆಜ್ಜೆ ಹಾಕಿದರು. ಈ ಸಾಂಗ್ ಸೂಪರ್ ಹಿಟ್ ಆಗಿತ್ತು. ಈ ಚಿತ್ರಕ್ಕೆ ಯೋಗರಾಜ್ ಭಟ್ ನಿರ್ದೇಶನ ಮಾಡಿದರು. ಇದರ ಜೊತೆಗೆ ತೆಲುಗಿನಲ್ಲೂ ನಟಿಗೆ ಉತ್ತಮ ಅವಕಾಶಗಳು ಅರಸಿ ಬರುತ್ತಿವೆ. ಉತ್ತಮ ಕಥೆಗಾಗಿ ನಿಶ್ವಿಕಾ ಎದುರು ನೋಡ್ತಿದ್ದಾರೆ. ಸೂಕ್ತ ಕಥೆ ಸಿಕ್ಕಿದ್ದಲ್ಲಿ ನಟಿ ಟಾಲಿವುಡ್‌ಗೂ ಪಾದಾರ್ಪಣೆ ಮಾಡುತ್ತಾರೆ. ಈ ವರ್ಷ 'ಮಹಾನಟಿ' ಎಂಬ ಶೋನಲ್ಲಿ ಪ್ರೇಮಾ, ತರುಣ್ ಸುಧೀರ್, ರಮೇಶ್ ಅರವಿಂದ್ ಜೊತೆ ನಿಶ್ವಿಕಾ ಜಡ್ಜ್ ಆಗಿ ಕಾಣಿಸಿಕೊಂಡಿದ್ದರು. ☯

# ಹಾರರ್ ಥ್ರಿಲ್ಲರ್ ಚಿತ್ರ 'ನಾ ನಿನ್ನ ಬಿಡಲಾರೆ'



ಗುಲ್ಬರ್ಗ ಮೂಲದ ಅಂಬಾಲಿ ಭಾರತಿ ಅವರು ನಾಯಕಿಯಾಗಿ ನಟಿಸಿರುವ ಚಿತ್ರ ನಾ ನಿನ್ನ ಬಿಡಲಾರೆ. ಕಮಲ ಉಮಾ ಭಾರತಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಶ್ರೀಮತಿ ಭಾರತಿ ಬಾಳಿ ಅವರು ನಿರ್ಮಾಣ ಮಾಡಿರುವ ನಾನಿನ್ನ ಬಿಡಲಾರೆ ಎನ್ನುವ ಟೈಟಲ್‌ಗೆ ದೊಡ್ಡ ಇತಿಹಾಸವೇ ಇದೆ. ಅಂದು ಅನಂತ್ ನಾಗ್ ಲಕ್ಷ್ಮಿ ಇಬ್ಬರ ಕಾಂಬಿನೇಷನ್ ನಲ್ಲಿ ಮೂಡಿಬಂದಿದ್ದ ಎವರ್ ಗ್ರೀನ್ ಚಿತ್ರವಿದು. ಇದೀಗ ಅದೇ ಟೈಟಲ್ ಇಟ್ಟುಕೊಂಡು, ಈಗಿನ ಕಾಲಕ್ಕೆ ತಕ್ಕಂತೆ, ಸಸ್ಪೆನ್ಸ್, ಥ್ರಿಲ್ಲರ್ ಕಂಟೆಂಟ್ ಮಾಡಿಕೊಂಡಿರುವ ಹೊಸ ತಂಡವೊಂದು, ಹೊಸ ಆಯಾಮದಲ್ಲಿ ಕನ್ನಡ ಪ್ರೇಕ್ಷಕರ ಮುಂದೆ ಬರ್ತಿದೆ.

ಈಗಾಗಲೇ ತನ್ನ ಟೀಸರ್‌ನಿಂದಲೇ ಕುತೂಹಲ ಮೂಡಿಸಿದ್ದ ನಾನಿನ್ನ ಬಿಡಲಾರೆ ಚಿತ್ರತಂಡ ಸಿಂಗಲ್ ಟೀಸರ್‌ನಿಂದ್ಲೇ ನಿರೀಕ್ಷೆ ಹುಟ್ಟಿಸಿತ್ತು. ಅದ್ರಂತೆ ಇದೀಗ ಪ್ರೇಕ್ಷಕರೆದುರಿಗೆ ಬರೋದಕ್ಕೆ ರಿಲೀಸ್ ದಿನಾಂಕ ಕೂಡ ನಿಗದಿ ಮಾಡಿದೆ. ಹೌದು ಇದೇ ನವೆಂಬರ್ 29ಕ್ಕೆ ನಾನಿನ್ನ ಬಿಡಲಾರೆ ಚಿತ್ರ ಪ್ರೇಕ್ಷಕರೆದುರಿಗೆ ಬರ್ತಿದೆ. ಲೈಲಾಕ್ ಎಂಟರ್‌ಟೈನ್ಮೆಂಟ್ ಮೂಲಕ ಹೇಮಂತ್ ಅವರು ಈ ಚಿತ್ರವನ್ನ ರಾಜ್ಯದಾದ್ಯಂತ ರಿಲೀಸ್ ಮಾಡುತ್ತಿದ್ದಾರೆ. ಅಂಬಾಲಿ ಭಾರತಿ ಅವರು ನಾಯಕಿಯಾಗಿ ನಟಿಸಿರುವ ನಾ ನಿನ್ನ ಬಿಡಲಾರೆ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆಗಳನ್ನು ಬರೆದು ಇಥೆ ಮೊದಲಬಾರಿಗೆ ನವೀನ್ ಜಿ.ಎಸ್. ಅವರು ನಿರ್ದೇಶನ ಮಾಡಿದ್ದಾರೆ. ವೀರೇಶ್ ಎಸ್. ಅವರ ಛಾಯಾಗ್ರಹಣ, ಎಮ್.ಎಸ್.ತ್ಯಾಗರಾಜು ಅವರ ಸಂಗೀತ ನಿರ್ದೇಶನವಿರೋ ಈ ಚಿತ್ರಕ್ಕೆ ದೀಪಕ್ ಜಿ.ಎಸ್. ಅವರಸಂಕಲನವಿದೆ.

ನಿರ್ಮಾಪಕಿ ಅಂಬಾಲಿ ಭಾರತಿ ಅವರೇ ಚಿತ್ರದ ನಾಯಕಿಯಾಗಿಯೂ ಸಹ ಕಾಣಿಸಿಕೊಂಡಿದ್ದಾರೆ. ಅವರ ಜೊತೆಯಾಗಿ ಪಂಚಿ, ಸೀರುಂಡೆ ರಘು, ಕೆ.ಎಸ್. ಶ್ರೀಧರ್, ಮಹಂತೇಶ್, ಶ್ರೀನಿವಾಸ್ ಪ್ರಭು, ಹರಿಣಿ, ಲಕ್ಷ್ಮಿ ಸಿದ್ದಯ್ಯ,ಮಂಜುಳಾ ರೆಡ್ಡಿ ಮುಂತಾದವರು ಮುಖ್ಯಭೂಮಿಕೆಯಲ್ಲಿದ್ದಾರೆ. ಟೈಟಲ್, ಪೋಸ್ಟರ್, ಟೀಸರ್‌ನಿಂದ್ಲೇ ಕನ್ನಡ ಸಿನಿಪ್ರಿಯರಲ್ಲಿ ಕ್ಯೂರಿಯಾಸಿಟಿ ಕ್ರಿಯೇಟ್ ಮಾಡಿರೋ ನಾನಿನ್ನ ಬಿಡಲಾರೆ ಚಿತ್ರತಂಡ ಇಲ್ಲಿಂದ ಪ್ರಚಾರ ಕಾರ್ಯವನ್ನು ಶುರು ಮಾಡಿದ್ದು, ಸದ್ಯದಲ್ಲೇ ಎರಡು ಹಾಡು ಹಾಗೂ ಥಿಯೇಟರಿಕಲ್ ಟ್ರೈಲರನ್ನು ಬಿಡುಗಡೆ ಮಾಡೋ ಯೋಜನೆ ಹಾಕಿಕೊಂಡಿದೆ. ☯

Vol. 40 No. 21 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com